ಸಂಪುಟ: 21, ಸಂಚಿಕೆ: 127, ಪುಟಗಳು: 8, ಶುಕ್ರವಾರ, 16 ಫೆಬ್ರವರಿ 2024 RNI NO. KARKAN/2002/08054
epaper: www.sanjemugilu.com

ಸುದ್ದಿಗಳ ಹೊನಲು

# ಸಂಜೆ ಮುಗಿಲು

ಕನ್ನಡ ಪ್ರಾದೇಶಿಕ ಸಂಜೆ ದಿನಪತ್ರಿಕೆ

ಬೆಂಗಳೂರು। ಬೆಂಗಳೂರು ಗ್ರಾಮಾಂತರ। ಕೋಲಾರ। ಚಿಕ್ಕಬಳ್ಳಾಪುರ। ರಾಮನಗರ। ಮಂಡ್ಯ। ಮೈಸೂರು। ಚಾಮರಾಜನಗರ



ವೇಣು ಸಾರಥ್ಯದಲ್ಲಿ...

**ಸುಭಾಷಿತ**

ಸ್ವಲ್ಪ ಉಳ್ಳವನು ಬಡವನಲ್ಲ; ಇನ್ನೂ ಬೇಕೆನ್ನುವವನು ಬಡವ

। ಸೆನೆಕಾ

## ಪಂಚಾಂಗ

(ಶುಕ್ರವಾರ 16, ಫೆಬ್ರವರಿ -2024)

- ಶೋಭಕೃತ್ ಸಂವತ್ಸರ, ಶಿಶಿರ ಋತು
- ಉತ್ತರಾಯಣ, ಮಾಘ ಮಾಸ
- ಶುಕ್ಲ ಪಕ್ಷ, ಬಿದಿಗೆ,
- ಶತಭಿಷಾ ನಕ್ಷತ್ರ
- ರಾಹುಕಾಲ - 10:47 AM -12:28 PM
- ಗುಳಿಕಕಾಲ - 07:56 AM - 09:27 AM
- ಯಮಗಂಡಕಾಲ - 03:29 PM - 04:59 PM

**ಉದ್ಯೋಗ, ಉದ್ಯಮ ಅವಕಾಶ ಸೃಷ್ಟಿಗೆ ರಾಜ್ಯ ಕೌಶಲ್ಯ ನೀತಿ**

**ಬಡ್ಡಿ ರಹಿತ ಅಲ್ಪಾವಧಿ ಸಾಲವನ್ನು 3 ಲಕ್ಷದಿಂದ 5 ಲಕ್ಷಕ್ಕೆ ಏರಿಕೆ**

**36 ಲಕ್ಷ ರೈತರಿಗೆ 27 ಸಾವಿರ ಕೋಟಿ ಸಾಲ ವಿತರಣೆ ಗುರಿ**

**ಜಿಲ್ಲಾ ಕೇಂದ್ರಗಳಲ್ಲಿ 100 ಸಂಖ್ಯಾಬಲದ 75 ಬಾಲಕ / ಬಾಲಕಿಯರ ವಸತಿ ನಿಲಯ**

## ಹೊಚ್ಚಹೊಸ ಲೆದರ್ ಬ್ಯಾಗಲ್ಲಿ ಬಜೆಟ್ ಪುಸ್ತಕ ಇಟ್ಟುಕೊಂಡು ಆಗಮಿಸಿದ ಸಿಎಂ

# ಗ್ಯಾರಂಟಿಯಿಂದ ಕುಟುಂಬಕ್ಕೆ 50 ಸಾವಿರ

**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ದಾಖಲೆಯ 15ನೇ ಬಾರಿ ಬಜೆಟ್ ಮಂಡಿಸಲು ವಿಧಾನ ಸೌಧಕ್ಕೆ ಆಗಮಿಸಿದರು. ಇದಕ್ಕೂ ಮೊದಲು ರಾಜ್ಯ ಆರ್ಥಿಕ ಇಲಾಖೆ ಅಧಿಕಾರಿಗಳು 2024-2025 ಸಾಲಿನ ಬಜೆಟ್ ಪುಸ್ತಕವನ್ನು ಕಾವೇರಿ ನಿವಾಸದ ಬಳಿ ಮುಖ್ಯಮಂತ್ರಿಯವರಿಗೆ ಹಸ್ತಾಂತರಿಸಿದರು. ತಮ್ಮ ಸಂಪುಟ ಕೆಲ ಸಹೋದ್ಯೋಗಿಗಳೊಂದಿಗೆ ಅವರು ಮುಗುಳ್ನಗುತ್ತಾ ಸದನಕ್ಕೆ ಆಗಮಿಸುತ್ತಿರುವುದನ್ನು ದೃಶ್ಯಗಳಲ್ಲಿ ನೋಡಬಹುದು. ಒಳಗೆ ಪ್ರವೇಶಿಸುವ ಮೊದಲು ಅವರ ಬಜೆಟ್ ಪುಸ್ತಕ ಹೊತ್ತು ಮಿರಮಿರ ಮಿಂಚುತ್ತಿದ್ದ ಹೊಚ್ಚ ಹೊಸ ಲೆದರ್ ಬ್ಯಾಗನ್ನು ಮಾಧ್ಯಮದವರಿಗೆ ತೋರಿಸಿದರು. ಸಿದ್ದರಾಮಯ್ಯ ಜೊತೆ ಹೆಜ್ಜೆ ಹಾಕುತ್ತಿರುವ ಬಸವರಾಜ ರಾಯರೆಡ್ಡಿ ಅವರನ್ನು ವೀಕ್ಷಕರು ಗಮನಿಸಬೇಕು. ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರರಾಗಿರುವ ರಾಯರೆಡ್ಡಿ ಬಜೆಟ್ ತಯಾರಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ್ದಾರೆ ಎಂದು ಹೇಳಲಾಗಿದೆ.

ಗ್ಯಾರಂಟಿ ಯೋಜನೆಗಳ ಜಾರಿಗಾಗಿ ಇಡೀ ಜಗತ್ತು ನಮ್ಮತ್ತ ಮೆಚ್ಚುಗೆಯ ನೋಟ ಬೀರಿದೆ ಎಂದು ಸಿಎಂ ಸಿದ್ದರಾಮಯ್ಯ ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ.

ತಮ್ಮ ಬಜೆಟ್ ಭಾಷಣದಲ್ಲಿ ಸಿಎಂ, ಅನ್ನಭಾಗ್ಯ ಯೋಜನೆಗಳ ಮೂಲಕ ಕೋಟ್ಯಂತರ ಜನರ ಕೈಗೆ ಹಂಚಿಕೆ ಮಾಡಲಾಗುತ್ತಿದೆ. ಈ ಗ್ಯಾರಂಟಿ ಯೋಜನೆಗಳ ಮೂಲಕ ರಾಜ್ಯದ ಪ್ರತಿ ಕುಟುಂಬಕ್ಕೆ ವಾರ್ಷಿಕ 50,000 ದಿಂದ 55,000 ರೂ. ಗಳನ್ನು ಒದಗಿಸಲಾಗುತ್ತಿದೆ ಎಂದು ತಿಳಿಸಿದರು.

ಪುಟ 2



## ರಾಜ್ಯ ರಾಜಧಾನಿಗೆ ಬಂಪರ್

**ಬೆಂಗಳೂರು:** ರಾಜ್ಯ ರಾಜಧಾನಿಗೆ ಕರ್ನಾಟಕ ಬಜೆಟ್‌ನಲ್ಲಿ ಭರ್ಜರಿ ಬಹುಮಾನವೇ ದೊರೆತಿದೆ. ಬೆಂಗಳೂರನ್ನು ಆಧರಿಸಿ ಹಲವು ಯೋಜನೆಗಳನ್ನು ಘೋಷಣೆ ಮಾಡಲಾಗಿದೆ. ನಮ್ಮ ಮೆಟ್ರೋ, ಬಿಎಂಟಿಸಿ ಮತ್ತಿತರ ಯೋಜನೆಗಳಿಗೆ ಬಲ ತುಂಬುವ ನಿಟ್ಟಿನಲ್ಲಿ ಘೋಷಿಸಲಾದ ಯೋಜನೆಗಳ ವಿವರ ಇಲ್ಲಿದೆ.

ಪುಟ 2

## ವಕ್ಫ್ ಆಸ್ತಿ ಸಂರಕ್ಷಣೆಗೆ 100 ಕೋಟಿ ರೂ. ಘೋಷಣೆ

**ಬೆಂಗಳೂರು:** ಕರ್ನಾಟಕದ ಮಾದರಿ ಬಜೆಟ್‌ನಲ್ಲಿ ಸಿಎಂ ಸಿದ್ದರಾಮಯ್ಯ ರಾಜ್ಯದ ವಕ್ಫ್ ಆಸ್ತಿ ಸಂರಕ್ಷಣೆಗೆ 100 ಕೋಟಿ ರೂ. ಹಾಗೂ ಮಂಗಳೂರಿನ ಹಜ್ ಭವನ ನಿರ್ಮಾಣಕ್ಕೆ 10 ಕೋಟಿ ರೂ. ಅನುದಾನ ಘೋಷಣೆ ಮಾಡಿದ್ದಾರೆ.

2024ನೇ ಸಾಲಿನ ಪೂರ್ಣಾವಧಿ ಬಜೆಟ್‌ನಲ್ಲಿ ಸಿಎಂ ಸಿದ್ದರಾಮಯ್ಯ, ಅಲ್ಪಸಂಖ್ಯಾತರು ಹಾಗೂ ಕ್ರಿಶ್ಚಿಯನ್ ಸಮುಯದಾಯಗಳ ಅಭಿವೃದ್ಧಿಗೆ ಬಂಪರ್ ಕೊಡುಗೆ ಘೋಷಣೆ ಮಾಡಿದ್ದಾರೆ. ಆಗದು ಎಂದು ಕೈಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದೆ ಎಂಬ ಬಂಗಾರದ ಮನುಷ್ಯ ಸಿನಿಮಾ ಗೀತೆಯೊಂದಿಗೆ ಬಜೆಟ್ ಆರಂಭಿಸಿದ ಸಿಎಂ ವಿವಿಧ ಇಲಾಖೆಗಳಿಗೆ ಕೊಡುಗೆ ನೀಡಿದ್ದಾರೆ.

ಮಹಿಳಾ ಸ್ವಸಹಾಯ ಗುಂಪುಗಳಿಗೆ 10 ಕೋಟಿ ರೂ., ರಾಜ್ಯದ ವಕ್ಫ್ ಆಸ್ತಿ ಸಂರಕ್ಷಣೆಗೆ 100 ಕೋಟಿ ರೂ., ಕ್ರಿಶ್ಚಿಯನ್ ಸಮುದಾಯದ ಅಭಿವೃದ್ಧಿಗೆ 200 ಕೋಟಿ ರೂ., ಜೈನರ ಧಾರ್ಮಿಕ ಸ್ಥಳಗಳ ಅಭಿವೃದ್ಧಿಗೆ 50 ಕೋಟಿ ರೂ., ಬೀದರ್ ಶ್ರೀನಾನಕ್ ಗುರುದ್ವಾರ ಅಭಿವೃದ್ಧಿಗೆ 1 ಕೋಟಿ ರೂ. ಘೋಷಣೆ ಮಾಡಿದ್ದಾರೆ. ಅಲ್ಲದೇ ಅಲ್ಪಸಂಖ್ಯಾತ ಸಮುದಾಯಗಳಲ್ಲಿ ಶಿಕ್ಷಣಕ್ಕೆ



ಪ್ರಾಮುಖ್ಯತೆ ನೀಡುವ ಮೂಲಕ ಅವರ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣಕ್ಕಾಗಿ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. 50 ಸಂಖ್ಯಾಬಲವುಳ್ಳ 50 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗುವುದು. 100 ಸಂಖ್ಯಾಬಲವುಳ್ಳ 100 ಮೆಟ್ರಿಕ್, ಬಾಲಕ/ಬಾಲಕಿಯರ ಪ್ರಾರಂಭಿಸಲಾಗುವುದು. ನಂತರದ ವಿದ್ಯಾರ್ಥಿನಿಲಯಗಳನ್ನು, 100 ಹೊಸ ಮೌಲಾನಾ ಆಜಾದ್ ಶಾಲೆಗಳನ್ನು ತೆರೆಯಲಾಗುವುದು. ಸ್ವಂತ ಕಟ್ಟಡವನ್ನು ಹೊಂದಿರುವ 25 ಶಾಲೆಗಳಲ್ಲಿ ಪದವಿ ಪೂರ್ವ ಶಿಕ್ಷಣವನ್ನು ಪ್ರಾರಂಭಿಸುವುದಾಗಿ ಘೋಷಿಸಿದ್ದಾರೆ.

## ಸಿದ್ದು ಭಾಷಣಕ್ಕೆ ವಿಪಕ್ಷಗಳಿಂದ ಅಡ್ಡಿ ಸಭಾತ್ಯಾಗ

**ಬೆಂಗಳೂರು:** ಸಿಎಂ ಸಿದ್ದರಾಮಯ್ಯ ಅವರು ತಮ್ಮ 15ನೇ ಬಜೆಟ್‌ಅನ್ನು ವಿಧಾನಸೌಧದಲ್ಲಿ ಮಂಡನೆ ಮಾಡ್ತಿದ್ದಾರೆ. ಬಜೆಟ್ ಭಾಷಣದಲ್ಲಿ ಸಿಎಂ ಸಿದ್ದರಾಮಯ್ಯ ಅವರು ಕೇಂದ್ರದಿಂದ ಅನ್ಯಾಯವಾಗಿದೆ ಎಂದು ಹೇಳಿದ್ದು, ಇದರ ವಿರುದ್ಧ ಬಿಜೆಪಿ ನಾಯಕರು ಆಕ್ರೋಶ ವ್ಯಕ್ತಪಡಿಸಿ ಬಜೆಟ್ ಭಾಷಣಕ್ಕೆ ಅಡ್ಡಿಪಡಿಸಿದರು. 'ಏನಿಲ್ಲ ಏನಿಲ್ಲ ಬಜೆಟ್ ನ ಲ್ಲಿ ಏನಿಲ್ಲ'

ಪುಟ 2




## ಸಂಕ್ಷಿಪ್ತ ಸುದ್ದಿ

### ಸೆಲ್ಫಿ ತಂದ ಆಪತ್ತು



**ಆಂಧ್ರಪ್ರದೇಶ:** ಸಿಂಹದ ಜತೆ ಸೆಲ್ಫಿ ತೆಗೆಯಲು ಹೋದ ವ್ಯಕ್ತಿಯೊಬ್ಬ ಪ್ರಾಣವನ್ನೇ ಕಳೆದುಕೊಂಡ ಘಟನೆ ಆಂಧ್ರಪ್ರದೇಶದ ತಿರುಪತಿಯಲ್ಲಿರುವ ಝೂಲಾಜಿಕಲ್ ಪಾರ್ಕ್‌ನಲ್ಲಿ ನಡೆದಿದೆ. ಅಮಲೇರಿದ ಸ್ಥಿತಿಯಲ್ಲಿದ್ದ ಪ್ರಹ್ಲಾದ್ ಗುಲ್ಜಾರ್ ಸಿಂಹಗಳಿಗೆ ಸೆಲ್ಫಿ ತೆಗೆದುಕೊಳ್ಳಲು ಸಿಂಹಕ್ಕೆ ಮೀಸಲಾದ ಆವರಣವನ್ನು ಪ್ರವೇಶಿಸಿದ್ದಾರೆ. ಈ ಆವರಣವು ಮೃಗಾಲಯದ ಅಧಿಕಾರಿಗಳು ಪ್ರಾಣಿಗಳಿಗೆ ಆಹಾರವನ್ನು ಒದಗಿಸುವ ಸ್ಥಳವಾಗಿತ್ತು, ಸಿಂಹದ ಬಳಿ ಹೋಗಲು

ಪುಟ 2

### ದೋಸ್ತಿ ನಿಗೂಢ ನಡೆ, ಕಾಂಗ್ರೆಸ್‌ನಲ್ಲಿ ಢವಢವ!



**ಬೆಂಗಳೂರು:** 2016ರಲ್ಲಿ ರಾಜ್ಯಸಭೆ ಚುನಾವಣೆಯಲ್ಲಿ ಅಡ್ಡಮತದಾನ ಆಗಿತ್ತು. ಆಗ ಜೆಡಿಎಸ್‌ನವರು ಕಾಂಗ್ರೆಸ್‌ಗೆ ಜೈ ಅಂದಿದ್ದರು. ಈಗ 27ಕ್ಕೆ ನಡೆಯಲಿರುವ ರಾಜ್ಯಸಭೆ ಎಲೆಕ್ಷನ್‌ನಲ್ಲಿ ಕಾಂಗ್ರೆಸ್‌ನವರು ಜೆಡಿಎಸ್‌ಗೆ ಜೈ ಅಂತಾರಂತೆ. ಇದೇ ವಿಶ್ವಾಸದಲ್ಲಿ ಮೈತ್ರಿಪಕ್ಷ 5ನೇ ಅಭ್ಯರ್ಥಿಯನ್ನ ಹಾಕಿದೆ.

ಲೋಕಸಭೆ ಎಲೆಕ್ಷನ್‌ಗೂ ಮುನ್ನ ನಡೆಯುತ್ತಿರುವ ರಾಜ್ಯಸಭೆ ಎಲೆಕ್ಷನ್ ಅಖಾಡ ರಂಗೇರಿದೆ. ಕರ್ನಾಟಕದಿಂದ ಈ ಬಾರಿ ನಾಲ್ವರು ಅಭ್ಯರ್ಥಿಗಳು ರಾಜ್ಯಸಭೆಗೆ ಸುಲಭವಾಗಿ ಆಯ್ಕೆ ಆಗೋದು ಫೈನಲ್ ಆಗಿದೆ. ಕಾಂಗ್ರೆಸ್‌ನಿಂದ ಜಿ.ಸಿ.ಚಂದ್ರಶೇಖರ್ ಗುರುವಾರ ನಾಮಪತ್ರ ಸಲ್ಲಿಸಿದ್ದಾರೆ. ನಾಸಿರ್ ಹುಸೇನ್ ಕೂಡ ನಾಮಪತ್ರ ಸಲ್ಲಿಸಿದ್ದಾರೆ. ಸಾಕಷ್ಟು ಕನ್ನಡಿಗರ ವಿರೋಧದ ಮಧ್ಯೆಯೂ ದೆಹಲಿಯ ಕಾಂಗ್ರೆಸ್ ನಾಯಕ ಅಜಯ್ ಮಾಕನ್ ಕೂಡ ನಾಮಪತ್ರ ಸಲ್ಲಿಸಿದ್ದಾರೆ. ಬಿಜೆಪಿಯಿಂದ ಮನಾರಾಯಣ ಭಾಂಡಗೆ ಅವರು ನಾಮಿನೇಷನ್ ಹಾಕಿದ್ದಾರೆ. ಆದರೆ ಅಚ್ಚರಿ ಜೊತೆ ಕುತೂಹಲ ಹುಟ್ಟಿಸಿರೋದು 5ನೇ ಅಭ್ಯರ್ಥಿಯಾಗಿ ಕುಪೇಂದ್ರ ರೆಡ್ಡಿ ಅಖಾಡಕ್ಕೆ ಇಳಿದಿರೋದು.

ಪುಟ 2



## ಡೀಪ್ ಫೇಕ್ ವಿರುದ್ಧ ಕ್ರಮಕ್ಕೆ ನಿರ್ಧಾರ

**ಬೆಂಗಳೂರು:** ರಾಜ್ಯ ಸರ್ಕಾರದ 2024-25ನೇ ಸಾಲಿನ ಬಜೆಟ್ ಮಂಡನೆ ಆಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ, ತಮ್ಮ ಬಜೆಟ್ ನಲ್ಲಿ ಡೀಪ್ ಫೇಕ್ ವಿರುದ್ಧ ಸಮರ ಸಾರಿದ್ದಾರೆ. ಡೀಪ್ ಫೇಕ್ ನಂತ ಸೈಬರ್ ಅಪರಾಧಗಳ ವಿರುದ್ಧ ಕ್ರಮಕ್ಕೆ 43 ಸಿಇಎನ್ ಪೊಲೀಸ್ ಠಾಣೆ ಉನ್ನತೀಕರಣಕ್ಕೆ ನಿರ್ಧಾರ ಮಾಡಲಾಗಿದೆ. ಈ ಮೂಲಕ ಕನ್ನಡತಿ ರಶ್ಮಿಕಾ ಮಂದಣ್ಣ ಸೇರಿದಂತೆ ಹಲವರಿಗೆ ಕಾಡುತ್ತಿದ್ದ ಡೀಪ್ ಫೇಕ್ ಭೂತಕ್ಕೆ ಕಡಿವಾಣ ಹಾಕಲು ಮುಂದಾಗಿದೆ.

ಈ ಹಿಂದೆ ನಟಿ ರಶ್ಮಿಕಾ ಮಂದಣ್ಣ ಅವರ ಡೀಪ್ ಫೇಕ್ ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿತ್ತು. ಈ ವಿಡಿಯೋ ಕುರಿತಂತೆ ಅನೇಕ ಕಲಾವಿದರು ಮತ್ತು ರಶ್ಮಿಕಾ ಅಭಿಮಾನಿಗಳು ಆತಂಕ ವ್ಯಕ್ತಪಡಿಸಿದ್ದರು. ಸ್ವತಃ ರಶ್ಮಿಕಾ ಮಂದಣ್ಣ ಅವರೇ ಪ್ರತಿಕ್ರಿಯೆ ನೀಡಿ, ಈ ಘಟನೆಯಿಂದಾಗಿ ನನಗೆ ತುಂಬಾ ನೋವಾಗಿದೆ ಎಂದು ಸೋಷಿಯಲ್ ಮೀಡಿಯಾದಲ್ಲಿ

ಪುಟ 2

## ಅಲಿಪುರ ಕಾರ್ಖಾನೆಯಲ್ಲಿ ಅಗ್ನಿ ಅವಘಡ 11 ಮಂದಿ ಸಾವು

**ದೆಹಲಿ:** ದೆಹಲಿಯ ಅಲಿಪುರದಲ್ಲಿರುವ ರಾಸಾಯನಿಕ ಗೋದಾಮುಗಳಲ್ಲಿ ಅಗ್ನಿ ಅವಘಡ ಸಂಭವಿಸಿದ್ದು, 11 ಜನರು ಸಾವನ್ನಪ್ಪಿದ್ದಾರೆ ಮತ್ತು 4 ಮಂದಿ ಗಾಯಗೊಂಡಿದ್ದಾರೆ. ಮೃತರನ್ನು ಬಾಬು ಜಗಜೀವನ್ ರಾಮ್ ಆಸ್ಪತ್ರೆಗೆ ಮತ್ತು ನಾಲ್ವರು ಗಾಯಾಳುಗಳನ್ನು ರಾಜಾ ಹರಿಶ್ಚಂದ್ರ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಮೃತರ ಗುರುತು ಇನ್ನೂ ಪತ್ತೆಯಾಗಿಲ್ಲ.

ಫೆಬ್ರವರಿ 15ರಂದು ದೆಹಲಿಯ ಅಲಿಪೋರ್‌ನಲ್ಲಿರುವ ಪೇಂಟ್ ಫ್ಯಾಕ್ಟರಿಯಲ್ಲಿ ಸಂಭವಿಸಿದ ಭಾರೀ ಬೆಂಕಿ ಕಾಣಿಸಿಕೊಂಡಿತ್ತು. ಈ ಅಪಘಾತದಲ್ಲಿ ಮೃತಪಟ್ಟವರ ಗುರುತು ಇನ್ನೂ ಪತ್ತೆಯಾಗಿಲ್ಲ. ಮೃತರ ದೇಹಗಳು ಸಂಪೂರ್ಣ ಸುಟ್ಟು ಕರಕಲಾಗಿವೆ. ಅವರನ್ನು ಗುರುತಿಸುವುದೂ ಕಷ್ಟವಾಗುತ್ತಿದೆ.

ಭಾರೀ ಬೆಂಕಿಯ ಘಟನೆಯಲ್ಲಿ 11 ಜನರು ಸಾವನ್ನಪ್ಪಿದ ಅಲಿಪುರದ ಬಣ್ಣದ ಕಾರ್ಖಾನೆಯು ಜನನಿಬಿಡ ಪ್ರದೇಶದಲ್ಲಿದೆ. ಘಟನೆ ವೇಳೆ ಕಾರ್ಖಾನೆಯೊಳಗೆ ಕೆಲಸ ನಡೆಯುತ್ತಿದ್ದು,

ಪುಟ 2



## ನ್ಯಾಷನಲ್ ಕಾನ್ಫರೆನ್ಸ್ ಇನ್ನೂ ಇಂಡಿಯಾ ಒಕ್ಕೂಟದಲ್ಲೇ ಇದೆ

**ದೆಹಲಿ:** ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಪಕ್ಷವು ಸ್ವತಂತ್ರವಾಗಿ ಸ್ಪರ್ಧಿಸಲಿದೆ ಎಂಬ ಎನ್‌ಸಿ ನಾಯಕ ಫಾರೂಕ್ ಅಬ್ದುಲ್ಲಾ ಹೇಳಿಕೆಯ ನಂತರ ನ್ಯಾಷನಲ್ ಕಾನ್ಫರೆನ್ಸ್ ನಾಯಕ ಒಮರ್ ಅಬ್ದುಲ್ಲಾ ತಮ್ಮ ಪಕ್ಷದ ನಿಲುವನ್ನು ಸ್ಪಷ್ಟಪಡಿಸಿದ್ದಾರೆ. ನ್ಯಾಷನಲ್ ಕಾನ್ಫರೆನ್ಸ್ ಇನ್ನೂ ಇಂಡಿಯಾ ಬ್ಲಾಕ್‌ನ ಭಾಗವಾಗಿದೆ. ಬಿಜೆಪಿಯನ್ನು ಸೋಲಿಸುವುದು ಈ ಬಣದ ಮುಖ್ಯ ಉದ್ದೇಶ ಎಂದು ಒಮರ್ ಅಬ್ದುಲ್ಲಾ ಹೇಳಿದರು.

ನಾವು ಇಂಡಿಯಾ ಒಕ್ಕೂಟದ ಭಾಗವಾಗಿದ್ದೇವೆ ಮತ್ತು ನಾವು ಈಗಲೂ ಇದ್ದೇವೆ. ಬೇರೆ ಯಾವುದೇ ಅರ್ಥದಲ್ಲಿ ಇದನ್ನು ತೆಗೆದುಕೊಳ್ಳುವ ಅಗತ್ಯವಿಲ್ಲ . ಬಿಜೆಪಿಯನ್ನು ಸೋಲಿಸುವುದು ಗುಂಪಿನ ಮುಖ್ಯ ಉದ್ದೇಶ. ಏಕೆಂದರೆ ಎರಡು ದೋಣಿಗಳಲ್ಲಿ ಪ್ರಯಾಣ ಮಾಡುವುದರಲ್ಲಿ ಅರ್ಥವಿಲ್ಲ ಎಂದು ಒಮರ್ ಅಬ್ದುಲ್ಲಾ ಹೇಳಿದ್ದಾರೆ.



ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್‌ನಲ್ಲಿನ ಆರು ಲೋಕಸಭಾ ಕ್ಷೇತ್ರಗಳಲ್ಲಿ ಮೂರರಲ್ಲಿ ಪಕ್ಷವು ಕಾಂಗ್ರೆಸ್ ನೊಂದಿಗೆ ಮಾತುಕತೆ ನಡೆಸುತ್ತಿದೆ ಎಂದು ಎನ್‌ಸಿ ನಾಯಕ ಹೇಳಿದ್ದಾರೆ.

''ಎನ್‌ಸಿ ಕಾರ್ಯಕರ್ತರು ಎಲ್ಲಾ ಆರು ಸ್ಥಾನಗಳಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಲು ಬಯಸುತ್ತಾರೆ ಆದರೆ ಸತ್ಯವೆಂದರೆ ಕೆಲವೊಮ್ಮೆ

ಪುಟ 2

## ಪೌರಕಾರ್ಮಿಕರಿಗೆ ರಿಲೀಫ್

### ಪಿಎಫ್ ಬಾಕಿ ಪಾವತಿಸಲು ಬಿಬಿಎಂಪಿಗೆ ಕರ್ನಾಟಕ ಹೈಕೋರ್ಟ್ ನಿರ್ದೇಶನ

**ಬೆಂಗಳೂರು:** ಪೌರಕಾರ್ಮಿಕರಿಗೆ 2011 ರ ಜನವರಿಯಿಂದ 2017 ರ ಜುಲೈ ನಡುವಣ ಅವಧಿಯಲ್ಲಿ ನೀಡಬೇಕಿದ್ದ 90,18,89,719 ಭವಿಷ್ಯ ನಿಧಿ ಬಾಕಿಯನ್ನು ಎಂಟು ವಾರಗಳಲ್ಲಿ ಪಾವತಿಸುವಂತೆ ಬಿಬಿಎಂಪಿಗೆ ಕರ್ನಾಟಕ ಹೈಕೋರ್ಟ್ ಸೂಚನೆ ನೀಡಿದೆ. ಬಿಬಿಎಂಪಿ ಪೌರಕಾರ್ಮಿಕರ ಸಂಘ ಸಲ್ಲಿಸಿದ್ದ ಅರ್ಜಿಯನ್ನು ಭಾಗಶಃ ಪುರಸ್ಕರಿಸಿ ನ್ಯಾಯಮೂರ್ತಿ ಕೆಎಸ್ ಹೇಮಲೇಖಾ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ.

ಉದ್ಯೋಗದಾತರ ಭವಿಷ್ಯ ನಿಧಿ ಮತ್ತು ವಿವಿಧ ನಿಬಂಧನೆಗಳ ಕಾಯಿದೆ, 1952 ರ ಸೆಕ್ಷನ್ 70 ಗೆ ಅನುಗುಣವಾಗಿ ಶೇ 12 ದರದಲ್ಲಿ ಸರಳ ಬಡ್ಡಿಯೊಂದಿಗೆ ಮೊತ್ತವನ್ನು ಠೇವಣಿ ಮಾಡುವಂತೆ 2017 ರ ಅಕ್ಟೋಬರ್ 26 ರಂದು ಬೆಂಗಳೂರಿನ ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರು ಆದೇಶವನ್ನು ಹೊರಡಿಸಿದ್ದರು. ಸಂಘವು ಆದೇಶದ ಅನುಷ್ಠಾನಕ್ಕೆ ನಿರ್ದೇಶನಗಳನ್ನು ಕೋರಿ ಅರ್ಜಿ ಸಲ್ಲಿಸಿತ್ತು. ಏತನ್ಮಧ್ಯೆ, ಪ್ರಾದೇಶಿಕ



ಭವಿಷ್ಯ ನಿಧಿ ಆಯುಕ್ತರ ಆದೇಶವನ್ನು ಪ್ರಶ್ನಿಸಿ ಬಿಬಿಎಂಪಿ ನ್ಯಾಯಾಲಯದ ಮೆಟ್ಟಿಲೇರಿತ್ತು.

ಇಪಿಎಫ್ ಮತ್ತು ಎಂಪಿ ಕಾಯಿದೆಯ ಸೆಕ್ಷನ್ 2(ಎಫ್) ಮತ್ತು ಎಂಪ್ಲಾಯೀಸ್ ಸ್ಟೇಟ್ ಇನ್ಶೂರೆನ್ಸ್ ಆಕ್ಟ್ 1948ರ ಸೆಕ್ಷನ್ 2(9) ಎರಡರಲ್ಲೂ 'ನೌಕರ' ವ್ಯಾಪ್ತಿಯೊಳಗೆ ಗುತ್ತಿಗೆ ಕಾರ್ಮಿಕರನ್ನು ಸೇರಿಸಿರುವುದನ್ನು ಗಮನಿಸಿ ಬಿಬಿಎಂಪಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಲಯ ವಜಾಗೊಳಿಸಿದೆ.

ಪರಿಸ್ಥಿತಿ ಹೀಗಿರುವಾಗ, ಅರ್ಜಿದಾರರು ಉಲ್ಲೇಖಿಸಿರುವಂತೆ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರು ಗ್ರ್ಯಾಚುಯಿಟಿ ಮತ್ತು ಪಿಎಫ್ ಪಡೆಯಲು ಅರ್ಹರಲ್ಲ ಎಂಬ ವಾದವನ್ನು ಒಪ್ಪಲಾಗದು. ಬೆಂಗಳೂರಿನ ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರು

ಪುಟ 2

## ಇಂದು ಗ್ರಾಮೀಣ ಭಾರತ್ ಬಂದ್

**ಬೆಂಗಳೂರು:** ದೇಶಾದ್ಯಂತ ರೈತರ ಸಾಲಮನ್ನಾ, ರೈತರು, ಕೃಷಿ ಕಾರ್ಮಿಕರಿಗೆ ಪಿಂಚಣಿ, ಕನಿಷ್ಠ ಬೆಂಬಲ ಬೆಲೆಗೆ ಕಾನೂನು ಭದ್ರತೆ ನೀಡುವುದು ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ರೈತರು ದೆಹಲಿ ಚಲೋ ನಡೆಸ್ತಿದ್ದಾರೆ. ಹರಿಯಾಣದ ಶಂಭು ಗಡಿಯಲ್ಲಿ ಠಿಕಾಣಿ ಹೂಡಿರೋ ರೈತರು ಯಾವುದೇ ಕಾರಣಕ್ಕೂ ಹಿಂದೆ ಸರಿಯೋದಿಲ್ಲ ಎಂದು ಪಟ್ಟು ಹಿಡಿದಿದ್ದಾರೆ. ರೈತರ ಮನವೊಲಿಸಲು ಕೇಂದ್ರ ಸರ್ಕಾರ ಸಭೆ ಮೇಲೆ ಸಭೆ ಮಾಡುತ್ತಾ ಕಸರತ್ತು ನಡೆಸ್ತಿದೆ. ರೈತರ ಹೋರಾಟ ತೀವ್ರ ಸ್ವರೂಪ ಪಡೆದುಕೊಂಡಿರುವ ಹೊತ್ತಲ್ಲೇ ಇಂದು ದೇಶಾದ್ಯಂತ ಗ್ರಾಮೀಣ ಬಂದ್‌ಗೆ ಕರೆ ನೀಡಲಾಗಿದೆ.

ರಾಜಕೀಯೇತರ ಸಂಘಟನೆಗಳಾದ ಸಂಯುಕ್ತ ಕಿಸಾನ್ ಮೋರ್ಚಾ ಹಾಗೂ ಕಿಸಾನ್ ಮಜ್ದೂರ್ ಮೋರ್ಚಾ ಸಂಘಟನೆಗಳು ಇಂದು ಗ್ರಾಮೀಣ ಭಾರತ್ ಬಂದ್ ಗೆ ಕರೆ ನೀಡಿವೆ. ಇಂದು ಬೆಳಗ್ಗೆ 6 ರಿಂದ ಸಂಜೆ 4ರವರೆಗೆ ಗ್ರಾಮೀಣ ಭಾರತ್ ಬಂದ್ ಕರೆ ನೀಡಲಾಗಿದೆ. ದೇಶಾದ್ಯಂತ ವಿವಿಧ ರೈತ ಸಂಘಟನೆಗಳು ರಸ್ತೆ ತಡೆ ಮೂಲಕ ಪ್ರತಿಭಟನೆ ನಡೆಸಲು ತೀರ್ಮಾನಿಸಿವೆ. ಪಂಜಾಬ್, ಹರಿಯಾಣದಲ್ಲಿ ದೊಡ್ಡ ಮಟ್ಟದಲ್ಲಿ ಹೋರಾಟ ನಡೆಯಲಿದ್ದು, ರಸ್ತೆ ಸಾರಿಗೆ ಸುಮಾರು 4 ಗಂಟೆ ಕಾಲ ಸ್ತಬ್ಧ ಆಗುವ ಸಾಧ್ಯತೆ ಇದೆ.

ಕಾಂಗ್ರೆಸ್ ಸೇರಿದಂತೆ ಹಲವು ಪಕ್ಷಗಳು ಗ್ರಾಮೀಣ



ಭಾರತ್ ಬಂದ್‌ಗೆ ಬೆಂಬಲ ನೀಡಿವೆ. ಕರ್ನಾಟಕ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಕೂಡಾ ಬಂದ್‌ಗೆ ಬೆಂಬಲಿಸಿದೆ. ಸಂಯುಕ್ತ ಕಿಸಾನ್ ಮೋರ್ಚಾ ಕೂಡಾ ಬಂದ್ ಬೆಂಬಲಿಸಿದೆ ಎಂದು ಕುರುಬೂರು ಶಾಂತಕುಮಾರ್ ಹೇಳಿದ್ದಾರೆ. ಇಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆವರೆಗೆ ರಸ್ತೆ ತಡೆ ಚಳವಳಿ ನಡೆಸಲು ಕರೆ ನೀಡಿದ್ದಾರೆ. ಇದಲ್ಲದೆ ಬೆಳಗ್ಗೆ 6ರಿಂದ ಸಂಜೆ 4ರವರೆಗೆ ಬಂದ್ ಆಚರಿಸೋಕೆ ನಿರ್ಧರಿಸಿವೆ.

ಕರ್ನಾಟಕಕ್ಕೆ ಭಾರತ್ ಬಂದ್ ಬಿಸಿ ಅಷ್ಟಾಗಿ ತಟ್ಟುವಂತೆ ಕಾಣುತ್ತಿಲ್ಲ. ಅಂಗಡಿ ಮುಂಗಟ್ಟುಗಳು ಎಂದಿನಂತೆ ತೆರೆದಿರುವ ಸಾಧ್ಯತೆ ಇದೆ. ಜನ ಜೀವನ ಬಹುತೇಕ ಸಾಮಾನ್ಯವಾಗಿರಲಿದೆ. ರಾಜ್ಯ ಬಜೆಟ್ ಕೂಡಾ ಮಂಡನೆ ಆಗುತ್ತಿದೆ. ವಿಧಾನಸೌಧದ ಕಾರ್ಯ ಕಲಾಪ ಸೇರಿದಂತೆ ರಾಜ್ಯಾದ್ಯಂತ ಸರ್ಕಾರಿ ಕಚೇರಿಗಳ ಕಾರ್ಯ ನಿರ್ವಹಣೆ ಸಾಮಾನ್ಯವಾಗಿರುವ ಸಾಧ್ಯತೆ ಇದೆ. ಶಾಲೆ, ಕಾಲೇಜ್‌ಗಳಿಗೆ ಯಾವುದೇ ರಜೆ ಘೋಷಿಸಿಲ್ಲ. ಕಾರ್ಮಿಕ ಸಂಘಟನೆಗಳು ಬಂದ್ ಕುರಿತಾಗಿ ಪ್ರತಿಕ್ರಿಯೆ ನೀಡದ ಕಾರಣ ಬಸ್ ಸಂಚಾರ ಕೂಡಾ ಎಂದಿನಂತೆ ಇರಲಿದೆ. ಮೆಟ್ರೋ ಹಾಗೂ ಭಾರತೀಯ ರೈಲ್ವೆ ಸೇವೆ ಕೂಡಾ ಕರ್ನಾಟಕ ರಾಜ್ಯಾದ್ಯಂತ ಎಂದಿನಂತೆಯೇ ಇರಲಿದೆ.

ರಾಜ್ಯದಲ್ಲಿ ಕೇಂದ್ರ ಸ್ವಾಮ್ಯದ ಸರ್ಕಾರಿ ಬ್ಯಾಂಕ್‌ಗಳು ಎಂದಿನಂತೆಯೇ ಕಾರ್ಯ ನಿರ್ವಹಿಸುತ್ತವೆ. ಸರ್ಕಾರಿ, ಖಾಸಗಿ ಬ್ಯಾಂಕ್‌ಗಳ ಕಾರ್ಯ ನಿರ್ವಹಣೆ ಸಹಜವಾಗಿ ಇರಲಿದೆ. ಪೋಸ್ಟ್ ಆಫೀಸ್ ಸೇರಿ ಕೇಂದ್ರಸರ್ಕಾರದ ಕಚೇರಿಗಳು ಎಂದಿನಂತೆ ಕಾರ್ಯನಿರ್ವಹಿಸಲಿವೆ ಎನ್ನಲಾಗಿದೆ.

ಪುಟ 2

# 23, 24ರಂದು ಶ್ರೀ ನಿಮಿಷಾಂಬ ದೇವರ ಮಾಘ ಶುದ್ಧ ಹುಣ್ಣಿಮೆ

**ಮಂಡ್ಯ:** ಶ್ರೀರಂಗಪಟ್ಟಣ ನಿಮಿಷಾಂಬ ದೇವಾಲಯದಲ್ಲಿ ಫೆಬ್ರವರಿ 23 ಮತ್ತು 24 ರಂದು ಮಾಘ ಶುದ್ಧ ಹುಣ್ಣಿಮೆಯು ಜರುಗಲಿದೆ. ಈ ಕಾರ್ಯಕ್ರಮಕ್ಕೆ ಸಕಲ ಸಿದ್ಧತೆ ನಡೆಸಿ ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ. ಕುಮಾರ ಅವರು ತಿಳಿಸಿದರು.

ಬುಧವಾರದಂದು ಜಿಲ್ಲಾಧಿಕಾರಿಗಳ ಕಛೇರಿಯ ಸಭಾಂಗಣದಲ್ಲಿ ಶ್ರೀ ಶ್ರೀರಂಗಪಟ್ಟಣದ ಗಂಜಾಂನ ಶ್ರೀ ನಿಮಿಷಾಂಬ ದೇವಾಲಯದಲ್ಲಿ 2024ನೇ ಸಾಲಿನ ಮಾಘಶುದ್ಧ ಪೌರ್ಣಮಿ ಕಾರ್ಯಕ್ರಮದ ಪೂರ್ವ ಸಿದ್ದತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಶ್ರೀ ನಿಮಿಷಾಂಬ ದೇವರ ಮಾಘ ಶುದ್ಧ ಹುಣ್ಣಿಮೆಯ ಅಂಗವಾಗಿ ಫೆಬ್ರವರಿ 23 ಹಾಗೂ 24 ಆಗಮಿಸುವ ಭಕ್ತಾದಿಗಳಿಗೆ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ, ವಿದ್ಯುತ್ ವ್ಯವಸ್ಥೆ, ವಾಹನದ ಪಾರ್ಕಿಂಗ್ ವ್ಯವಸ್ಥೆ ಮುಂತಾದ ಸೌಲಭ್ಯಗಳನ್ನು ಕಲ್ಪಿಸಿ. ಯಾವುದೇ ಅಹಿತಕರ ಘಟನೆಗಳು ಜರುಗದಂತೆ ನೋಡಿಕೊಳ್ಳಿ ಎಂದರು.



ನಿಮಿಷಾಂಬ ದೇವಸ್ಥಾನಕ್ಕೆ ಹೆಚ್ಚಿನ ಭಕ್ತಾಧಿಗಳು ಬರುವುದರಿಂದ ಹೆಚ್ಚಿನ ಜನ ಸೇರುವ ಸ್ಥಳಗಳಾದ ದೇವಸ್ಥಾನ, ಬಸ್ ನಿಲ್ದಾಣ , ವಾಹನ ಪಾರ್ಕಿಂಗ್ ಬಳಿ ಕುಡಿಯುವ ನೀರಿಗಾಗಿ ಅಗತ್ಯ ಪ್ರಮಾಣದಲ್ಲಿ ಹೆಚ್ಚುವರಿ ನಲ್ಲಿಗಳನ್ನು ತಾತ್ಕಾಲಿಕವಾಗಿ ಅಳವಡಿಸುವುದು ಹಾಗೂ ಟ್ಯಾಂಕರ್ ಮತ್ತು ಕ್ಯಾನ್ ಮೂಲಕ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುಬೇಕು ಎಂದರು.

ಶ್ರೀ ಕ್ಷೇತ್ರಕ್ಕೆ ಬರುವ ಮಹಿಳಾ ಮತ್ತು ಪುರುಷ ಭಕ್ತಾಧಿಗಳಿಗೆ ಪ್ರತ್ಯೇಕವಾಗಿ ತಾತ್ಕಾಲಿಕ ಶೌಚಾಲಯ ನಿರ್ಮಾಣ ಮಾಡಿ. ಬಸ್, ನಿಲ್ದಾಣ, ವಾಹನ ಪಾರ್ಕಿಂಗ್, ನದಿ ತೀರದ ಬಳಿ ಅಗತ್ಯವಿದ್ದ ಕಡೆ ಮುಖ್ಯವಾಗಿ ಜನ ಸೇರುವ ಕಡೆಗಳಲ್ಲಿ ತಾತ್ಕಾಲಿಕ ಶೌಚಾಲಯವನ್ನು ನಿರ್ಮಿಸಿ ಎಂದರು

ದೇವಸ್ಥಾನದ ವ್ಯಾಪ್ತಿಯ ನದಿಯಲ್ಲಿ ಪುಣ್ಯ ಸ್ನಾನ ಮಾಡಿದ ಭಕ್ತಾದಿಗಳಿಗೆ ಬಟ್ಟೆ ಬದಲಾಯಿಸಲು ಅಗತ್ಯವಿರುವ ಕಡೆ ಬಟ್ಟೆ ಬದಲಾಯಿಸುವ ಕೊಠಡಿಗಳನ್ನು ತಾತ್ಕಾಲಿಕವಾಗಿ ನಿರ್ಮಾಣ ಮಾಡಲು ಹಾಗೂ ಮುಖ್ಯವಾಗಿ ಮಹಿಳಾ ಭಕ್ತಾದಿಗಳಿಗೆ ಬಟ್ಟೆ ಬದಲಾಯಿಸಲು ಹೆಚ್ಚಿನ ಕೊಠಡಿಗಳನ್ನು ಪ್ರತ್ಯೇಕವಾಗಿ ನಿರ್ಮಾಣ ಮಾಡಬೇಕು. ಜೊತೆಗೆ ನಿರಂತರ ವಿದ್ಯುತ್ ವ್ಯವಸ್ಥೆ, ಮಹಿಳಾ ಸ್ನಾನ ಗೃಹದ ಬಳಿ ಮಹಿಳಾ ಆರಕ್ಷಕ ಸಿಬ್ಬಂದಿಗಳನ್ನು ನೇಮಿಸಬೇಕು ಎಂದು ಹೇಳಿದರು.

ಭಕ್ತಾದಿಗಳಿಗೆ ದೇವರ ದರ್ಶನಕ್ಕೆ ಮತ್ತು ದೇವಸ್ಥಾನದ ಪೂಜಾ/ಧಾರ್ಮಿಕ ಕಾರ್ಯಕ್ರಮಗಳಿಗೆ ತೊಂದರೆಯಾಗದಂತೆ ನಿರಂತರ ವಿದ್ಯುತ್ ಸರಬರಾಜು ಮಾಡಬೇಕು. ಬೀದಿ ದೀಪಗಳನ್ನು ತ್ವರಿತವಾಗಿ ದುರಸ್ಥಿಗೊಳಿಸಿ, ಅಗತ್ಯವಿರುವ ಕಡೆ ಪೋಕಸ್ ಲೈಟ್ ವ್ಯವಸ್ಥೆ ಮಾಡಿ, ಜೊತೆಗೆ ಹೆಚ್ಚುವರಿ ಜನರೇಟರ್ ವ್ಯವಸ್ಥೆ ಮಾಡಿ ಎಂದರು.

ಶ್ರೀ ನಿಮಿಷಾಂಬ ದೇವಸ್ಥಾನಕ್ಕೆ ಮೈಸೂರು, ಮಂಡ್ಯ ಮತ್ತು ಸುತ್ತಮುತ್ತಲಿನ ನಗರಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಬರುವುದರಿಂದ ಮೈಸೂರು ಮತ್ತು ಶ್ರೀರಂಗಪಟ್ಟಣದಿಂದ ದೇವಾಲಯದ ಕಡೆಗೆ ಹೆಚ್ಚುವರಿ ಸಾರಿಗೆ ವ್ಯವಸ್ಥೆ ಮಾಡಬೇಕು ಎಂದರು. ನಗರಾಭಿವೃದ್ಧಿ ಕೋಶಾಧಿಕಾರಿ ತುಷಾರಮಣಿ, ಕೆ.ಎಸ್. ಆರ್.ಟಿ.ಸಿ ವಿಭಾಗೀಯ ನಿಯಂತ್ರಣಾಧಿಕಾರಿ ನಾಗರಾಜು, ಮುಜರಾಯಿ ತಹಶಿಲ್ದಾರ್ ತಮ್ಮೇಗೌಡ, ಜಿಲ್ಲಾ ಆರೋಗ್ಯ ಅಧಿಕಾರಿ ಡಾ. ಕೆ. ಮೋಹನ್, ನಿಮಿಷಾಂಬ ದೇವಾಲಯದ ಇಓ ಸಿ.ಜಿ. ಕೃಷ?ಣ, ಪ್ರಧಾನ ಅರ್ಚಕ ಸೂರ್ಯನಾರಾಯಣ ಭಟ್, ಶ್ರೀರಂಗಪಟ್ಟಣದ ತಹಶೀಲ್ದಾರ್ ಪರಶುರಾಮ್, ಹಾಗೂ ಇನ್ನಿತರರು ಉಪಸ್ಥಿತರಿದ್ದರು.

# ಸಂವಿಧಾನದ ಮಹತ್ವನ್ನು ಪ್ರತಿಯೊಬ್ಬರೂ ತಿಳಿದುಕೊಂಡು ಅಳವಡಿಸಿಕೊಳ್ಳಬೇಕು

**ಮೈಸೂರು:** ಸಂವಿಧಾನದ ಮಹತ್ವನ್ನು ಪ್ರತಿಯೊಬ್ಬರೂ ತಿಳಿದುಕೊಂಡು, ಅಳವಡಿಸಿಕೊಳ್ಳಬೇಕು ಎಂದು ಮೈಸೂರು ಮಹಾನಗರ ಪಾಲಿಕೆಯ ಆಯುಕ್ತರಾದ ಅಶಾದ್ ಉರ್ ರೆಹಮಾನ್ ಅವರು ತಿಳಿಸಿದರು. ಇಂದು ನಗರದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಸಂವಿಧಾನ ಜಾಗೃತಿ ಜಾಥಾ ಅಂಗವಾಗಿ ಏರ್ಪಡಿಸಿದ್ದ ಸೈಕಲ್ ರ?ಯಾಲಿ ಜಾಥಾಗೆ ಚಾಲನೆ ನೀಡಿ ಅವರು ಮಾತನಾಡಿದರು. ಬಾಬಾಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನ ರಚನೆ ಮಾಡಿದರು. ಇವರು ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರಾಗಿದ್ದರು. ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಹೇಗೆ ಆಡಳಿತ ನಡೆಸಬೇಕು ಎಂಬುದನ್ನು ಸಂವಿಧಾನದಲ್ಲಿ ತಿಳಿಸಲಾಗಿದೆ. ನಾವು ಇಂದು ನೆಮ್ಮದಿಯ ಜೀವನ ನಡೆಸುತ್ತಿರುವುದು ಸಂವಿಧಾನ ನೀಡಿರುವ ಕೊಡುಗೆಯಾಗಿದೆ ಎಂದು ತಿಳಿಸಿದರು. ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ರಂಗೇಗೌಡ ಅವರು ಸಂವಿಧಾನ ಪೀಠಿಕೆಯನ್ನು ಬೋಧನೆ ಮಾಡಿದರು.

ಈ ಸಂದರ್ಭದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕರಾದ ಟಿ ಕೆ ಹರೀಶ್, ಮೈಸೂರು ಮಹಾನಗರ ಪಾಲಿಕೆಯ ಜೋನಲ್ 6 ನ ಉಪವಿಭಾಗಾಧಿಕಾರಿ ಪ್ರತಿಭಾ, ಜೋನಲ್ 1 ನ ಉಪವಿಭಾಗಾಧಿಕಾರಿ ಮಂಜುನಾಥ ರೆಡ್ಡಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.



# ಶೀಘ್ರದಲ್ಲಿ ಬೆಂಗಳೂರು-ಮೈಸೂರು ನಡುವೆ ಮೆಟ್ರೋ ಸಂಚಾರ

**ಮೈಸೂರು:** 2014ಕ್ಕಿಂತ ಮೊದಲ 10 ವರ್ಷದಲ್ಲಿ ಮೈಸೂರಿಗೆ ಒಂದು ರೈಲು ಬಂದಿಲ್ಲ, ನಾನು 11 ರೈಲು ತಂದಿದ್ದೇನೆ. ಶೀಘ್ರದಲ್ಲೇ ಮೈಸೂರು-ರಾಮೇಶ್ವರಂ ನ 12ನೇ ರೈಲು ಬರಲಿದೆ ಎಂದು ಕೊಡಗು-ಮೈಸೂರು ಸಂಸದ ಪ್ರತಾಪ್ ಸಿಂಹ ವಿಶ್ವಾಸ ವ್ಯಕ್ತಪಡಿಸಿದ್ದಾರೆ.



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಮೈಸೂರು ಕೊಡಗು ಲೋಕಸಭಾ ಚುನಾವಣಾ ಕಾರ್ಯಾಲಯ ಉದ್ಘಾಟನೆ ಮಾಡಿದ ಸಂಸದ ಪ್ರತಾಪ್ ಸಿಂಹ, ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ಬಿಎಸ್ ಯಡಿಯೂರಪ್ಪ ಸಾಕಷ್ಟು ಅನುದಾನ ನೀಡಿದ್ದಾರೆ. ಮುಂದೆ ಮೈಸೂರಿನಲ್ಲಿ ಇಂಟರ್ನ್ಯಾಷನಲ್ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣವಾಗಲಿದೆ. ಮೈಸೂರು ಬೆಂಗಳೂರು ಮೆಟ್ರೋ ಬರಲಿದೆ. ಮೈಸೂರು ಚೆನ್ನೈ ಬುಲೆಟ್ ರೈಲು ಶೀಘ್ರವಾಗಿ ಆಗಲಿದೆ ಎಂದು ಪ್ರತಾಪ್ ಸಿಂಹ ಭರವಸೆ ನೀಡಿದರು.

ಈ ವೇಳೆ ಚುನಾವಣೆಗೆ ಹೋಗಬೇಕಾದರೆ ಏನು ಮಾಡುತ್ತೇವೆ ಅಧಿಕಾರದಲ್ಲಿ ಇದ್ದಾಗ ಏನು ಮಾಡಿದ್ದೇವೆ ಎಂಬುದ ಕುರಿತು 10 ವರ್ಷದಲ್ಲಿ ನಾನು ಮಾಡಿದ ಕೆಲಸ, ತಂದ ಯೋಜನೆಗಳ ಮಾಹಿತಿಯಿರುವ ಬುಕ್‌ಲೆಟ್ ಇದಾಗಿದ್ದು, ಇದರಲ್ಲಿ ಕೇಂದ್ರದ ಡಿಪಾಲ್ಟ್ ಯೋಜನೆ ಪಟ್ಟಿ ಮಾಡಿಲ್ಲ ಎಂದರು.

ನಾನು ಮತ್ತೊಮ್ಮೆ ಜನರ ಆಶೀರ್ವಾದ ಕೇಳುತ್ತಿದ್ದೇನೆ. ನಾನೊಬ್ಬ ಸಾಮಾನ್ಯ ಕಾರ್ಯಕರ್ತ. 2014, 2019ರಲ್ಲಿ ಜನರು ನನ್ನನ್ನು ಗೆಲ್ಲಿಸಿದ್ದಾರೆ. ಸತತವಾಗಿ ಆಯ್ಕೆಯಾಗಿ ದಾಖಲೆ ಮಾಡಿದ್ದೇನೆ. ಪಕ್ಷ ತೀರ್ಮಾನ ಮಾಡಿದರೆ, ಜನರು ಆಶೀರ್ವಾದ ಮಾಡಲಿದ್ದಾರೆ ಎಂದು ಪ್ರತಾಪ್ ಸಿಂಹ ವಿಶ್ವಾಸ ವ್ಯಕ್ತಪಡಿಸಿದರು.

ಶಾಸಕ ಡಾ ಅಶ್ವಥ್ ನಾರಾಯಣ್, ಮೈಸೂರು ಜಿಲ್ಲೆಯಲ್ಲಿ ಅನುಭವಿಗಳಿದ್ದಾರೆ. ಮೋದಿ ಮೂರನೇ ಬಾರಿ ಪ್ರಧಾನಿಯಾಗಬೇಕು ಅನ್ನೋದು ಎಲ್ಲರ ಆಶಯವಾಗಿದೆ. ಮೈಸೂರು ಲೋಕಸಭಾ ಕ್ಷೇತ್ರದಲ್ಲೂ ಗೆಲ್ಲುವ ವಿಶ್ವಾಸವಿದೆ. ಮೈಸೂರಿನ ಶಾಸಕರು ಉತ್ತಮವಾಗಿ ಕೆಲಸ ಮಾಡಿದ್ದಾರೆ. ಮೈಸೂರು ಇಡೀ ವಿಶ್ವದ ಗಮನ ಸೆಳೆಯುತ್ತಿದೆ. ಸಂಸದ ಪ್ರತಾಪ್ ಸಿಂಹ ಹಿಂದಿನ ಅವಧಿಯ ಕೆಲಸದ ದಾಖಲೆ ಇಟ್ಟಿದ್ದಾರೆ. ಅದಕ್ಕಾಗಿ ಬುಕ್‌ಲೆಟ್ ಮಾಡಿಸಿದ್ದಾರೆ ಎಂದು ಡಾ ಅಶ್ವಥ್ ನಾರಾಯಣ್ ತಿಳಿಸಿದರು.

ಇನ್ನೂ ಬಿಜೆಪಿ, ಜೆಡಿಎಸ್ ಮೈತ್ರಿಯಾಗಿದ್ದು, ಕ್ಷೇತ್ರದಲ್ಲಿ ಪಕ್ಷ ಗೆಲ್ಲಿಸಲು ಕೆಲಸ ಮಾಡುವ ಜವಬ್ದಾರಿಯಿದೆ. ಮೈಸೂರು ಲೋಕಸಭಾ ಕ್ಷೇತ್ರವನ್ನು ನಿಶ್ಚಿತವಾಗಿ ನಾವು ಗೆಲ್ಲುತ್ತೇವೆ. ಮೈಸೂರು ಭಾಗದ 4 ಕ್ಷೇತ್ರಗಳು ಈ ಬಾರಿ ಬಿಜೆಪಿ ತೆಕ್ಕೆಗೆ ಬೀಳಲಿದೆ ಎಂದು ಮಾಜಿ ಸಚಿವ ಎಸ್.ಎ ರಾಮದಾಸ್ ಹೇಳಿದರು.

## ಮೂಲ ಹುಡುಕುತ ಬಂದ ಯುವತಿ..!

# ಸ್ವೀಡನ್ ಟು ಮೈಸೂರು

**ಮೈಸೂರು:** ಸ್ವೀಡನ್ ದೇಶದ ಯುವತಿಯೊರ್ವಳು ಭಾರತದಲ್ಲಿನ ತನ್ನ ಮೂಲ ಹುಡುಕುತ್ತ ಮೈಸೂರಿಗೆ ಬಂದ ಘಟನೆ ನಡೆದಿದೆ.



ಎಂಟು ವರ್ಷವಿದ್ದಾಗ ಭಾರತದಿಂದ ಸ್ವೀಡನ್‌ಗೆ ತೆರಳಿದ ಈ ಯುವತಿ ಇಂದು ಕರ್ನಾಟಕದಲ್ಲಿ ತನ್ನ ಕುಟುಂಬದ ಮೂಲವನ್ನು ಹುಡುಕಾಡುತ್ತಿದ್ದು, ಸಾರ್ವಜನಿಕರ ನೆರವಿಗೆ ಮನವಿ ಮಾಡಿದ್ದಾರೆ.

ಈ ಸಂಬಂಧ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಇಂದು ಸುದ್ದಿಗೋಷ್ಠಿ ನಡೆಸಿದ ವಕೀಲೆ ಅಂಜಲಿ ಪವಾರ್ ಮಾತನಾಡಿ ಹೇಳಿದಿಷ್ಟು..

ಜಾಲಿ ಸ್ಯಾಂಡ್ ಬರ್ಗ್( ಮೂಲ ಹೆಸರು ಜಾನು) ಎಂಬ ಯುವತಿ ಎಂಟು ವರ್ಷವಿದ್ದಾಗ 1989ರಲ್ಲಿ ಬೆಂಗಳೂರಿನ ಆಶ್ರಯ ಚಿಲ್ಡನ್ ಹೋಂ ಎಂಬ ಸಂಸ್ಥೆ ಸೇರಿ, ಬಳಿಕ ಸ್ವೀಡನ್‌ನ ಕುಟುಂಬವೊಂದು ಆಕೆಯನ್ನು ದತ್ತು ಪಡೆದುಕೊಂಡಿದ್ದು, ಈಗ ಅಲ್ಲಿಯೇ ಬೆಳೆದು ದೊಡ್ಡವಳಾದ ಯುವತಿ ಈಗ ತನ್ನ ಮೂಲ ಕುಟುಂಬದ ಹುಡುಕಾಟದಲ್ಲಿದ್ದಾರೆ.

ಜಾಲಿ ಸ್ಯಾಂಡ್‌ಬರ್ಗ್‌ಗೆ ತಮ್ಮ ಮೂಲ ಹುಡುಕುವ ಹಂಬಲ ಹೆಚ್ಚಾಗಿ ಅಗೇನ್ಸ್ಟ್ ಚೈಲ್ಡ್ ಟ್ರಾಕಿಂಗ್ ಸಂಸ್ಥೆಯನ್ನು 2017ರಲ್ಲಿ ಸಂಪರ್ಕಿಸಿದ್ದರು. ನಂತರ ಅವರಿಂದ ಕೆಲವು ಮಾಹಿತಿ ಪಡೆದುಕೊಂಡ ತಂಡ ಮೂಲ ಹುಡುಕಲು ಹೊರಟ್ಟಿತು. ಅದರಂತೆ ಜಾಲಿ ಸ್ಯಾಂಡ್‌ಬರ್ಗ್ ಮೂಲತಃ ಮೈಸೂರು ಜಿಲ್ಲೆಯ ಯಾವುದೋ ಒಂದು ಕುಟುಂಬದಲ್ಲಿ 1985ರಲ್ಲಿ ಜನಿಸಿದ್ದು, ಬಳಿಕ, ತಾಯಿ ಮಂಡ್ಯ ಬಳಿಯ ಮದ್ದೂರಿನವರಾಗಿದ್ದು, ಅವರು ಈ ಹಿಂದೆ ಮೈಸೂರಿನ ಓರ್ವರನ್ನು ವಿವಾಹವಾಗಿದ್ದರು. ತಮ್ಮ ತಂದೆಯೂ ನಿಧನರಾದ ನಂತರ ತಾಯಿ ಎರಡನೇ ಮದುವೆಯಾಗಿದ್ದು, ಈ ನಡುವೇ ತಾಯಿಯೂ ಆತ್ಮಹತ್ಯೆ ಮಾಡಿಕೊಂಡು ಮೃತಪಟ್ಟಿದ್ದಾರೆ. ಅದಕ್ಕೂ ಕಾರಣ ತಿಳಿದಿಲ್ಲ. ಆದರೆ, ಅವರ ಮರಣೋತ್ತರ ಪರೀಕ್ಷೆ ಮಾಡಿರುವ ಬಗ್ಗೆ ಮಾಹಿತಿ ದೊರೆತಿದೆ.

ಹೀಗಾಗಿ ಸ್ಯಾಂಡ್‌ಬರ್ಗ್‌ನ ಅಜ್ಜಿ ಪರಿಚಿತರಾದ ಜಯಮ್ಮ ಎಂಬುವವರಿಗೆ ತನ್ನನ್ನು ನೀಡಿದರು. ಆಕೆ ಬೆಂಗಳೂರಿನ ಮೇರಿ ಕಾನ್ವೆಂಟ್‌ಗೆ ಕರೆತಂದಾಗ ಅಲ್ಲಿಂದ ಆಶ್ರಯ ಚಿಲ್ಡನ್ ಹೋಂಗೆ ಸ್ಥಳಾಂತರಿಸಲಾಯಿತು ಎಂಬ ಮಾಹಿತಿ ದೊರೆತಿದೆ.

ಹೀಗೆ ಮದ್ದೂರಿನ ಮೂಲವನ್ನು ಹುಡುಕಿ ಹೊರಟಾಗ ತನ್ನ ಮದ್ದೂರಿನ ಪ್ರೌಢಶಾಲೆ ಪಕ್ಕದ ಮನೆಯಲ್ಲಿದ್ದ ಜಯಮ್ಮ ಎಂಬುವವರು ಸಂಸ್ಥೆಗೆ ನೀಡಿದ್ದರೆಂಬುದು ಪತ್ತೆಯಾಯಿತು. ಆದರೆ ಆಕೆಗೆ ತನ್ನನ್ನು ನೀಡಿದವರು ಯಾರು ಎಂಬುದನ್ನು ತಿಳಿಯಲು ಹೋದರೆ ಆಕೆ ಈ ಹಿಂದೆಯೇ ನಿಧನವಾಗಿದ್ದಾರೆ.

ಈಗ ಅವರ ಮೂಲವನ್ನು ಹಿಡಿದು ಹೊರಟಾಗ ಯಾರೂ ಸಹಾ ಬದುಕಿಲ್ಲ. ಹೀಗಿದ್ದರೂ ತನಗೆ ಸಹೋದರರು, ಸಹೋದರಿಯರು ಇರಬಹುದಾಗಿದ್ದು, ಅವರ ಹುಡುಕಾಟದಲ್ಲಿರುವುದಾಗಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸ್ಯಾಂಡ್ ಬರ್ಗ್ ಮತ್ತು ಅವರ ಪತಿ ಎಡಿನ್ ಉಪಸ್ಥಿತರಿದ್ದರು.

# ಹೆಚ್ .ಡಿ ಕೋಟೆ ತಾಲ್ಲೂಕು ಕಚೇರಿಗೆ ಜಿಲ್ಲಾಧಿಕಾರಿಗಳ ಭೇಟಿ ಹಾಗೂ ಪರಿಶೀಲನೆ

**ಮೈಸೂರು:** ಜಿಲ್ಲಾಧಿಕಾರಿಗಳಾದ ಕೆ.ವಿ ರಾಜೇಂದ್ರ, ಹೆಚ್. ಡಿ ಕೋಟೆ ತಾಲ್ಲೂಕು ಕಚೇರಿ ಹಾಗೂ ಸರಗೂರಿನ ಹಂಪಾಪುರ ನಾಡ ಕಚೇರಿಗೆ ದಿಢೀರ್ ಭೇಟಿ ನೀಡಿ ಕಚೇರಿಯ ಸಮಸ್ಯೆ, ಆಡಳಿತ ಕಾರ್ಯಗಳ ಪ್ರಗತಿ ಪರಿಶೀಲಿಸಿ, ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿದರು. ಈ ಸಂದರ್ಭದಲ್ಲಿ ಪೌತಿಖಾತೆ ಆಂದೋಲನವನ್ನು ಯಶಸ್ವಿಗೊಳಿಸುವಂತೆ, ಕೆರೆ ಒತ್ತುವರಿ ತೆರವು ಗೊಳಿಸುವಂತೆ, ಬಗರ್ ಹುಕುಂ ಮಂಜೂರಾತಿ ಕೋರಿ ಬಂದಿರುವ ಅರ್ಜಿಗಳ ವಿಲೇವಾರಿ ಬಗ್ಗೆ ಆಪ್ ಮೂಲಕ ಕ್ರಮ ವಹಿಸುವಂತೆ ಕಚೇರಿಯ ಅಧಿಕಾರಿಗಳಿಗೆ ಸೂಚಿಸಿದರು. ಸಕಾಲ ಅರ್ಜಿಗಳ ವಿಲೇವಾರಿ ಬಗ್ಗೆ ಕ್ರಮ ವಹಿಸಿ, ಭೂಮಿ ತಂತ್ರಾಶದಲ್ಲಿ ಖಾತೆ ಕಡತಗಳ ವಿಲೇವಾರಿಯನ್ನು ವಿಳಂಬ ಮಾಡದೆ ತ್ವರಿತವಾಗಿ ಮಾಡುವಂತೆ ಜಿಲ್ಲಾಧಿಕಾರಿಗಳು ತಿಳಿಸಿದರು. ಚುನಾವಣೆಗೆ ಸಂಬಂಧಿಸಿದಂತೆ ಮತಗಟ್ಟೆಗಳನ್ನು ಪರಿಶೀಲಿಸಿಕೊಂಡು ವರದಿ ಮಾಡುವಂತೆ, ಇ-ಆಫೀಸ್ ತೆರೆದು ಕಂಪ್ಯೂಟರ್ ಮೂಲಕ ಕಡತಗಳ ವಿಲೇವಾರಿ ಮಾಡುವಂತೆ ಉಪತಹಶಿಲ್ದಾರ್ ಅವರಿಗೆ ಮತ್ತು ರಾಜಸ್ವ ನಿರೀಕ್ಷಕರಿಗೆ ತಿಳಿಸಿದರು. ಗೃಹಲಕ್ಷ್ಮಿ ಯೋಜನೆಯೂ ಗ್ರಾಮದಲ್ಲಿ ಎಲ್ಲರಿಗೂ ತಲುಪಿದೆ ಎಂಬುದರ ಬಗ್ಗೆ ಪರಿಶೀಲಿಸಲು ಅಧಿಕಾರಿಗಳಿಗೆ ನಿರ್ದೇಶನಗಳನ್ನು ನೀಡಿದರು. ಈ ಸಂದರ್ಭದಲ್ಲಿ ಹೆಚ್.ಡಿ.ಕೋಟೆ ತಹಶೀಲ್ದಾರ್ ಶ್ರೀನಿವಾಸ್ ಹಾಗೂ ಉಪತಹಶಿಲ್ದಾರ್ ಮತ್ತು ರಾಜಸ್ವ ನಿರೀಕ್ಷಕರು ಉಪಸ್ಥಿತರಿದ್ದರು.



# ಕರಿಮಣಿ ಮಾಲೀಕ ನೀನಲ್ಲ ವೈರಲ್ ಟಿಕ್ ಟಾಕ್ ಗೆ ನೊಂದ ಪತಿಯೊಬ್ಬ ಆತ್ಮಹತ್ಯೆ

**ಚಾಮರಾಜನಗರ :** ಪತ್ನಿ ಮಾಡಿದ ಕರಿಮಣಿ ಮಾಲೀಕ ನೀನಲ್ಲ ವೈರಲ್ ಟಿಕ್ ಟಾಕ್ ಗೆ ನೊಂದ ಪತಿಯೊಬ್ಬ ಜಮೀನಿನಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಪಿ.ಜಿ.ಪಾಳ್ಯ ಗ್ರಾಮದಲ್ಲಿ ನಡೆದಿದೆ.

ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನ ಪಿ.ಜಿ.ಪಾಳ್ಯ ಗ್ರಾಮದಲ್ಲಿ ಬುಧವಾರ ರಾತ್ರಿ ನಡೆದಿದದ್ದು ಗುರುವಾರ ಬೆಳ್ಳಿಗ್ಗೆ 11ಮಾಹಿತಿ ಲಭ್ಯವಾಗಿದೆ

ಪಿ.ಜಿ.ಪಾಳ್ಯ ಗ್ರಾಮದ ಕುಮಾರ್ (33) ಮೃತ ದುರ್ದೈವಿ. ಮೃತ ಕುಮಾರ್ ನ ಸೋದರ ಮಹಾದೇವಸ್ವಾಮಿ ಮೃತ ಕುಮಾರ್ ಪತ್ನಿ ರೂಪಾ, ರೂಪಾಳ ಸೋದರ ಮಾವ ಗೋವಿಂದ ವಿರುದ್ಧ ದೂರು ಕೊಟ್ಟು ಆಗ್ರಹಿಸಿದ್ದಾರೆ.

ಸೋದರ ಮಾವ ಹಾಗೂ ಸಹೋದರಿ ಜೊತೆ ಸೇರಿ ಕರಿಮಣಿ ಮಾಲೀಕ ನೀನಲ್ಲ ಎಂಬ ಹಾಡಿಗೆ ರೀಲ್ಸ್ ಮಾಡಿ ಸಾಮಾಜಿಕ ಜಾಲತಾಣಕ್ಕೆ ಅಪ್ ಲೋಡ್ ಮಾಡಿದ್ದಾರೆ. ಸ್ನೇಹಿತರು ಕುಮಾರ್ ನ ಗಮನಕ್ಕೆ ತಂದ ವೇಳೆ ದಂಪತಿ ನಡುವೆ ಮಾತಿನ ಚಕಮುಕಿ ನಡೆದು ಕೊನೆಗೆ ಮನನೊಂದ ಪತಿ ಕುಮಾರ್ ಮನೆ ಮುಂಭಾಗದ ಮರಕ್ಕೆ ಸೀರೆಯಿಂದ ನೇಣು ಬಿಗಿದು ಇಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಹನೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು ಮರಣೋತ್ತರ ಪರೀಕ್ಷೆಗಾಗಿ ಶವವನ್ನು ಹನೂರು ಆಸ್ಪತ್ರೆಗೆ ಶವವನ್ನು ರವಾನೆ ಮಾಡಲಾಗಿದೆ.

# ಐದು ವರ್ಷದ ಗಂಡು ಹುಲಿ ಸೆರೆ

**ಮೈಸೂರು:** ಮೈಸೂರು ವಲಯದ ಚಿಕ್ಕನಹಳ್ಳಿ ಮೀಸಲು ಅರಣ್ಯ ಹಾಗೂ ಅದರ ಸುತ್ತಮುತ್ತಲ ಗ್ರಾಮಗಳ ಜಮೀನಿನಲ್ಲಿ ಆಗಾಗ್ಗೆ ಕಾಣಿಸಿಕೊಂಡು ಸಾರ್ವಜನಿಕರಲ್ಲಿ ಆತಂಕ ಮೂಡಿಸಿದ್ದ ಹುಲಿಯನ್ನು ಸೆರೆಹಿಡಿಯುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿದೆ.



ವಲಯ ಅರಣ್ಯಾಧಿಕಾರಿಗಳು, ಸಿಬ್ಬಂದಿಗಳು, ಅರವಳಿಕೆ ವೈದ್ಯರ ತಂಡ, ಇ.ಟಿ.ಎಫ್ ತಂಡ, ಎಸ್.ಟಿ.ಪಿ.ಎಫ್ ತಂಡ ಹಾಗೂ ಚಿರತೆ ಕಾರ್ಯಪಡೆಯೊಂದಿಗೆ ಟ್ರಾಪ್ ಕ್ಯಾಮರಾಗಳು, ನೆಟ್ವರ್ಕ್ ಕ್ಯಾಮರಾಗಳು, ಐ.ಆರ್. ಕ್ಯಾಮರಾಗಳು, ಇತ್ಯಾದಿಗಳನ್ನು ಬಳಸಿಕೊಂಡು ಹುಲಿ ಕಾರ್ಯಾಚರಣೆ ನಡಸಲಾಗಿದ್ದು, ಚಿಕ್ಕನಹಳ್ಳಿ ಮೀಸಲು ಅರಣ್ಯದಲ್ಲಿ ನೂತನವಾಗಿ ವಿನ್ಯಾಸಗೊಳಿಸಿ ಅಳವಡಿಸಲಾಗಿದ್ದ WALKTHROUGH ಬೋನಿನೊಳಗೆ ಸುಮಾರು 5 ವರ್ಷದ ಗಂಡು ಹುಲಿ ಇಂದು (ಗುರುವಾ) ಬೆಳಗಿನ ಜಾವ ಸೆರೆಯಾಗಿದೆ. ಸೆರೆಯಾದ ಹುಲಿಯಲ್ಲಿ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ಮಾರ್ಗಸೂಚಿಗಳಂತೆ ಹುಲಿ ಸಂರಕ್ಷಿತ ಪ್ರದೇಶಕ್ಕೆ ಬಿಡುಗಡೆಗೊಳಿಸಲು ಕ್ರಮ ವಹಿಸಲಾಗಿದೆ ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ. ಕೆ.ಎನ್ ಬಸವರಾಜ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸ್ವಯಂಪ್ರೇರಿತ ರಕ್ತದಾನ




**ಬೆಂಗಳೂರು :** ಬೆಂಗಳೂರಿನ ಬನಶಂಕರಿ 3ನೇ ಹಂತದಲ್ಲಿರುವ ಗುಪ್ತಾ ಕಾಲೇಜಿನ ವಿದ್ಯಾರ್ಥಿಗಳಿಂದ ಪ್ರೇಮಿಗಳ ದಿನಾಚರಣೆಯನ್ನು ವಿಭಿನ್ನ ರೀತಿಯಲ್ಲಿ ಲಯನ್ಸ್ ಸಂಸ್ಥೆಯ ಸಹಯೋಗದೊಂದಿಗೆ ಸ್ವಯಂಪ್ರೇರಿತ ರಕ್ತದಾನ ಮಾಡುವುದರ ಮೂಲಕ ಆಚರಿಸಲಾಯಿತು.

ಈ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದ ಲಯನ್ ಡಾ|| ಅನಿತಾ ಪ್ರಸಾದ್, ಮಾತಾನಾಡುತ್ತಾ ವಿಶ್ವದಾದ್ಯಂತ ಇಂದು ಪ್ರೇಮಿಗಳ ದಿನಾಚರಣೆಯನ್ನು ಆಚರಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ಗುಪ್ತಾ ಕಾಲೇಜಿನ ವಿದ್ಯಾರ್ಥಿಗಳು ಸ್ವಯಂ ಪ್ರೇರಿತ ರಕ್ತದಾನ ಮಾಡುವ ಮೂಲಕ ತಮ್ಮಲ್ಲಿರುವ ಪ್ರೀತಿ, ಪ್ರೇಮವನ್ನು ತೋರ್ಪಡಿಸಿ ಕೊಂಡಿರುವುದು ಶ್ಲಾಘನೀಯವಾದ ವಿಚಾರ ಎಂದರು. ಈ ಕಾರ್ಯಕ್ರಮದಲ್ಲಿ ಗುಪ್ತಾ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಸುಧಾಕರ್ ಜಿ.ಆರ್. ಅವರು ಮಾತನಾಡುತ್ತಾ ಗುಲಾಬಿ ಹೂ ಹಂಚಿ ಪ್ರೇಮಿಗಳ ದಿನಾಚರಣೆಯನ್ನು ಆಚರಿಸುವ ಬದಲು ವಿದ್ಯಾರ್ಥಿಗಳು ಇಂತಹ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಮಾಜಿಕ ಜವಾಬ್ದಾರಿಯನ್ನು ಎತ್ತಿ ಹಿಡಿಯಬೇಕು, ಗುಪ್ತಾ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿವರ್ಗದವರನ್ನು ಅಭಿನಂದಿಸಿ ಇಂತಹ ಕಾರ್ಯಕ್ರಮಗಳಿಗೆ ಯುವಜನತೆಯ ಬೆಂಬಲ ತುಂಬ ಅಗತ್ಯ ಎಂದರು. ಈ ಕಾರ್ಯಕ್ರಮದಲ್ಲಿ ಬಾಗವಹಿಸಿ ಮಾತನಾಡಿದ ಲಯನ್ ಶ್ರೀನಾಥ್ ಗುಪ್ತಾ ಕಾಲೇಜು ಕಳೆದ 17 ವರ್ಷಗಳಿಂದ ಪ್ರೇಮಿಗಳ ದಿನದಂದು ವಿದ್ಯಾರ್ಥಿಗಳು ರಕ್ತದಾನ ಮಾಡುವ ಮೂಲಕ ವಿಭಿನ್ನ ರೀತಿಯಲ್ಲಿ ಪ್ರೇಮಿಗಳ ದಿನಾಚರಣೆಯನ್ನು ಆಚರಿಸುತ್ತಿದ್ದೇವೆ. ಪ್ರೇಮಿಗಳ ಎಂದ ತಕ್ಷಣ ಗಂಡು ಮತ್ತು ಹೆಣ್ಣು ಪ್ರೀತಿಯ ಸಂಬಂಧವನ್ನು ಇದು ಇನ್ನೊಬ್ಬರ ಜೀವನವನ್ನು ಉಳಿಸುವುದು ಆಗಿದೆ ಎಂದರು. ಈ ಕಾರ್ಯಕ್ರಮದಲ್ಲಿ ಲಯನ್ಸ್ ಮುರುಳಿಕೃಷ್ಣ ಎನ್ ಎಸ್ ಎಸ್ ಕಾರ್ಯಕ್ರಮಾಧಿಕಾರಿಗಳಾದ ಪ್ರೊ, ಹೇಮಾವತಿ, ದಿನೇಶ್, ಕಾಲೇಜಿನ ಸಿಬ್ಬಂದಿ ವರ್ಗ ಭಾಗವಹಿಸಿದ್ದರು.

# ಗೌರಯುತ ಬದುಕು ನೆಡಸಲು ಬಾಬಾ ಸಾಹೇಬರು ಕೊಟ್ಟ ಸಂವಿಧಾನವೇ ಕಾರಣ

**ತಿ.ನರಸೀಪುರ:** ಸಮಾನತೆ ಹಾಗೂ ಸಮಬಾಳಿನಿಂದ ಗೌರಯುತ ಬದುಕು ನೆಡಸಲು ಬಾಬಾ ಸಾಹೇಬರು ಕೊಟ್ಟ ಸಂವಿಧಾನವೇ ಕಾರಣ ಎಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಭೀಮರಾಯ ವಡ್ಡರ್ ತಿಳಿಸಿದರು.

ತಾಲ್ಲೂಕಿನ ಹೆಮ್ಮಿಗೆ ಗ್ರಾಮ ಪಂಚಾಯತಿಗೆ ಆಗಮಿಸಿದ ಸಂವಿಧಾನ ಜಾಗೃತಿ ಜಾಥ ರಥವನ್ನು ಗ್ರಾ.ಪಂ.ಅಧ್ಯಕ್ಷೆ ವಸಂತ ರಾಜಶೇಖರ್ ,ಉಪಾಧ್ಯಕ್ಷ ಹೆಮ್ಮಿಗೆ ಸೋಮಣ್ಣ ಸೇರಿದಂತೆ ಗ್ರಾ.ಪಂ.ಸದಸ್ಯರು ಹಾಗೂ ವಿವಿಧ ಸಂಘಟನೆಯ ಮುಖಂಡರು ,ಶಾಲಾ ಮಕ್ಕಳು, ಶಿಕ್ಷರು,ಮಹಿಳೆಯರು ಸೇರಿ ಪೂರ್ಣ ಕುಂಭದೊಂದಿಗೆ ಸ್ವಾಗತಿಸಿ ಬಾಬಾ ಸಾಹೇಬರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿದ ನಂತರ ಹೆಮ್ಮಿಗೆ ಗ್ರಾಮದ ಮಾರಿಗುಡಿ ದೇವಸ್ಥಾನದ ಆವರಣದಲ್ಲಿ ನೆಡದ ವೇದಿಕೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದೇಶದ ಪರಮೋಚ್ಚ ಗ್ರಂಥ ಸಂವಿಧಾನ ಅಂಗೀಕಾರಗೊಂಡು 75 ವರ್ಷ ಪೂರ್ಣಗೊಂಡ ಹಿನ್ನಲೆಯಲ್ಲಿ ಸಂವಿಧಾನ ಜಾಗೃತಿ ಜಾಥ ಕಾರ್ಯ ಕ್ರಮವನ್ನು ಸರ್ಕಾರ ಹಮ್ಮಿಕೊಂಡು ಆ ಮೂಲಕ ಸಂವಿಧಾನದ ಅರಿವನ್ನು ಜನರಲ್ಲಿ ಮೂಡಿಸುತ್ತಿದೆ ದೇಶದಲ್ಲಿ 400 ಕ್ಕೂ ಹೆಚ್ಚು ಜಾತಿ, ಹಲವು ಧರ್ಮ, ಹಲವಾರು ಭಾಷೆ ಇದ್ದರು ಸಹ ನಾವೆಲ್ಲರು ಒಂದೇ ಎಂಬ ಭಾವನೆ ಯೊಂದಿಗೆ ಬದಕಲು ಬಾಬಾ ಸಾಹೇಬರು ಬರೆದ ಸಂವಿಧಾನವೇ ಕಾರಣ ಎಂದರು.

ಭಾರತದ ಪ್ರಜೆಯನ್ನು ಧರ್ಮ, ಮೂಲವಂಶ, ಜಾತಿ, ಲಿಂಗ, ಜನ್ಮ ಸ್ಥಳದ ಆಧಾರಗಳ ಮೇಲೆ ತಾರತಮ್ಯ ಮಾಡುವುದು ನಿಷೇಧ ಕ್ಕೊಳಪಡಿಸಿ, ಎಲ್ಲರೂ ಶಿಕ್ಷಣ ಪಡೆದು ಘನತೆಯಿಂದ ಬದುಕುತ್ತಾ ಪರಸ್ಪರ ಪ್ರೀತಿ-ಗೌರವಗಳನ್ನು ಕೊಟ್ಟುಕೊಳ್ಳುತ್ತಾ ತನಗಿಚ್ಛೆಯಾದ ಧರ್ಮ ಅನುಸರಿಸುವ ಮೂಲಭೂತ ಹಕ್ಕು ಮನುಷ್ಯ ಬದುಕಿಗೆ ಕೊಟ್ಟದ್ದು ಹಾಗೂ ಚಾರಿತ್ರಿಕವಾಗಿ ಅನ್ಯಾಯಕ್ಕೆ ಒಳಗಾದವರನ್ನೂ ವಿಶೇಷವಾಗಿ ಮಾನ್ಯ ಮಾಡುತ್ತಾ, ಕಾನೂನಿನ ಮುಂದೆ ಎಲ್ಲರೂ ಸಮಾನರು ಎಂಬುದನ್ನು ಪ್ರತಿಪಾದಿಸುತ್ತಿರುವ ತಾಯಿಯೇ ಭಾರತದ ಸಂವಿಧಾನ. ಇಂತಹ ತಾಯ್ತನದ ಸಂವಿಧಾನದ ರಚನಾ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಬಾಬಾಸಾಹೇಬ್ ಅಂಬೇಡ್ಕರ್ ಅವರು ರಾಷ್ಟ್ರ ಪ್ರೇಮವನ್ನು ಮೆರೆದದ್ದು ನಮಗೆಲ್ಲ ಮಾದರಿಯಾಗಲೇಬೇಕು ಎಂದರು.ಈ ಸಂದರ್ಭದಲ್ಲಿ ಗ್ರಾ.ಪಂ. ನಿಕಟ ಪೂರ್ವ ಅಧ್ಯಕ್ಷ ಸಿ.ಬಿ.ಹುಂಡಿ ಚಿನ್ನಸ್ವಾಮಿ,ಉಪಾಧ್ಯಕ್ಷ ಹೆಮ್ಮಿಗೆ ಸೋಮಣ್ಣ,ಕಾಂಗ್ರೆಸ್ ಹಿರಿಯ ಮುಖಂಡ ಹೆಮ್ಮಿಗೆ ಶೇಷಾದ್ರಿ, ಗ್ರಾ.ಪಂ ಸದಸ್ಯರಾದ ಮಹದೇವ(ಡಿ.ಎಂ.) ಕೇಶವಮೂರ್ತಿ, ಪಿಡಿಒ ಚಿದಾನಂದ,ಮಾಜಿ ಗ್ರಾ.ಪಂ. ಅಧ್ಯಕ್ಷ ರಾಜಶೇಖರ, ಅಕ್ಕೂರು ಮಹೇಶ್, ಹೆಮ್ಮಿಗೆ ಶಿವು, ಮಾರನಪುರ ಮಹಾಂತೇಶ್ ಇದ್ದರು.

**ಭಾರತದ ಪ್ರತಿಯೊಬ್ಬ ಪ್ರಜೆನೂ ಸಹ ಬಾಬಾ ಸಾಹೇಬ್ ರವರ ಸಂವಿಧಾನದ ಫಲಾನುಭವಿ ಸಂವಿಧಾನಕೊಟ್ಟಿರುವ ಹಕ್ಕಿನಿಂದಲೇ ಸಮಾಜದಲ್ಲಿ ಗೌರಯುತ ಬದುಕು ನೆಡಸಲು ಸಾಧ್ಯವಾಗಿದೆ ಶಿಕ್ಷಣ,ರಾಜಕೀಯ, ಸಾಮಾಜಿಕ ವಲಯದಲ್ಲಿ ಉನ್ನತ ಸ್ಥಾನಮಾನ ಹೊಂದಲು ಸಾಧ್ಯವಾಗಿದೆ ಆದರಿಂದ ಭಾರತ ದೇಶದ ಎಲ್ಲಾ ಪ್ರಜೆಗಳುಬಾಬಾ ಸಾಹೇಬರನ್ನ ಪೂಜಿಸಬೇಕು ಮತ್ತು ಗೌರವಿಸಬೇಕು**

## ಪೊಲೀಸರ ಬರ್ಜರಿ ಭೇಟೆ : ನಾಲ್ವರ ಬಂಧನ

# 221 ಕೆ.ಜಿ ಕಚ್ಚಾ ಗಾಂಜಾ ಜಪ್ತಿ

**ಚಾಮರಾಜನಗರ :** ಜಿಲ್ಲೆಯ ಕೊಳ್ಳೇಗಾಲ ಪೊಲೀಸರು ತಡ ರಾತ್ರಿ ಕಾರ್ಯಚರಣೆ ನಡೆಸಿ 1.10 ಕೋಟಿ ರೂ ಮೌಲ್ಯದ ಕಚ್ಚಾ ಗಾಂಜಾವನ್ನು ಜಪ್ತಿಪಡಿಸಿಕೊಂಡು ನಾಲ್ವರು ಆರೋಪಿಗಳನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಿದ್ದಾರೆ.

ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ಹೊರ ವಲಯದ, ಕೊಳ್ಳೇಗಾಲ-ಮಳವಳ್ಳಿ ಮುಖ್ಯ ರಸ್ತೆಯ ಮಧುವನಹಳ್ಳಿ ಬೈಪಾಸ್ ಬಳಿ ತಡ ರಾತ್ರಿ ಕಾರ್ಯಾಚರಣೆ ನಡೆಸಿರುವ ಪೊಲೀಸರು, ಲಾರಿಯಲ್ಲಿ ಪ್ಲೈವುಡ್ ಶೀಟುಗಳ ನಡುವೆ ಒಣಗಾಂಜಾದ ನಾಲ್ಕು ಚೀಲಗಳನ್ನು ಇರಿಸಿ ಸಾಗಣೆ ಮಾಡಲಾಗುತ್ತಿತ್ತು. ಖಚಿತ ಮಾಹಿತಿ ಮೇರೆಗೆ ಪೊಲೀಸರು ಕಾರ್ಯಾಚರಣೆ ನಡೆಸಿದ್ದು, ಬೆಂಗಳೂರು, ದಾವಣಗೆರೆ, ಯಾದಗಿರಿ, ಹರಿಹರದವರಾದ ಸೆಂದಿಲ್ ಕುಮಾರ್, ರವಿಕುಮಾರ್, ಉಮಾಶಂಕರ್ ಮತ್ತು ವಿನಾಯಕ ಅಲಿಯಾಸ್ ವಿನಯ್ ಎಂಬುವವರನ್ನು ಬಂಧಿಸಿದ್ದಾರೆ.

ಬಂಧಿತರಿಂದ 1.10 ಕೋಟಿ ಮೌಲ್ಯದ 221 ಕೆಜಿ ಒಣ ಗಾಂಜಾ, 25 ಲಕ್ಷ ಮೌಲ್ಯದ ಲಾರಿ, 9 ಲಕ್ಷ ಮೌಲ್ಯದ ಪ್ಲೈವುಡ್ ಶೀಟುಗಳನ್ನು ವಶಕ್ಕೆ ಪಡೆದಿದ್ದಾರೆ.

ಒಣಗಾಂಜಾವನ್ನು ಆಂಧ್ರಪ್ರದೇಶದಿಂದ ತರಲಾಗಿತ್ತು. ಜಿಲ್ಲೆಯ ಕೊಳ್ಳೇಗಾಲ ರಾಮಾಪುರ ಮಾರ್ಗವಾಗಿ ತಮಿಳುನಾಡಿನ ಕಡೆಗೆ ಹೋಗುತ್ತಿತ್ತು ಎಂದು ಮೂಲಗಳು ತಿಳಿಸಿವೆ. ಪೊಲೀಸರು ಈ ಬಗ್ಗೆ ಹೆಚ್ಚಿನ ಮಾಹಿತಿ ನೀಡಲು ನಿರಾಕರಿಸಿದ್ದಾರೆ. ಮಾದಕ ದ್ರವ್ಯ ಸಾಗಿಸುತ್ತಿರುವ ಬಗ್ಗೆ ಮಾಹಿತಿ ಸಿಕ್ಕಿತ್ತು. ಕಾರ್ಯಾಚರಣೆಯ ಸಂದರ್ಭದಲ್ಲಿ ದೊಡ್ಡ ಪ್ರಮಾಣದಲ್ಲಿ ಒಣಗಾಂಜಾ ಸಿಕ್ಕಿದೆ. ನಾಲ್ವರನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದ್ದು, ಎಲ್ಲಿಂದ ತರಲಾಗಿತ್ತು ಎಲ್ಲಿಗೆ ಕೊಂಡೊಯ್ಯಲಾಗುತ್ತಿತ್ತು ಎಂಬುದರ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದರು.


**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
ಕಾರ್ಯಪಾಲಕ ಅಭಿಯಂತರರ ಕಚೇರಿ, ಮಹದೇವಪುರ ವಿಭಾಗ,
ಬೆಂಗಳೂರು-560 048.
ಸಂಖ್ಯೆ: ಕಾಪಾಅ/ಮಪು/ಟೆಂಡರ್/15/2023-24 ದಿನಾಂಕ: 14.02.2024

**ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ದ್ವಿಲಕೋಟೆ ಪದ್ಧತಿ)**
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಿಭಾಗ ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ರಾಜ್ಯ ಅಥವಾ ಕೇಂದ್ರ ಸರ್ಕಾರದ ಇನ್ಯಾವುದೇ ಸಂಸ್ಥೆಗಳಲ್ಲಿ ಸೂಕ್ತ ದರ್ಜೆಯಲ್ಲಿ ನೋಂದಾಯಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಯಾವುದಾದರೂ ಅಥವಾ ಎಲ್ಲಾ ಕಾಮಗಾರಿಗಳಿಗೆ ವಸ್ತು (ಐಟಂ) ದರದ ಟೆಂಡರನ್ನು ಆಹ್ವಾನಿಸಿದ್ದಾರೆ.

• ಬಾಕಿ ಉಳಿಕೆ ರಸ್ತೆಗಳು ಮತ್ತು ಚರಂಡಿಗಳ ನಿರ್ಮಾಣ ಹಾಗೂ ಎಲ್‌ಇಡಿ ದೀಪಗಳ ಜೋಡಿಕೆಗಳು • ರಸ್ತೆಗಳು ಮತ್ತು ಚರಂಡಿಗಳ ನಿರ್ಮಾಣ • ಬಾಕಿ ಉಳಿಕೆ ರಸ್ತೆಗಳು ಮತ್ತು ಚರಂಡಿಗಳ ನಿರ್ಮಾಣ • ಎಲ್‌ಇಡಿ ದೀಪ ಜೋಡಿಕೆ ಒದಗಿಸುವುದು • ರಸ್ತೆಗಳ ನಿರ್ಮಾಣ & ಎಲ್‌ಇಡಿ ದೀಪ ಜೋಡಿಕೆ ಒದಗಿಸುವುದು

| ಕ್ರ ಸಂ. | ವಾರ್ಡ್ ಸಂಖ್ಯೆ | ಅಂದಾಜು ಮೊತ್ತ (₹ ಲಕ್ಷಗಳಲ್ಲಿ) | ಇಎಂಡಿ (₹. ಗಳಲ್ಲಿ) | ಪ.ಜಾ/ಪ.ಪಾಂ/ ಸಾಮಾನ್ಯರಿಗೆ ಮೀಸಲು | ಕಾಮ ಗಾರಿಗಳ ಸಂಖ್ಯೆ |
|---|---|---|---|---|---|
| 1. | 106 | 25.00 | 25,000/- | ಪರಿಶಿಷ್ಠ ಜಾತಿ | 01 |
| 2. | 107 | 20.00 | 25,000/- | ಪರಿಶಿಷ್ಠ ಪಂಗಡ | 01 |
| 3. | 107 | 25.00 ರಿಂದ 30.00 | 50,000/- ರಿಂದ 60,000/- | ಸಾಮಾನ್ಯ | 02 |
| 4. | 105 | 20.00 ರಿಂದ 40.00 | 50,000/- ರಿಂದ 80,000/- | ಸಾಮಾನ್ಯ | 05 |
| 5. | 105 | 20.00 | 25,000/- | ಪರಿಶಿಷ್ಠ ಪಂಗಡ | 01 |
| 6. | 105 | 25.00 | 25,000/- | ಪರಿಶಿಷ್ಠ ಜಾತಿ | 01 |
| 7. | 104 | 20.00 ರಿಂದ 50.00 | 50,000/- ರಿಂದ 1,00,000/- | ಸಾಮಾನ್ಯ | 06 |
| 8. | 104 | 20.00 ರಿಂದ 40.00 | 25,000/- (ಪ್ರತಿ ಕಾಮಗಾರಿಗೆ) | ಪರಿಶಿಷ್ಠ ಜಾತಿ | 02 |
| 9. | 102 | 40.00 | 50,000/- | ಸಾಮಾನ್ಯ | 01 |
| 10. | 103 | 30.00 (ಪ್ರತಿ ಕಾಮಗಾರಿಗೆ) | 25,000/- ರಿಂದ 60,000/- | ಸಾಮಾನ್ಯ | 02 |
| 11. | 103 | 20.00 | 25,000/- | ಪರಿಶಿಷ್ಠ ಪಂಗಡ | 01 |
| 12. | 97 | 20.00 ರಿಂದ 30.00 | 50,000/- ರಿಂದ 60,000/- | ಸಾಮಾನ್ಯ | 05 |
| 13. | 97 | 20.00 | 25,000/- | ಪರಿಶಿಷ್ಠ ಜಾತಿ | 01 |
| 14. | 97 | 30.00 | 30,000/- | ಪರಿಶಿಷ್ಠ ಪಂಗಡ | 01 |
| 15. | 99 | 10.00 ರಿಂದ 25.00 | 25,000/- ರಿಂದ 50,000/- | ಸಾಮಾನ್ಯ | 06 |
| 16. | 99 | 20.00 | 25,000/- | ಪರಿಶಿಷ್ಠ ಜಾತಿ | 01 |
| 17. | 101 | 10.00 ರಿಂದ 15.00 | 25,000/- ರಿಂದ 37,500/- | ಸಾಮಾನ್ಯ | 02 |
| 18. | 98 | 10.00 ರಿಂದ 20.00 | 25,000/- ರಿಂದ 50,000/- | ಸಾಮಾನ್ಯ | 02 |
| | | | | ಒಟ್ಟು ಕಾಮಗಾರಿಗಳ ಸಂಖ್ಯೆ | 41 |

**ಟೆಂಡರ್ ವೇಳಾಪಟ್ಟಿ:** (1) ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ **21.02.2024**ರ ಮಧ್ಯಾಹ್ನ **3:00** ಗಂಟೆಯೊಳಗೆ. (2) ಬಿಡ್-ಪೂರ್ವಭಾವಿ ಸಭೆಯನ್ನು ದಿನಾಂಕ **23.02.2024** ರ ಬೆಳಿಗ್ಗೆ **11:00** ಗಂಟೆಗೆ ನಡೆಸಲಾಗುವುದು. (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ **28.02.2024**ರ ಸಂಜೆ **4:00** ಗಂಟೆಯವರೆಗೆ. (4) ಆರ್ಥಿಕ/ತಾಂತ್ರಿಕ ಬಿಡ್‌ಗಳನ್ನು ದಿನಾಂಕ **29.02.2024**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು. (5) ದ್ವಿಲಕೋಟೆ ಟೆಂಡರ್‌ಗಳಿಗೆ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ **05.03.2024**ರ ಸಂಜೆ **4:00** ಗಂಟೆಗೆ ಅಥವಾ ತಾಂತ್ರಿಕ ಬಿಡ್‌ಗೆ ಅನುಮೋದನೆ ದೊರೆತ ನಂತರ. (6) ಈ ಟೆಂಡರ್ ಪ್ರಕಟಣೆಯನ್ನು ಬೃ.ಬೆಂ.ಮ.ಪಾಲಿಕೆ ವೆಬ್‌ಸೈಟ್ **www.bbmp.gov.in**. ನಲ್ಲಿಯು ಕೂಡ ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು - ಮಹದೇವಪುರ ವಿಭಾಗ

## ಹೆಂಡತಿಯ ಕೊಲೆ ಮಾಡಿದ ಆರೋಪಿಗೆ ಶಿಕ್ಷೆ

**ಮಂಡ್ಯ:** ಮಳವಳ್ಳಿ ತಾಲ್ಲೂಕಿನ ಕಲ್ಕುಣಿ ಗ್ರಾಮದ ಆರೋಪಿ ಕುಮಾರಸ್ವಾಮಿ ಕುಮಾರ ಬಿನ್ ಲೇಟ್ ನಿಂಗಯ್ಯ (35 ವರ್ಷ) ಗೆ ಕಿರುಗಾವಲು ಗ್ರಾಮದ ರಾಜಣ್ಣನವರು ತಮ್ಮ ಹಿರಿಯ ಮಗಳಾದ ಸೌಮ್ಯಳನ್ನು ಮೇ 03 2009 ರಂದು ವಿವಾಹ ಮಾಡಿಕೊಟ್ಟಿದ್ದರು. ಮದುವೆಯಾದ ನಂತರ ಆರೋಪಿತನು ಸ್ವಲ್ಪ ದಿನಗಳ ಕಾಲ ಚೆನ್ನಾಗಿ ನೋಡಿಕೊಂಡಿದ್ದು, ನಂತರದ ದಿನಗಳಲ್ಲಿ ಸೌಮ್ಯಾಳ ಜೊತೆ ಜಗಳ ತೆಗೆದು ಕುಡಿದು ಬಂದು ಗಲಾಟೆ ಮಾಡುತ್ತಿದ್ದುದ್ದರಿಂದ, ಆಕೆಯು 2019ರ ಸಾಲಿನ ಶಿವರಾತ್ರಿ ಹಬ್ಬದ ದಿನ ತನ್ನ ಮಕ್ಕಳಾದ ಬಿಂದುಧರ ಹಾಗೂ ಯಮುನಾಳನ್ನು ಕರೆದುಕೊಂಡು ತನ್ನ ತವರು ಮನೆಯಾದ ಕಿರುಗಾವಲಿಗೆ ಬಂದು ತನ್ನ ತಂದೆ ತಾಯಿಯೊಂದಿಗೆ ವಾಸವಾಗಿದ್ದರು. ಕಿರುಗಾವಲಿನಿಂದ ಸೌಮ್ಯ ಮಳವಳ್ಳಿಯ ಬಟ್ಟೆ ಅಂಗಡಿ ಕೆಲಸಕ್ಕೆ ಹೋಗಿ ಬರುತ್ತಿದ್ದಳು. ಜೂನ್ 23, 2019 ರಂದು ರಾತ್ರಿ 9-00 ಗಂಟೆಯ ಸಮಯದಲ್ಲಿ ಆರೋಪಿಯು ಸೌಮ್ಯಾಳು ವಾಸವಾಗಿದ್ದ ರಾಜಣ್ಣನವರ ಮನೆಗೆ ಬಂದು ಊಟ ಮಾಡಿ, ಹಿಂದಿನ ಮನೆಯಲ್ಲಿ ಆರೋಪಿ ಮತ್ತು ಸೌಮ್ಯ ಒಟ್ಟಿಗೆ ಮಲಗಿದ್ದು, ಮಾರನೇ ದಿನ ಬೆಳಿಗೆ ದಿನಾಂಕ 24.06.2019 ರಂದು ಬೆಳಿಗ್ಗೆ 6.50 ಗಂಟೆಯ ಸಮಯದಲ್ಲಿ ಆರೋಪಿಯು ಆಕ್ಸಲ್ ಬ್ಲೇಡ್‌ನಿಂದ ಸೌಮ್ಯಾಳ ಕತ್ತನ್ನು ಕೊಯ್ದು ಕೊಲೆ ಮಾಡಿರುವುದು ತನಿಖೆ ಹಾಗೂ ಸಾಕ್ಷಾ?ಯಧಾರಗಳಿಂದ ಧೃಡಪಟ್ಟ ಮೇರೆಗೆ ಮಳವಳ್ಳಿ ತನಿಖಾಧಿಕಾರಿಯಾದ ಸಿ.ಪಿ.ಐ ಎಂ. ಧರ್ಮೇಂದ್ರ ಅವರು ಆರೋಪಿ ಕುಮಾರಸ್ವಾಮಿ ಕುಮಾರ ಬಿನ್ ಲೇಟ್ ನಿಂಗಯ್ಯ ವಿರುದ್ಧ ಭಾದಂಸಂ ಕಲಂ. 498(ಎ), 302 ರ ಅಡಿ ದೋಷಾರೋಪಣಾ ಪತ್ರವನ್ನು ಸಲ್ಲಿಸಲಾಗಿತ್ತು. ಈ ಪ್ರಕರಣವು ಎಸ್.ಸಿ.102/2019 ರಂತೆ (ಕಿರುಗಾವಲು ಠಾಣಾ ಮೊ.ನಂ.58/2019) ರಂತೆ ಮಂಡ್ಯದ ಮಾನ್ಯ 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ನಿರ್ಮಲ.ಕೆ ರವರ ಮುಂದೆ ವಿಚಾರಣೆ ನಡೆದು, ಆರೋಪಿ ಕುಮಾರಸ್ವಾಮಿ ಕುಮಾರನಿಗೆ ಭಾದಂಸಂ ಕಲಂ. 302 ರ ಅಡಿಯಲ್ಲಿನ ಅಪರಾಧಕ್ಕೆ ಕಠಿಣ ಜೀವಾವಧಿ ಶಿಕ್ಷೆ ಮತ್ತು 40,000/- ರೂ. ದಂಡವನ್ನು ವಿಧಿಸಿದ್ದು, ದಂಡವನ್ನು ಪಾವತಿಸಲು ತಪ್ಪಿದ್ದಲ್ಲಿ 6 ತಿಂಗಳ ಸಾದಾ ಶಿಕ್ಷೆಯನ್ನು ಅನುಭವಿಸತಕ್ಕದ್ದು ಎಂದು ತೀರ್ಪು ನೀಡಿರುತ್ತಾರೆ. ಅಭಿಯೋಜನೆಯ ಪರವಾಗಿ ಸರ್ಕಾರಿ ಅಭಿಯೋಜಕರಾದ ಜಯಶ್ರೀ ಎಸ್. ಶೆಣೈರವರು ವಾದ ಮಂಡಿಸಿದ್ದರು ಎಂದು ಮಂಡ್ಯ 4ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಸರ್ಕಾರಿ ಅಭಿಯೋಜಕರು ಜಯಶ್ರೀ ಎಸ್. ಶೆಣೈರವರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

## ತೆರಿಗೆ ಪಾವತಿಸುವ ಬಗ್ಗೆ

**ಮಂಡ್ಯ:** ಮದ್ದೂರು ಪುರಸಭಾ ವ್ಯಾಪ್ತಿಯಲ್ಲಿ 2023-24 ನೇ ಸಾಲಿನವರೆಗೆ ಆಸ್ತಿ ತೆರಿಗೆ, ನೀರಿನ ಶುಲ್ಕ, ಅಂಗಡಿ ಮಳಿಗೆ ಬಾಡಿಗೆ, ಉದ್ದಿಮೆ ಪರವಾನಿಗೆ ಶುಲ್ಕಗಳನ್ನು ಬಾಕಿ ಉಳಿಸಿಕೊಂಡಿರುವ ಆಸ್ತಿ ಮಾಲೀಕರು ತೆರಿಗೆಯನ್ನು ಪಾವತಿಸಿ ಎಂದು ಮದ್ದೂರು ಪಟ್ಟಣದ ಅಭಿವೃದ್ಧಿಗೆ ಸಹಕರಿಸಬೇಕೆಂದು ಮದ್ದೂರು ಪುರಸಭೆಯ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ದರಪಟ್ಟಿ ಆಹ್ವಾನ

**ಮಂಡ್ಯ:** ಮಂಡ್ಯ ಜಿಲ್ಲಾಧಿಕಾರಿಗಳ ಕಚೇರಿಗೆ ಅವಶ್ಯವಿರುವ ಎಲೆಕ್ಟ್ರಾನಿಕ್ ಉಪಕರಣಗಳ ಖರೀದಿಗಾಗಿ ದರಪಟ್ಟಿ ಆಹ್ವಾನಿಸಲಾಗಿದೆ. ವಿವಿಧ ವೈಶಿಷ್ಟ್ಯತೆಗಳನ್ನು ಹೊಂದಿರುವ ipad Pro, Magic Keyboard, ipad tampered glass ಎಲೆಕ್ಟ್ರಾನಿಕ್ ಉಪಕರಣಗಳನ್ನು ಖರೀದಿಸುವ ಸಂಬಂಧ ಆಸಕ್ತಿ ಇರುವ ಸಂಸ್ಥೆಯವರು 3 ದಿನಗಳೊಳಗೆ ಜಿಲ್ಲಾಧಿಕಾರಿ ಕಛೇರಿಗೆ ದರಪಟ್ಟಿ ಸಲ್ಲಿಸಬಹುದು. ನಿಗದಿತ ಸಮಯದ ನಂತರದಲ್ಲಿ ಸಲ್ಲಿಸಲ್ಪಡುವ ದರಪಟ್ಟಿಯನ್ನು ಪರಿಗಣಿಸಲಾಗುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪ್ರೇಮಿಗಳ ದಿನದ ಬದಲು ಕರಾಳ ದಿನವನ್ನಾಗಿ ಆಚರಿಸಿ; ರವಿಕುಮಾರ್

**ವಿಜಯಪುರ:** ಫೆಬ್ರವರಿ 14ರ ದಿನಾಂಕವನ್ನು ಪ್ರೇಮಿಗಳ ದಿನವನ್ನಾಗಿ ಆಚರಿಸುವ ಬದಲು ಪ್ರತಿಯೊಬ್ಬ ಭಾರತೀಯರು ದಿನವನ್ನಾಗಿ ಆಚರಿಸಬೇಕೆಂದು ಜೈ ಹಿಂದ್ ಯೋಧ ನಮನ ಬಳಗದ ರವಿಕುಮಾರ್ ತಿಳಿಸಿದರು. ಗಾಂಧಿ ಚೌಕದಲ್ಲಿ ಜೈ ಹಿಂದ್ ಯೋಧ ನಮನ ಬಳಗದ ವತಿಯಿಂದ ಏರ್ಪಡಿಸಲಾದ ಕಾಶ್ಮೀರದ ಪುಲ್ವಾಮ ದಾಳಿಯಲ್ಲಿ ಹುತಾತ್ಮರಾದಂತಹ ಸೈನಿಕರ ಕುಟುಂಬಕ್ಕೆ ಸಾಂತ್ವನ ರೂಪವಾಗಿ ಹಾಗೂ ಸೈನಿಕರಿಗೆ ಶ್ರದ್ಧಾಂಜಲಿ ಸೂಚಿಸುವ ಸಲುವಾಗಿ ದೀಪಗಳನ್ನು ಹಿಡಿದು, ತಾಯಿ ಭಾರತ ಮಾತೆಯ ಭಾವ ಚಿತ್ರದೊಂದಿಗೆ ಹೊರಟ ಮೌನ ಮೆರವಣಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು.

2019ರ ಫೆಬ್ರುವರಿ 14ರಂದು ಪಾಕಿಸ್ತಾನಿ ಬೆಂಬಲಿತ ಉಗ್ರಗಾಮಿಗಳು ಭಾರತೀಯ ಸೇನೆಯ ವಾಹನದ ಮೇಲೆ ಬಾಂಬ್ ಧಾಳಿ ಎಸೆಗುವ ಮೂಲಕ ನಮ್ಮ 40 ವೀರ ಯೋಧರು ಹುತಾತ್ಮರಾದಂತಹ ದಿನವನ್ನು ನಾವು ಪ್ರೇಮಿಗಳ ದಿನವನ್ನಾಗಿ ಆಚರಿಸದೆ ಕರಾಳ ದಿನವನ್ನಾಗಿ ಆಚರಿಸಬೇಕಾಗಿದೆ ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಜೈ ಹಿಂದ್ ಯೋಧ ನಮನ ಬಳಗದ ರಾಮಕೃಷ್ಣ ಹೆಗಡೆ, ಪುರಸಭಾ ಸದಸ್ಯರಾದ ಶಿಲ್ಪ ಅಜಿತ್ ಕುಮಾರ್, ಮಾಜಿ ಸದಸ್ಯರಾದ ಚ.ವಿಜಯಬಾಬು, ಮಹಂತಿನ ಮಠದ ಕಾರ್ಯದರ್ಶಿ ವಿ ವಿಶ್ವನಾಥ್, ಶಾಮಣ್ಣ, ಸುಬ್ಬಣ್ಣ ಮತ್ತಿತರರು ಭಾಗವಹಿಸಿದ್ದರು. ಜೈ ಹಿಂದ್ ಯೋಧ ನಮನ ಬಳಗದ ಕಾರ್ಯಕರ್ತರು ದೀಪಗಳನ್ನು ಹಿಡಿದು ಗಾಂಧಿ ಚೌಕದಿಂದ ಅಂಕತಟ್ಟಿ ನಂಜುಂಡಪ್ಪ ವೃತ್ತದವರೆಗೂ ಮೌನ ಮೆರವಣಿಗೆ ಕೈಗೊಂಡಿದ್ದರು.



# ಸಂತ ಸೇವಾಲಾಲ್ ವಿಚಾರಧಾರೆ, ಆದರ್ಶ ಅನುಕರಣೀಯ

**ಮಂಡ್ಯ:** ಸಂತ ಸೇವಾಲಾಲ್ ಅವರು ಸತ್ಯ, ಅಹಿಂಸೆ, ತ್ಯಾಗ ಮನೋಭಾವದ ನೀತಿಮಾತುಗಳನ್ನು ತಮ್ಮ ವಚನ, ಉಪದೇಶಗಳ ಮೂಲಕ ಅಂದಿನ ಸಮಾಜಕ್ಕೆ ಕೊಡುಗೆ ನೀಡಿದ್ದಾರೆ. ಜನಸಾಮಾನ್ಯರು ಸಂತ ಸೇವಾಲಾಲ್ ರವರ ಉತ್ತಮ ವಿಚಾರಧಾರೆಗಳನ್ನು ಅಳವಡಿಸಿಕೊಳ್ಳಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಎನ್. ಉದಯಕುಮಾರ್ ತಿಳಿಸಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಇವರ ಸಂಯುಕ್ತಾಶ್ರಯದಲ್ಲಿ ಗಾಂಧಿಭವನದಲ್ಲಿ ನಡೆದ 2023-24 ನೇ ಸಾಲಿನ ಶ್ರೀ ಸಂತ ಸೇವಾಲಾಲ್ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಸಂತ ಸೇವಾಲಾಲ್ ರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು.

ಅನೇಕ ಮಹನೀಯರು, ಸಂತರುಗಳು ತಮ್ಮದೇ ಆದ ಕೊಡುಗೆಗಳನ್ನು ಸಮಾಜಕ್ಕೆ ನೀಡಿದ್ದಾರೆ. ಸರ್ಕಾರವು ಕನ್ನಡ ಸಂಸ್ಕೃತಿಯ ಇಲಾಖೆ ವತಿಯಿಂದ ಹಲವಾರು ಮಹನೀಯರ ಜಯಂತಿಗಳನ್ನು ಆಚರಿಸುತ್ತಿದ್ದು, ವರ್ಷದಲ್ಲಿ 32 ಜಯಂತಿಗಳನ್ನು ಆಚರಿಸುತ್ತಿರುವುದು ಸಂತೋಷದ ವಿಷಯವಾಗಿದೆ ಎಂದರು.



ಸಂತ ಸೇವಾಲಾಲ್ ಮಹಾರಾಜರು ಭರತ ಖಂಡದ ಧಾರ್ಮಿಕ ರಾಯಭಾರಿಯಾಗಿದ್ದವರು ಹಾಗೂ ಹಲವು ಪವಾಡಗಳ ಮೂಲಕ ಜನರ ಮನ ಗೆದ್ದವರು. ತಮ್ಮ ಉಪದೇಶಗಳ ಮೂಲಕ ವ್ಯಸನ ಮುಕ್ತ ಸಮಾಜವನ್ನು ನಿರ್ಮಾಣ ಮಾಡಲು ಮುಂದಾದ ಮಹಾನ್ ವ್ಯಕ್ತಿಯಾಗಿದ್ದಾರೆ. ತಮ್ಮ ಭಕ್ತಿ ಮತ್ತು ಧ್ಯಾನದ ಮೂಲಕ ಇಡೀ ಸಮಾಜಕ್ಕೆ ಜೀವನಾದರ್ಶವಾಗಿದ್ದವರು. ಅವರು ಕೇವಲ ಒಂದು ಸಮುದಾಯಕ್ಕೆ ಸೀಮಿತರಾದವರಲ್ಲ. ಎಲ್ಲಾ ಜನರು ಒಟ್ಟಾಗಿ ಸಂತ ಸೇವಾಲಾಲರ ಜಯಂತಿಯನ್ನು ಆಚರಿಸಬೇಕು ಎಂದರು.

ಮುಖ್ಯ ಭಾಷಣಕಾರರಾದ ರಮೇಶ್ ನಾಯಕ್ ಅವರು ಮಾತನಾಡಿ ಸಂತ ಸೇವಾಲಾಲರ 285 ನೇ ಜಯಂತಿಯನ್ನು ಜಿಲ್ಲಾಮಟ್ಟದಲ್ಲಿ ಆಚರಿಸುತ್ತಿದ್ದೇವೆ. ಸಂತ ಸೇವಾಲಾಲರು ಯೋಗಿಯಾಗಿ, ಮಹಾಸಂತರಾಗಿ ಲೋಕಕಲ್ಯಾಣಕ್ಕಾಗಿ ಶ್ರಮಿಸಿದವರು. ಸರ್ವರನ್ನು ಒಳಗೊಂಡ ಸಮ ಸಮಾಜದ ನಿರ್ಮಾಣ ಹಾಗೂ ಸರ್ವರಲ್ಲೂ ಸೋದರತೆಯ ಭಾವವನ್ನು ಮೂಡಲು ಪ್ರೇರೇಪಿಸಿದವರು ಎಂದರು.

ಸೇವಾಲಾಲರು ತಮ್ಮ ತತ್ವ ಹಾಗೂ ಜ್ಞಾನದ ಮೂಲಕ ಲೋಕಕ್ಕೆ ಮುಕ್ತಿ ಮಾರ್ಗವನ್ನು ತೋರಿಸುವ ಮೂಲಕ ಜನರ ಅಜ್ಞಾನವನ್ನು ದೂರಮಾಡಿದವರು. ಅಂದಿನ ಸಮಾಜದ ಜನತೆಗೆ ಶಿಕ್ಷಣವನ್ನೂ ಪಡೆದು, ಧರ್ಮಾತೀತರಾಗಿ ಎಂದು ಕರೆಕೊಟ್ಟವರು. ಅವರ ಉಪದೇಶಗಳನ್ನು ಜನರು ಪ್ರಸ್ತುತ ಜೀವನದಲ್ಲಿ ಅಳವಡಿಸಿಕೊಂಡು ಜೀವನ ನಡೆಸಬೇಕು ಎಂದರು.

ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಶ್ರೀ ಸಂತ ಸೇವಾಲಾಲ್ ರವರ ಭಾವಚಿತ್ರ ಮೆರವಣಿಗೆಯು ಕಲಾಮಂದಿರದಿಂದ ಹೊರಟು ಗಾಂಧಿಭವನದಲ್ಲಿ ಸಮಾವೇಶಗೊಂಡಿತು.

ಮುಖಂಡರುಗಳಾದ ವೆಂಕಟನಾಯಕ್, ಕಿರಣ್ ಕುಮಾರ್, ಮಂಗಳಮ್ಮ, ಜಯಲಕ್ಷ್ಮಿ ಹಾಗೂ ಇನ್ನಿತರು ಉಪಸ್ಥಿತರಿದ್ದರು.

### ಮತಗಟ್ಟೆಗಳತ್ತ ತೆರಳಿದ ಸಿಬ್ಬಂದಿ: ಇಂದಿನ ಮತದಾನಕ್ಕೆ ಸಕಲ ಸಜ್ಜು

# ಅಚ್ಚುಕಟ್ಟಾಗಿ ನಡೆದ ಮಸ್ಟರಿಂಗ್

**ರಾಮನಗರ:** ರಾಜ್ಯ ವಿಧಾನ ಸಭೆಗೆ ಬೆಂಗಳೂರು ಶಿಕ್ಷಕರ ಕ್ಷೇತ್ರದಿಂದ ನಡೆಯಲಿರುವ ಚುನಾವಣೆಯ ಮತದಾನ ಫೆ.16ರ ಶುಕ್ರವಾರ ಬೆಳಿಗ್ಗೆ 8 ರಿಂದ ಆರಂಭಗೊಳ್ಳಲಿದ್ದು, ಈ ಪ್ರಕ್ರಿಯೆಯಲ್ಲಿ ಮತಗಟ್ಟೆ ಸಿಬ್ಬಂದಿಗಳಿಗೆ ಮತ ಪೆಟ್ಟಿಗೆಗಳು ಹಾಗೂ ಚುನಾವಣಾ ಸಾಮಗ್ರಿಯನ್ನು ವಿತರಿಸುವ ಪ್ರಮುಖ ಘಟ್ಟವಾಗಿರುವ ಮಸ್ಟರಿಂಗ್ ಕಾರ್ಯ ಫೆ.15ರ ಗುರುವಾರದಂದು ಅಚ್ಚುಕಟ್ಟಾಗಿ ನೆರವೇರಿದ್ದು, ಮತದಾನ ಕರ್ತವ್ಯಕ್ಕೆ ನಿಯೋಜಿತಗೊಂಡ ಅಧಿಕಾರಿ, ಸಿಬ್ಬಂದಿ ಮತಗಟ್ಟೆಗಳತ್ತ ತೆರಳಿದರು.

ರಾಮನಗರ ತಾಲ್ಲೂಕು ಆಡಳಿತ ಸೌಧದಲ್ಲಿ ನಡೆದ ಮಸ್ಟರಿಂಗ್ ಕಾರ್ಯದಲ್ಲಿ ಜಿಲ್ಲಾಧಿಕಾರಿಗಳಾದ ಡಾ. ಅವಿನಾಶ್ ಮೆನನ್ ರಾಜೇಂದ್ರನ್ ಅವರು ಸ್ಥಳದಲ್ಲಿಯೇ ಉಪಸ್ಥಿತರಿದ್ದು, ಮಸ್ಟರಿಂಗ್ ಕಾರ್ಯ ಸುಗಮವಾಗಿ ನಡೆಯಲು ವ್ಯವಸ್ಥೆಗೊಳಿಸಿದ್ದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾರ್ತಿಕ್ ರೆಡ್ಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ದಿಗ್ವಿಜಯ್ ಬೋಡ್ಕೆ ಮಸ್ಟರಿಂಗ್ ಕಾರ್ಯದಲ್ಲಿ ಭಾಗವಹಿಸಿ ಚುನಾವಣೆಯು ಯಶಸ್ವಿಯಾಗಿ ನಡೆಸಲು ನಿರ್ದೇಶನಗಳನ್ನು ನೀಡಿದರು.

ಮತಗಟ್ಟೆಗಳಿಗೆ ನೇಮಕಗೊಂಡಿರುವ ಅಧಿಕಾರಿ, ಸಿಬ್ಬಂದಿಗಳು ಬೆಳಿಗ್ಗೆ 9 ಗಂಟೆಯ ಹೊತ್ತಿಗೆ ಮಸ್ಟರಿಂಗ್ ಕಾರ್ಯ ಜರುಗಿದ ತಾಲ್ಲೂಕು ಆಡಳಿತ ಸೌಧದ ಆವರಣದಲ್ಲಿ ಸೇರತೊಡಗಿದರು. ಇದರ ಜೊತೆಗೆ ಚುನಾವಣೆ ಕಾರ್ಯ ಹಾಗೂ ಮತಗಟ್ಟೆಯ ಬಂದೋಬಸ್ತ್‌ಗಾಗಿ ನಿಯೋಜಿತಗೊಂಡಿರುವ ಪೊಲೀಸರು ಕೂಡ ಆಗಮಿಸಿದ್ದರು. ಮತದಾನ ಪ್ರಕ್ರಿಯೆಗೆ ತೆರಳುವ ಅಧಿಕಾರಿ, ಸಿಬ್ಬಂದಿ ಹಾಗೂ ಪೊಲೀಸರನ್ನು ಕರೆದುಕೊಂಡು ಹೋಗಲು 7 ಜೀಪ್‌ಗಳು ಮಿನಿ ವಿಧಾನಸೌಧದ ಆವರಣದಲ್ಲಿದ್ದವು.

ಮಾರ್ಗದರ್ಶನ ಮಾಡಿದ ಡಿಸಿ: ಮಸ್ಟರಿಂಗ್ ಕಾರ್ಯ ಜರುಗಿದ ಮಿನಿ ವಿಧಾನಸೌಧದ ಎರಡನೇ ಮಹಡಿಗೆ ಬೆಳಿಗ್ಗೆಯೇ ಆಗಮಿಸಿದ ಜಿಲ್ಲಾಧಿಕಾರಿ ಡಾ. ಅವಿನಾಶ್ ಮೆನನ್ ರಾಜೇಂದ್ರನ್ ಅವರು, ಮಸ್ಟರಿಂಗ್ ಕಾರ್ಯದ ಸಮಗ್ರ ವಿವರವನ್ನು ಪಡೆದುಕೊಂಡರು, ಮತಗಟ್ಟೆ ಅಧಿಕಾರಿ, ಸಿಬ್ಬಂದಿಗಳೊಂದಿಗೆ ಮಾತನಾಡಿದ ಜಿಲ್ಲಾಧಿಕಾರಿಗಳು, ಯಾವುದೇ ಆತಂಕವಿಲ್ಲದೆ, ಧೈರ್ಯದಿಂದ ಹಾಗೂ ಪ್ರಾಮಾಣಿಕತೆಯಿಂದ ಚುನಾವಣಾ ಕರ್ತವ್ಯ ನಿರ್ವಹಿಸುವಂತೆ ನೈತಿಕ ಸ್ಥೈರ್ಯ ತುಂಬಿದರು.

ಅಚ್ಚುಕಟ್ಟಾದ ವ್ಯವಸ್ಥೆ: ತಾಲ್ಲೂಕು ಆಡಳಿತ ಸೌಧದಲ್ಲಿ ಏರ್ಪಡಿಸಲಾದ ಮಸ್ಟರಿಂಗ್ ಕಾರ್ಯ ಯಶಸ್ವಿಯಾಗಿ, ಯಾವುದೇ ಗೊಂದಲಕ್ಕೆ ಆಸ್ಪದವಿಲ್ಲದಂತೆ ನೆರವೇರಿಸಲು ಪೂರ್ವಭಾವಿಯಾಗಿ ಯೋಜನೆ ರೂಪಿಸಿ, ಅದರಂತೆಯೇ ಕಾರ್ಯಗತಗೊಳಿಸಲಾಯಿತು. ಚುನಾವಣಾ ಸಾಮಗ್ರಿ ವಿತರಣೆ, ಮತ ಪೆಟ್ಟಿಗೆಗಳ ವಿತರಣೆ, ಚುನಾವಣೆಗೆ ಮತಗಟ್ಟೆಗಳಿಗೆ ನಿಯೋಜನೆ, ಚುನಾವಣಾ ಕರ್ತವ್ಯಕ್ಕೆ ತೆರಳಲು ಆಗಮಿಸಿದ್ದ ಅಧಿಕಾರಿ, ಸಿಬ್ಬಂದಿಗಳಿಗೆ ಕುಡಿಯುವ ನೀರು ಹಾಗೂ ಉಟೋಪಹಾರದ ವ್ಯವಸ್ಥೆ ಕೈಗೊಳ್ಳಲಾಯಿತು. ಮತಗಟ್ಟೆಗಳತ್ತ ತೆರಳುವ ಮುನ್ನ ಮಧ್ಯಾಹ್ನದ ಊಟ ಪೂರೈಸಿಕೊಂಡು ಹೋಗುವ ರೀತಿ ವ್ಯವಸ್ಥೆ ಮಾಡಲಾಯಿತು. ಮತದಾನ ಕಾರ್ಯಕ್ಕೆ ನೇಮಕಗೊಂಡಿರುವ ಹಲವು ಅಧಿಕಾರಿ, ಸಿಬ್ಬಂದಿಗಳೂ ಕೂಡ ಮಸ್ಟರಿಂಗ್ ಕಾರ್ಯಕ್ಕೆ ಕೈಗೊಂಡ ವ್ಯವಸ್ಥೆ ಬಗ್ಗೆ ತೃಪ್ತಿ ವ್ಯಕ್ತಪಡಿಸಿದರು. ಮಧ್ಯಾಹ್ನದ ಊಟ ಸವಿದ ಅಧಿಕಾರಿ, ಸಿಬ್ಬಂದಿಗಳು, ತಮಗೆ ನಿಯೋಜಿಸಲಾದ ಮತಗಟ್ಟೆಗಳಿಗೆ ಆಯಾ ಮಾರ್ಗದ ವಾಹನಗಳ ಮೂಲಕ ತೆರಳಿದರು.

**ಮತಗಟ್ಟೆಗಳ ವಿವರ**

**ಬೆಂಗಳೂರು ಶಿಕ್ಷಕರ ಕ್ಷೇತ್ರಕ್ಕೆ ನಡೆಯಲಿರುವ ಚುನಾವಣೆಗೆ ಜಿಲ್ಲೆಯಲ್ಲಿ ಒಟ್ಟು 9 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ರಾಮನಗರ, ಚನ್ನಪಟ್ಟಣ, ಮಾಗಡಿ ಹಾಗೂ ಕನಕಪುರ ತಾಲ್ಲೂಕುಗಳಲ್ಲಿ ತಲಾ 2 ಹಾಗೂ ಹಾರೋಹಳ್ಳಿ ತಾಲ್ಲೂಕು ವ್ಯಾಪ್ತಿಯಲ್ಲಿ ಒಂದು ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ರಾಮನಗರ ತಾಲ್ಲೂಕಿನಲ್ಲಿ ತಾಲೂಕು ಆಡಳಿತ ಸೌಧದಲ್ಲಿರುವ ತಹಶೀಲ್ದಾರ್ ಕಚೇರಿ ಆವರಣದಲ್ಲಿ 2 ಮತಗಟ್ಟೆಗಳಿದ್ದು, ಇಲ್ಲಿ 654 ಮತದಾರರಿದ್ದಾರೆ. ಮಾಗಡಿ ತಾಲ್ಲೂಕಿನ ಕುದೂರು ಗ್ರಾಮ ಪಂಚಾಯತ್ ಕಚೇರಿಯಲ್ಲಿಯಲ್ಲಿ ಸ್ಥಾಪಿಸಲಾಗಿರುವ ಮತಗಟ್ಟೆಯಲ್ಲಿ 216 ಮತದಾರರು ಹಾಗೂ ತಹಶೀಲ್ದಾರರ ಕಚೇರಿಯ ಕೋರ್ಟ್ ಆವರಣದಲ್ಲಿ ಸ್ಥಾಪಿಸಲಾಗಿರುವ ಮತಗಟ್ಟೆ ವ್ಯಾಪ್ತಿಯ 248 ಮತದಾರರು ಸೇರಿದಂತೆ ಒಟ್ಟು 464 ಮತದಾರರು ತಮ್ಮ ಹಕ್ಕು ಚಲಾಯಿಸಲಿದ್ದಾರೆ. ಚನ್ನಪಟ್ಟಣ ತಾಲ್ಲೂಕಿನ ತಾಲ್ಲೂಕು ಆಡಳಿತ ಸೌಧದ ತಹಶೀಲ್ದಾರ್ ಕಚೇರಿಯಲ್ಲಿ ಸ್ಥಾಪಿಸಲಾದ ಮತಗಟ್ಟೆಯಲ್ಲಿ 631 ಜನ ಮತದಾರರಿದ್ದರೆ, ಕೋಡಂಬಳ್ಳಿಯ ನಾಡಕಚೇರಿಯಲ್ಲಿ ರಚಿಸಲಾಗಿರುವ ಮತಗಟ್ಟೆಯಲ್ಲಿ 140 ಜನ ಮತದಾರರಿದ್ದು ಒಟ್ಟು ಚನ್ನಪಟ್ಟಣ ತಾಲ್ಲೂಕಿನ 771 ಮತದಾರರಿದ್ದಾರೆ. ಹಾರೋಹಳ್ಳಿ ತಾಲೂಕಿನ ಕೆಪಿಎಸ್ ಜಿಎಚ್‌ಪಿಎಸ್ ಮಾಡಲ್ ಹೈಯರ್ ಪ್ರೈಮರಿ ಸ್ಕೂಲ್‌ನಲ್ಲಿ ಸ್ಥಾಪಿಸಲಾಗಿರುವ ಒಂದು ಮತಗಟ್ಟೆಯಲ್ಲಿ 126 ಜನ ಮತದಾರರು ತಮ್ಮ ಹಕ್ಕು ಚಲಾಯಿಸಲಿದ್ದಾರೆ. ಕನಕಪುರ ತಾಲ್ಲೂಕಿನ ತಾಲ್ಲೂಕು ಆಡಳಿತ ಸೌಧದಲ್ಲಿರುವತಹಶೀಲ್ದಾರ್ ಕಚೇರಿಯಲ್ಲಿ ಸ್ಥಾಪಿಸಲಾಗಿರುವ ಎರಡು ಮತಗಟ್ಟೆಗಳಲ್ಲಿ 528 ಜನ ಮತದಾರರಿದ್ದಾರೆ.**

**36 ಸಿಬ್ಬಂದಿ ಮತಗಟ್ಟೆ ಕರ್ತವ್ಯಕ್ಕೆ ನೇಮಕ**

**ಜಿಲ್ಲೆಯಲ್ಲಿ ಮತದಾನ ಕಾರ್ಯ ಸಮರ್ಪಕವಾಗಿ ಜರುಗಿಸಲು ಒಟ್ಟು 36 ಅಧಿಕಾರಿ, ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಜಿಲ್ಲೆಯಲ್ಲಿ 1,456 ಪುರುಷ ಹಾಗೂ 1,087 ಮಹಿಳಾ ಮತದಾರರು ಸೇರಿದಂತೆ ಒಟ್ಟು 2,543 ಮತದಾರರು ತಮ್ಮ ಹಕ್ಕು ಚಲಾಯಿಸಲಿದ್ದಾರೆ. ಮತದಾನ ಕಾರ್ಯ ಫೆ. 16 ರಂದು ಬೆಳಿಗ್ಗೆ 08 ಗಂಟೆಯಿಂದ ಸಂಜೆ 04 ಗಂಟೆಯವರೆಗೆ ನಡೆಯಲಿದ್ದು, ಸುಗಮ ಮತದಾನಕ್ಕೆ ಅಗತ್ಯ ವ್ಯವಸ್ಥೆಯನ್ನು ಜಿಲ್ಲಾಡಳಿತ ಕೈಗೊಂಡಿದೆ. ಅರ್ಹ ಮತದಾರರು ತಪ್ಪದೆ ತಮ್ಮ ಮತದಾನದ ಹಕ್ಕು ಚಲಾಯಿಸುವ ಮೂಲಕ ಪ್ರಜಾಪ್ರಭುತ್ವ ಹಬ್ಬದ ಸಂಭ್ರಮದಲ್ಲಿ ಪಾಲ್ಗೊಳ್ಳುವಂತಾಗಲಿ ಎಂಬುದು ಜಿಲ್ಲಾಡಳಿತದ ಆಶಯವಾಗಿದೆ.**

# ಕೆಆರ್‌ಎಸ್ ಪಕ್ಷದಿಂದ ಸಬ್ಬೇನಹಳ್ಳಿಗೆ ನ್ಯಾಯಬೆಲೆ ಅಂಗಡಿ ಮಂಜೂರು

**ಹುಳಿಯಾರು:** ಜನಪರ ಕೆಲಸಗಳಿಂದ ಜನರ ವಿಶ್ವಾಸಗಳಿಸುತ್ತಿರುವ ಕೆಆರ್‌ಎಸ್ ಪಕ್ಷ ಈಗ ಚಿಕ್ಕನಾಯಕನಹಳ್ಳಿ ತಾಲೂಕು ಹಂದನಕೆರೆ ಹೋಬಳಿಯ ಸಬ್ಬೇನಹಳ್ಳಿಗೆ ನ್ಯಾಯಬೆಲೆ ಅಂಗಡಿ ಮಂಜೂರು ಮಾಡಿಸಿ ಸಾರ್ವಜನಿಕರ ಪ್ರಶಂಸೆಗೆ ಪಾತ್ರವಾಗಿದೆ.

ಸಬ್ಬೇನಹಳ್ಳಿ ಗ್ರಾಮದಿಂದ ಪ್ರತಿ ಮಾಹೆ ಸುಮಾರು 4 ಕಿಲೋಮೀಟರ್ ದೂದಲ್ಲಿರುವ ಚೌಲಕಟ್ಟೆ ನ್ಯಾಯಬೆಲೆ ಅಂಗಡಿಗೆ ಹೋಗಿ ಪಡಿತರ ತರುವ ಅನಿವಾರ್ಯತೆಯಿತ್ತು. ಇದರಿಂದ ಅನಗತ್ಯವಾಗಿ ಸಮಯ ಮತ್ತು ಪಡಿತರ ತರಲು ವಾಹನದ ಪೆಟ್ರೋಲ್ ವೆಚ್ಚವಾಗುತ್ತಿತ್ತು. ಅಲ್ಲದೆ ವೃದ್ಧರು, ಸ್ತ್ರೀಯರು ಪಡಿತರ ತರಲು ಮತ್ತೊಬ್ಬರನ್ನು ಆಶ್ರಯಿಸಬೇಕಿತ್ತು. ಈ ಸಮಸ್ಯೆ ಮನಗಂಡ ಕೆಆರ್‌ಎಸ್ ಪಕ್ಷದ ಸಬ್ಬೇನಹಳ್ಳಿ ಶ್ರೀನಿವಾಸ್ ಇಲಾಖೆಗೆ ಇಲ್ಲಿನ ಸಮಸ್ಯೆ ವಿವರಿಸಿ ನ್ಯಾಯಬೆಲೆ ಅಂಗಡಿ ಮಂಜೂರಿಗೆ ಮನವಿ ಸಲ್ಲಿಸಿತ್ತು.

ಶ್ರೀನಿವಾಸ್ ಮನವಿಗೆ ಸಬ್ಬೇನಹಳ್ಳಿಗೆ ಪಡಿತರ ವಿತರಣಾ ಕೇಂದ್ರ ತೆರೆಯಲು ಇಲಾಖೆ ಅನುಮತಿ ನೀಡಿದ್ದು ಗುರುವಾರ ಹಂದನಕೆರೆ ಪ್ರಾಥಮಿಕ ಕೃಷಿ ಸಹಕಾರ ಸಂಘದ ಅಧ್ಯಕ್ಷರು, ಕಾರ್ಯದರ್ಶಿಗಳು ಸಬ್ಬೇನಹಳ್ಳಿಯಲ್ಲಿ ಉಪಕೇಂದ್ರವನ್ನು ಉದ್ಘಾಟಿಸಿದರು.

ಇದೇ ವೇಳೆ ಮಾತನಾಡಿದ ಕೆಆರ್ ಎಸ್ ಪಕ್ಷದ ಶ್ರೀನಿವಾಸ್ ಕೆಆರ್ ಎಸ್ ಪಕ್ಷ ಅಧಿಕಾರದಲ್ಲಿ ಇಲ್ಲದಿದ್ದರೂ ಉತ್ತಮವಾದ ಕೆಲಸ ಮಾಡುತ್ತಿದೆ. ಜನರು ಚುನಾವಣೆಗಳಲ್ಲಿ ಕೆಆರ್‌ಎಸ್ ಪಕ್ಷವನ್ನು ಬೆಂಬಲಿಸಿದರೆ ಇನ್ನಷ್ಟು ಒಳ್ಳೆ ಕೆಲಸ ಮಾಡುತ್ತದೆ, ಇದೇ ರೀತಿ ಹಿಂದೆ ಕೆಆರ್‌ಎಸ್ ಪಕ್ಷದ ಹೋರಾಟದ ಫಲದಿಂದ ಸಬ್ಬೇನಹಳ್ಳಿಗೆ ಬಸ್ ಬರುವಂತಾಗಿತ್ತು ಎಂದು ತಿಳಿಸಿದರು.

ಅಧ್ಯಕ್ಷರಾದ ಎಂ.ನಿಂಗರಾಜು ಮಾತನಾಡಿ ನಿಮ್ಮೂರಿನ ಈ ಸತ್ಕಾರ್ಯಕ್ಕೆ ಶ್ರೀನಿವಾಸ ರವರ ಶ್ರಮ ಹೆಚ್ಚಿನದು ಎಂದು ಅಭಿನಂದಿಸಿದರು, ಗ್ರಾಮಸ್ತರು ಶ್ರೀನಿವಾಸ್ ರವರಿಗೆ ಶಾಲು, ಹಾರ ಹಾಕಿ ನಿಮ್ಮಿಂದ ಇನ್ನಷ್ಟು ಸಮಾಜಮುಖಿ ಕೆಲಸ ವಾಗಲಿ ಎಂದು ಅಭಿನಂದಿಸಿದರು. ಕಾರ್ಯದರ್ಶಿ ಅನಿಲ್ ಕುಮಾರ್, ನಿರ್ದೇಶಕರಾದ ಸಿದ್ದಲಿಂಗಸ್ವಾಮಿ, ಪ್ರಕಾಶ್, ಬಸವರಾಜು, ಮೈಲಾರಪ್ಪ, ಗ್ರಾಮ ಪಂಚಾಯ್ತಿ ಸದಸ್ಯ ನಿರಂಜನ್ ಮೂರ್ತಿ ಉಪಸ್ಥಿತರಿದ್ದರು.



## 11 ಪುರಸಭಾ ಪೌರಕಾರ್ಮಿಕರಿಗೆ ಖಾಯಂಗೊಳಿಸಿದ ನೇಮಕಾತಿ ಪತ್ರ ವಿತರಣೆ



**ವಿಜಯಪುರ:** ಪೌರಕಾರ್ಮಿಕರು ಪಟ್ಟಣದ ಸ್ವಚ್ಛತೆಗಾಗಿ ತಮ್ಮ ಆರೋಗ್ಯವನ್ನು ಲೆಕ್ಕಿಸದೆ ಸೇವೆ ಸಲ್ಲಿಸುತ್ತಿರುವ ಪೌರಕಾರ್ಮಿಕರ ಸೇವೆ ಅಮೋಘವಾದುದು ಎಂದು ಪುರಸಭೆ ಅಧ್ಯಕ್ಷೆ ವಿಮಲಾಬಸವರಾಜ್ ಎಂದರು. ಪಟ್ಟಣದ ಪುರಸಭಾ ಆವರಣದಲ್ಲಿ 15 ಮಂದಿ ಪುರಸಭಾ ಪೌರಕಾರ್ಮಿಕರಲ್ಲಿ 11 ಮಂದಿ ಸರಕಾರ ಖಾಯಂಗೋಳಿಸಿದ್ದು ಅವರಿಗೆ ನೇಮಕಾತಿ ಪತ್ರ ವಿತರಿಸಿ ಮಾತನಾಡಿದರು. ಸ್ವಚ್ಛತೆ ಕಾಪಾಡುವಲ್ಲಿ ಪೌರಕಾರ್ಮಿಕರ ಪಾತ್ರ ಪ್ರಶಂಸನೀಯವಾಗಿದ್ದು ಚಳಿ, ಮಳೆ, ಬಿಸಿಲೆನ್ನದೇ ಸ್ವಚ್ಛತಾ ಕಾರ್ಯದಲ್ಲಿ ತೊಡಗಿಸಿಕೊಳ್ಳುವ ಪೌರಕಾರ್ಮಿಕರು ಆರೋಗ್ಯದ ಕಡೆ ಹೆಚ್ಚು ಗಮನಹರಿಸಬೇಕು. ಸ್ವಚ್ಛತೆ ಕಾರ್ಯದ ವೇಳೆ ಮುಂಜಾಗ್ರತಾ ಕ್ರಮಗಳನ್ನು ವಹಿಸಬೇಕು. ಸರಕಾರದಿಂದ ಲಭಿಸುವ ಸವಲತ್ತುಗಳನ್ನು ಕೇಳಿ ಪಡೆಯಬೇಕು ಎಂದರು. ಮುಖ್ಯಾಧಿಕಾರಿ ಜಿ.ಆರ್. ಸಂತೋಷ್ ಮಾತನಾಡಿ, ಪಟ್ಟಣದಲ್ಲಿ ಸ್ವಚ್ಛತಾ ಕೆಲಸ ನಿರ್ವಹಿಸುವ ಪೌರಕಾರ್ಮಿಕರು ಪುರಸಭೆಯಲ್ಲಿ ದೊರೆಯುವ ನಾನಾ ಸೌಲಭ್ಯಗಳನ್ನು ಬಳಸಿಕೊಳ್ಳಬೇಕು. ಎಂದರು.

ಕಾಯಂಗೊಂಡ ಪೌರಕಾರ್ಮಿಕರು: ಪುರಸಭೆಯಲ್ಲಿ ಕೆಲಸ ಮಾಡುತ್ತಿದ್ದ 11 ಪೌರಕಾರ್ಮಿಕರಾದ ಕೃಷ್ಣಪ್ಪ, ಡಿ.ಅಣ್ಣಪ್ಪ, ಶಾರದಮ್ಮ, ಕೋಕಿಲ, ಆರ್.ಲಕ್ಷ್ಮಣ, ನಾರಾಯಣಸ್ವಾಮಿ, ಎಂ. ಶಿವ, ಎಂ.ಮಂಜುನಾಥ, ಕೆ.ಮಾರಪ್ಪ, ಪ್ರಸಾದ, ಶಿವ ಕಾಯಂಗೊಂಡವರು. ಪುರಸಭೆ ಉಪಾಧ್ಯಕ್ಷ ಎಂ.ಕೇಶವಪ್ಪ, ಸದಸ್ಯರಾದ ಭೈರೇಗೌಡ, ಎಂ.ರಾಜಣ್ಣ, ರಾಮು, ಶ್ರೀರಾಮಪ್ಪ, ಕಂದಾಯ ಅಧಿಕಾರಿ ಚಂದ್ರು, ಕಂದಾಯ ನಿರೀಕ್ಷಕ ತ್ಯಾಗರಾಜ್, ಎಂಜಿನಿಯರ್ ಶೇಖರ್, ಅನಿಲ್, ಲಿಂಗಣ್ಣ, ಶಿವನಾಗೇಗೌಡ, ಪವನ್ ಜ್ಯೋಷಿ, ಮೇಸ್ತ್ರೀ ನಾಗರಾಜ್, ಜನಾರ್ಧನ ಇದ್ದರು.

## ಭಾರತದ ಇತಿಹಾಸದಲ್ಲಿ ಅತ್ಯಂತ ಕರಾಳ ದಿನ



**ವಿಜಯಪುರ:** ಪಟ್ಟಣದ ಪ್ರಗತಿ ಆಂಗ್ಲ ಶಾಲೆಯ ಆವರಣದಲ್ಲಿ ಪುಲ್ವಾಮ ಉಗ್ರ ದಾಳಿಯಲ್ಲಿ ಹುತಾತ್ಮರಾದ ಯೋಧರಿಗೆ ಶ್ರದ್ಧಾಂಜಲಿ ಸಲ್ಲಿಸುವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲಾ ಮುಖ್ಯೋಪಾಧ್ಯಾಯರಾದ ಜೆ.ಎನ್.ಪ್ರಕಾಶ್ ರವರ ವಹಿಸಿ ಕಾರ್ಯ ಕ್ರಮ ಕುರಿತು ಮಾತನಾಡಿ 2019ರಲ್ಲಿ ಪುಲ್ವಾಮದಲ್ಲಿ ಭಯೋತ್ಪಾದಕರ ವಿರುದ್ಧ ನಡೆದಂತಹ ದಾಳಿಯಲ್ಲಿ ಭಾರತದ 40 ವೀರ ಯೋಧರು ಹುತಾತ್ಮರಾದಂತಹ ಪುಣ್ಯ ದಿನ. ನಮ್ಮ ಕೆಚ್ಚೆದೆಯ ವೀರ ಯೋಧರು ಬಲಿದಾನ ಗೈದ ದಿನ ಎಂದು ಹೇಳಿದರು. ಕಾರ್ಯಕ್ರಮದ ಕುರಿತು ಆರನೇ ತರಗತಿ ವಿದ್ಯಾರ್ಥಿಯಾದ ಸಿಂಚನ .ಎಸ್ ರವರು ಮಾತನಾಡಿ ಫೆಬ್ರವರಿ 14, 2019 ರಂದು ಜಮ್ಮು ಶ್ರೀನಗರದ ರಾಷ್ಟ್ರೀಯ ಹೆದ್ದಾರಿಯಲ್ಲಿ ಭದ್ರತಾ ಸಿಬ್ಬಂದಿಯನ್ನು ಸಾಗಿಸುವ ವಾಹನಕ್ಕೆ ಜಮ್ಮು ಮತ್ತು ಕಾಶ್ಮೀರದ ಪುಲ್ವಾಮಾ ಜಿಲ್ಲೆಯ ಲೆತ್ಪೊರದಲ್ಲಿ ಆತ್ಮಹತ್ಯೆ ಬಾಂಬರ್ ವಾಹನದಿಂದ ದಾಳಿ ಮಾಡಲಾಯಿತು. ಈ ಒಂದು ದಾಳಿಯಲ್ಲಿ ಭಾರತದ 40 ಯೋಧರು ಹುತಾತ್ಮರಾದಂತಹ ದಿನ ಎಂದು ಹೇಳಿದರು. ಆರನೇ ತರಗತಿಯ ವಿದ್ಯಾರ್ಥಿಗಳು ಈ ಒಂದು ಘಟನೆಯ ಕುರಿತು ಒಂದು ಕಿರು ನಾಟಕವನ್ನು ಪ್ರದರ್ಶನ ಮಾಡಿದರು. ಶಿಕ್ಷಕಿಯರಾದ ವನಜಾಕ್ಷಿ,ಹಾಗೂ ನಿರ್ಮಲ ರವರು ಮಕ್ಕಳಿಗೆ 2019ರಲ್ಲಿ ಪುಲ್ವಾಮದಲ್ಲಿ ಮಡಿದ ವೀರ ಯೋಧರ ಬಗ್ಗೆ ತಿಳಿಸಿಕೊಟ್ಟರು.ಒಂದು ನಿಮಿಷ ಮೌನಚರಣೆ ಮೂಲಕ ಯೋಧರಿಗೆ ಗೌರವ ಸಮರ್ಪಿಸಲಾಯಿತು.

### ಜಿಲ್ಲಾಧಿಕಾರಿ ಡಾ: ಕುಮಾರ ಮಾಹಿತಿ

# ಮಾ.2, 3ಕ್ಕೆ ಬೂದನೂರು ಉತ್ಸವ

**ಮಂಡ್ಯ:** ಮಂಡ್ಯ ತಾಲ್ಲೂಕು ಬೂದನೂರು ಉತ್ಸವವನ್ನು ಮಾರ್ಚ್ 2 ಹಾಗೂ 3 ರಂದು ಹಮ್ಮಿಕೊಳ್ಳಲಾಗುವುದು ಅಗತ್ಯ ಸಿದ್ಧತೆ ಮಾಡಿಕೊಳ್ಳಿ ಎಂದು ಜಿಲ್ಲಾಧಿಕಾರಿ ಡಾ: ಕುಮಾರ ಅವರು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವೇದಿಕೆ, ಆಹಾರ, ಸ್ವಾಗತ, ಸೇರಿದಂತೆ ವಿವಿಧ ಸಮಿತಿಗಳನ್ನು ರಚಿಸಲಾಗಿದೆ. ಕಾರ್ಯಕ್ರಮಗಳು ಉತ್ತಮವಾಗಿ ಸಂಘಟಿಸಲು ಕಾರ್ಯ ಪ್ರವೃತ್ತರಾಗಬೇಕು ಎಂದರು.

ಕಾರ್ಯಕ್ರಮ ನಡೆಯುವ ಸ್ಥಳ ಹಾಗೂ ಸುತ್ತಮುತ್ತಲಿನ ಪ್ರದೇಶದ ಸ್ವಚ್ಛತೆ ಕೆಲಸಗಳು ಪ್ರಾರಂಭವಾಗಬೇಕು. ಸಣ್ಣ ಪುಟ್ಟ ರಸ್ತೆ ದುರಸ್ತಿ ಕೆಲಸಗಳಿದ್ದಲ್ಲಿ ಅವುಗಳನ್ನು ಶೀಘ್ರವಾಗಿ ಪ್ರಾರಂಭಿಸಿ ಪೂರ್ಣಗೊಳಿಸಬೇಕು ಎಂದರು.

ವಾಹನಗಳ ನಿಲುಗಡೆ ಪ್ರದೇಶವನ್ನು ಸಮತಟ್ಟು ಮಾಡಿ ವಿದ್ಯುತ್ ದೀಪಗಳ ವ್ಯವಸ್ಥೆ ಮಾಡಿ. ಕಾರ್ಯಕ್ರಮ ನಡೆಯುವ ಸ್ಥಳ ಹಾಗೂ ಅವಶ್ಯಕತೆ ಇರುವ ಪ್ರದೇಶಗಳಲ್ಲಿ ಸಿ.ಸಿ.ಟಿ.ವಿ ವ್ಯವಸ್ಥೆ ಮಾಡಿಕೊಳ್ಳಿ ಎಂದರು.

ಇದೇ ಮೊದಲ ಬಾರಿಗೆ ಗ್ರಾಮ ಮಟ್ಟದಲ್ಲಿ ಉತ್ಸವ



ಆಯೋಜನೆ ಮಾಡಲಾಗುತ್ತಿದ್ದು, ಕುಡಿಯುವ ನೀರು ಹಾಗೂ ತಾತ್ಕಾಲಿಕ ಶೌಚಾಲಯದ ವ್ಯವಸ್ಥೆ ಮಾಡುವಂತೆ ತಿಳಿಸಿದರು.

ಆಹಾರ ಮೇಳ ಎಲ್ಲಾ ಜಿಲ್ಲೆಗಳ ವಿಶೇಷತೆಯುಳ್ಳ ವಿವಿಧ ಆಹಾರ ಖಾದ್ಯ ತಯಾರಿಸುವ ಆಹಾರ ಮೇಳವನ್ನು ಆಯೋಜಿಸಿ ಮಳಿಗೆಗಳಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಿ ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶೇಖ್ ತನ್ವಿರ್ ಆಸಿಫ್, ಅಪರ ಜಿಲ್ಲಾಧಿಕಾರಿ ಡಾ: ಹೆಚ್.ಎಲ್ ನಾಗರಾಜು, ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕ ರಾಘವೇಂದ್ರ, ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಹೊಗೆಯಿಂದ ಧಗೆ, ಧಗೆ ತಗ್ಗಿಸುವ ಬಗೆ ಹೇಗೆ?

**ಹುಳಿಯಾರು:** ನಾವು ನಿರಂತರವಾಗಿ ವಾತಾವರಣಕ್ಕೆ ಒಂದೇ ಸಮನೇ ಹೊಗೆಯನ್ನು ತುಂಬಿ ಭೂಮಿಯ ಧಗೆಯನ್ನು ಹೆಚ್ಚಿಸುತ್ತಿದ್ದೇವೆ, ಈಗ ಧಗೆಯನ್ನು ತಗ್ಗಿಸುವ ಬಗೆ ಹೇಗೆ ಎಂಬುದನ್ನು ಯೋಚಿಸಿ ಕಾರ್ಯ ಪ್ರವೃತ್ತರಾಗಬೇಕು ಎಂದು ಮಾಸ್ ಟ್ರಸ್ಟ್ ಅಧ್ಯಕ್ಷರಾದ ಎನ್.ಇಂದಿರಮ್ಮ ಸಲಹೆ ನೀಡಿದರು.

ಹುಳಿಯಾರಿನ ಕನಕದಾಸ ವಿದ್ಯಾ ಸಂಸ್ಥೆಯಲ್ಲಿ ಅವರು ಇಂಧನ ಉಳಿತಾಯ ಮಾಹಿತಿ ಕಾರ್ಯಕ್ರಮದಲ್ಲಿ ಮಾತನಾಡಿ ಹೊಗೆ ತುಂಬುವುದನ್ನು ತಗ್ಗಿಸುವ ಉಪಕ್ರಮದಲ್ಲಿ ಇಂಧನ ಉಳಿತಾಯ ಕಾರ್ಯಕ್ರಮವು ಮುಖ್ಯವಾದದ್ದು ಎಂದರು.

ಕೇಂದ್ರ ಸರ್ಕಾರದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಂಶೋಧನೆ ಮತ್ತು ಸಂರಕ್ಷಣೆ ವಿಭಾಗ ಆರಂಭಿಸಿರುವ ಇಂಧನ ಉಳಿತಾಯ ಕಾರ್ಯಕ್ರಮವು ಭಾರತ ಪೆಟ್ರೋಲಿಯಂ ಪ್ರಾಯೋಜಿತದಲ್ಲಿ ಹಾಸನ ಜಿಲ್ಲೆಯ ಬಾನೀಗೊಂದಿ ಸೀಕೋ ಸಂಸ್ಥೆ ಡಾ.ಬಿ.ಕೆ.ಹರೀಶ್ ಕುಮಾರ್ ನೇತೃತ್ವದಲ್ಲಿ ಕರ್ನಾಟಕ ರಾಜ್ಯದಲ್ಲಿ ನಡೆಯುತ್ತಿದೆ. ಚಿಕ್ಕನಾಯಕನಹಳ್ಳಿ ತಾಲೂಕಿನಲ್ಲಿ ಮಾಸ್ ಟ್ರಸ್ಟ್ ಮತ್ತು ವಿಜ್ಞಾನ ಕೇಂದ್ರ ಹಾಗೂ ಇಕೋ ಕ್ಲಬ್ ಆಶ್ರಯದಲ್ಲಿ ನಡೆಸಲಾಗುತ್ತಿದೆ ಎಂದು ಅವರು ಮಾಹಿತಿ ನೀಡಿದರು.




**ಹುಳಿಯಾರಿನ ಕನಕದಾಸ ವಿದ್ಯಾ ಸಂಸ್ಥೆಯಲ್ಲಿ ಬುಧವಾರ ಇಂಧನ ಉಳಿತಾಯ ಮಾಹಿತಿ ಕಾರ್ಯಕ್ರಮ ನಡೆಸಲಾಯಿತು.**

ಅಂಗನವಾಡಿ ಕಾರ್ಯಕರ್ತೆಯರ ಸಂಘದ ಅಧ್ಯಕ್ಷೆ ಪೂರ್ಣಮ್ಮ ಅಡುಗೆ ಅನಿಲ ಮತ್ತು ಪೆಟ್ರೋಲ್ ಉಳಿಸುವ ವಿಧಾನಗಳನ್ನು ತಿಳಿಸಿಕೊಟ್ಟರು.

ಪರಿಸರ ಚಿಂತಕ ರಾಮಕೃಷ್ಣಪ್ಪ ಜಾಗತಿಕ ತಾಪಮಾನ ಏರಿಕೆ ತಗ್ಗಿಸಲು ಎಲ್ಲರೂ ಭಾಗವಹಿಸುವ ಹಲವು ಸಲಹೆ ನೀಡಿದರು. ಪ್ಲಾಸ್ಟಿಕ್ ವೈಜ್ಞಾನಿಕ ಬಳಕೆ ಮತ್ತು ನಿರ್ವಹಣೆ ಬಗ್ಗೆ ಮಾಹಿತಿ ನೀಡಿದರು.

ಕನಕದಾಸ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಪರಮೇಶ್ವ ಅಧ್ಯಕ್ಷತೆ ವಹಿಸಿದ್ದರು. ಪ್ರೌಢಶಾಲೆ ಮುಖ್ಯ ಶಿಕ್ಷಕರಾದ ಚಂದ್ರಶೇಖರ್ ಸ್ವಾಗತಿಸಿದರು. ಉಪನ್ಯಾಸಕರಾದ ಗೋವಿಂದಪ್ಪ, ಗಂಗಾಧರಪ್ಪ, ರಂಗನಾಥ್, ದಯಾನಂದ ಮತ್ತು ವಿದ್ಯಾರ್ಥಿಗಳು ಇದ್ದರು.

## ಸಂಜೆ ಟಿಪ್ಸ್



## ದಿ ಜ್ಯುವೆಲರಿ ಷೋ ಪ್ರದರ್ಶನ

ಪ್ರೇಮಿಗಳ ದಿನ, ಮದುವೆ, ಶುಭ ಸಮಾರಂಭಗಳಿಗಾಗಿ ನಗರದ ಶೆರಟನ್ ಹೋಟೆಲ್ ನಲ್ಲಿ ಫೆ. 16 ರಿಂದ 18 ರವರೆಗೆ ವೈಭವದ ದಿ ಜ್ಯುವೆಲರಿ ಷೋ ಆಭರಣ ಮೇಳ ಆಯೋಜಿಸಲಾಗಿದೆ. ದೇಶದ 40 ಅಗ್ರ ಶ್ರೇಣಿಯ ಆಭರಣ ತಯಾರಕರು ಭಾಗವಹಿಸುತ್ತಿರುವ ವಡವೆ ಪ್ರದರ್ಶನ ಮತ್ತು ಮಾರಾಟ ಉತ್ಸವದಲ್ಲಿ ಗ್ರಾಹಕರ ಅಭಿರುಚಿಗೆ ಒಪ್ಪುವ, ಜಾಗತಿಕ ಗುಣಮಟ್ಟದ ಆಭರಣಗಳು ಗಮನ ಸೆಳೆಯಲಿವೆ.

ಮೇಳಕ್ಕೆ ಚಿತ್ರನಟಿ ನಿಶ್ಚಿಕಾ ನಾಯ್ಡು ಅಪರಾಹ್ನ 12:30ಕ್ಕೆ ಉದ್ಘಾಟಿಸಲಿದ್ದಾರೆ. ಆಭರಣ ಎಂದರೆ ಮಹಿಳೆಯರಿಗೆ ಅಚ್ಚುಮೆಚ್ಚು ಹಾಗೂ ನಂಬಿಕಸ್ತ ಹೂಡಿಕೆಯೂ ಆಗಿದೆ. ಈ ಮೇಳದಲ್ಲಿ ಪ್ರಶಸ್ತಿ ವಿಜೇತ ಹಾಗೂ ಹೆಸರಾಂತ ಆಭರಣ ಮಳಿಗೆಗಳು ಭಾಗವಹಿಸುತ್ತಿವೆ. ಹಳದಿ ಲೋಹ ಖರೀದಿಸಲು ಇದೊಂದು ಉತ್ತಮ ವೇದಿಕೆಯಾಗಿದ್ದು, ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ನಾಗರೀಕರಿಗೆ ಉಜ್ವಲ ಅವಕಾಶವಾಗಿದೆ. ಈ ಮಹತ್ವದ ಆಭರಣ ಮೇಳವನ್ನು ಗೋಲ್ಡನ್ ಕ್ರೀಪರ್ ಸಂಸ್ಥೆಯ ಜಗದೀಶ ಬಿ.ಎನ್ ಮತ್ತು ಹೇಮಲತಾ ಜಗದೀಶ್ ಆಯೋಜಿಸಿದ್ದಾರೆ. ಹೆಸರಾಂತ ಆಭರಣ ಮಳಿಗೆಗಳು ಭಾಗವಹಿಸಲಿರುವ ಈ ಮೇಳದಲ್ಲಿ ವಿಶೇಷ ವಿನ್ಯಾಸಗಳನ್ನೊಳಗೊಂಡ ಅಂತರರಾಷ್ಟ್ರೀಯ ಗುಣಮಟ್ಟದ ಆಭರಣಗಳ ಪ್ರದರ್ಶನ ಹಾಗೂ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗಿದೆ. ಮೇಳದಲ್ಲಿ ಬೆಂಗಳೂರಿನ ಅನನ್ಯ ಜುವೆಲ್ಸ್, ಎಂ.ಪಿ. ಸ್ವರ್ಣ ಮಹಲ್, ನೀಲಕಂಠ, ಪಿ.ಎಂ.ಜೆ ಪ್ರಕಾಶ್ ಜುವೆಲರ್ಸ್, ಸಿಂಹ ಜುವೆಲ್ಲರ್ಸ್, ಶ್ರೀ ಗಣೇಶ್ ಡೈಮಂಡ್ಸ್, ವರಶ್ರೀ, ಕಿಯಾ, ಡಯಾಮ್ಸ್, ಡಿ.ಆರ್.ಎನ್. ವಿವಾಂತ್, ವಿತ್ರಾಗ್, ಶ್ರೀ ಕುಮಾರನ್ ತಂಗಮಳಿಗೈ, ವಂಡರ್ ಡೈಮಂಡ್ಸ್, ರೂಪಂ ಸಿಲ್ವರ್, ಮೈ ಸಿಲ್ವರ್, ಸ್ಯಾಂಚೀಸ್, ಸಿಲ್ವರ್ ಗ್ಯಾಲರಿ, ಮದನ್ ಜೇಮ್ಸ್, ನಿಸ್ವಾದಿತ, ಸ್ಟೈಲ್ ಔರ್, ಹರ್ ಹಮ್, ಔರಾ, ಶ್ರೀ ಹರಿ ಡೈಯಾಜಮ್ಸ್, ಗೋಲ್ಡ್ ಕ್ಯಾರೇಟ್, ಶ್ರೀ ಗೋಲ್ಡ್ ಪಾರಮನಿ, ಮೆಹ್ತಾ ಬ್ರದರ್ಸ್, ಲೈಮ್ ಲೈಟ್ ಡೈಮಂಡ್ಸ್, ಸ್ಯಾಂಜಿನಿ, ಕೊಹೀರಾ, ಬಿ.ಎನ್.ಆರ್. ಡೈಮಂಡ್ಸ್, ಸ್ವಸ್ಸ, ನಿತ್ಯಾಸ್, ಸುನಿಲ್ ಜುವೆಲರ್ಸ್, ಶ್ರೀ ಜುವೆಲ್ಸ್, ಬನೇತಿ ಎಕ್ಸ್ ಪೋರ್ಟ್ಸ್, ಪನ್ನ ಜುವೆಲರ್ಸ್, ಕಿಯಾಮ ಕಲೆಕ್ಷನ್ಸ್ ಭಾಗವಹಿಸಲಿವೆ.

## ಮಾವಿನಕಾಯಿ ಜ್ಯೂಸ್

### ಪಾಕ ಶಾಲೆ



### ಬೇಕಾಗಿರುವ ಪದಾರ್ಥ

ಮಾವಿನಕಾಯಿ 4, ಸಕ್ಕರೆ 1 1/2 ಕಪ್, ಜೀರಿಗೆ 1 ಚಮಚ, ಪೆಪ್ಪರ್ ಪುಡಿ 1 ಚಮಚ, ಬ್ಲಾಕ್ ಸಾಲ್ಟ್ 1/2 ಚಮಚ, ನಿಂಬೆರಸ 2 ಚಮಚ, ಪುದೀನಾ 2 ಎಸಳು, ಕೆಂಪು ಮೆಣಸಿನ ಪುಡಿ 1 ಚಮಚ, ಉಪ್ಪು ರುಚಿಗೆ ತಕ್ಕಷ್ಟು

### ಮಾಡುವ ವಿಧಾನ

ಮಾವಿನಕಾಯಿಗಳ ಸಿಪ್ಪೆ ತೆಗೆದು ಅದರ ತಿರುಳನ್ನು ಸಣ್ಣಗೆ ಕತ್ತರಿಸಿ ನೀರು ಸೇರಿಸಿ ಚೆನ್ನಾಗಿ ಕುದಿಸಬೇಕು. ಸಕ್ಕರೆಗೆ ಒಂದು ದೊಡ್ಡ ಲೋಟ ನೀರು ಹಾಕಿ ಕುದಿಯಲು ಇಡಬೇಕು.

ಬೆಂದ ಮಾವಿನಕಾಯಿಗೆ ಜೀರಿಗೆ ಪುಡಿ, ಬ್ಲಾಕ್ ಸಾಲ್ಟ್, ಕೆಂಪು ಮೆಣಸಿನ ಪುಡಿ, ಪುದೀನಾ, ನಿಂಬೆರಸ ಮತ್ತು ಉಪ್ಪು ಸೇರಿಸಿ ರುಬ್ಬಿಕೊಳ್ಳಬೇಕು.

ನಂತರ ಈ ಮಿಶ್ರಣವನ್ನು ಕುದಿಯುತ್ತಿರುವ ಸಕ್ಕರೆ ಪಾಕಕ್ಕೆ ಹಾಕಿ ಸಾಸ್ ಹದಕ್ಕೆ ಕಲಸಿ.

ಮಿಶ್ರಣ ಆರಿದ ನಂತರ ಬಾಟಲಿಯಲ್ಲಿ ಸಂಗ್ರಹಿಸಿಟ್ಟು ಫ್ರಿಜ್ಜಿನಲ್ಲಿಟ್ಟರೆ 2 ತಿಂಗಳವರೆಗೆ ಬಳಸಬಹುದು. ಕಾಲು ಲೋಟದಷ್ಟು ಈ ಜ್ಯೂಸ್ ಗೆ ಅಗತ್ಯವಿರುವಷ್ಟು ನೀರು ಬೆರೆಸಿ ಕುಡಿಯಬೇಕು.

# ದಢೂತಿಯಾದ ನಗ್ಮಾ



90ರ ದಶಕದಲ್ಲಿ ಮಿಂಚಿದ್ದ ಸ್ಟಾರ್ ನಟಿಯೊಬ್ಬರು ಇತ್ತೀಚಿನ ಫೋಟೋ ಒಂದು ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗುತ್ತಿದೆ. ನಟಿಯ ಲುಕ್ ನೋಡಿ ಯಾರಿದು? ಅಂತ ನೆಟ್ಟಿಗರು ತಲೆಕೆಡಿಸಿಕೊಂಡಿದ್ದಾರೆ. ಅಲ್ಲದೆ, ಗುರುತು ಪತ್ತೆ ಹಚ್ಚಿದರು, ಹೇಗಿದ್ದವರು ಹೇಗಾದ್ರಪ್ಪಾ ಅಂತ ಶಾಕ್ಗೆ ಒಳಗಾಗಿದ್ದಾರೆ..

ಹೌದು.. ನಾವು ಹೇಳುತ್ತಿರುವುದು ಬ್ಯೂಟಿ ಕ್ವೀನ್ ನಟಿ ನಗ್ಮಾ ಬಗ್ಗೆ. ನಗ್ಮಾ ಹಿಂದಿನ ಕಾಲದ ಸ್ಟಾರ್ ಹೀರೋಯಿನ್. ಕನ್ನಡದಲ್ಲಿ ವಿಷ್ಣುವರ್ಧನ್, ರವಿಚಂದ್ರನ್, ಶಿವ ರಾಜ್ಕುಮಾರ್ ಸೇರಿದಂತೆ ಹಲವು ಸ್ಟಾರ್ ನಟರ ಜೊತೆ ಅಭಿನಯಿಸಿ ಕನ್ನಡಿಗೆ ಹತ್ತಿರವಾಗಿದ್ದರು. ಅಲ್ಲದೆ ಅಂದಿನ ಕಾಲದಲ್ಲಿ ತಮ್ಮ ಸೌಂದರ್ಯದ ಮೂಲಕ ಸಿನಿ ರಸಿಕರ ಕನಸಿನ ರಾಣಿಯಾಗಿ ಮೆರೆದಿದ್ದರು.

ಕನ್ನಡ ಅಷ್ಟೇ ಅಲ್ಲದೆ, ತೆಲುಗು ಸಿನಿರಂಗದಲ್ಲಿ ಬಾಲಕೃಷ್ಣ, ಚಿರಂಜೀವಿ ಮತ್ತು ಇತರ ಭಾಷೆಗಳಲ್ಲಿ ರಜನಿಕಾಂತ್, ಅಮಿತಾಬ್, ಸಲ್ಮಾನ್, ಶಾರುಖ್ ಸೇರಿ ಟಾಪ್ ಹೀರೋಗಳ ಎದುರು ನಟಿಸಿದ್ದಾರೆ. ಇದಲ್ಲದೆ, ಅವರು ಟಾಲಿವುಡ್ ಮತ್ತು ಬಾಲಿವುಡ್ನಲ್ಲಿ ನಂಬರ್ ಒನ್ ನಾಯಕಿಯಾಗಿ ಮಿಂಚಿದ್ದರು. ಮೇಲಾಗಿ ಮೂವರು ಸ್ಟಾರ್ ಹೀರೋಗಳು ಒಬ್ಬ ಕ್ರಿಕೆಟಿಗನೊಂದಿಗೆ ಅಫೇರ್ ಹೊಂದಿ ಸುದ್ದಿಯಾಗಿದ್ದರು. ಅಲ್ಲದೆ, ರಾಜಕೀಯಕ್ಕೆ ಪ್ರವೇಶಿಸಿ, ಸಂಸದರಾಗಿ ಸ್ಪರ್ಧಿಸಿದರು.

ಇನ್ನು ನಗ್ಮಾ ಇತ್ತೀಚಿನ ಫೋಟೋಗಳನ್ನು ನೋಡಿದ ಅಭಿಮಾನಿಗಳು ಶಾಕ್ ಆಗಿದ್ದಾರೆ. ನಮ್ಮ ಕನಸಿನ ರಾಣಿ ಇವರೇನಾ ಅಂತ 90 ಕಿಡ್ಸ್ ಶಾಕ್ ಆಗಿದ್ದಾರೆ. ಇದಕ್ಕೆ ಸಂಬಂಧಿತ ಫೋಟೋಗಳು ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗುತ್ತಿವೆ.. ನಗ್ಮಾ ಈ ಫೋಟೋಗಳಲ್ಲಿ ಗುರುತಿಸಲಾಗದಷ್ಟು ದಪ್ಪವಾಗಿದ್ದಾರೆ.

ನಗ್ಮಾ 1974 ರಲ್ಲಿ ಹಿಂದೂ ತಂದೆ ಮತ್ತು ಮುಸ್ಲಿಂ ದಂಪತಿ ಮಗುವಾಗಿ ಜನಿಸಿದರು. ಅವರ ತಂದೆ ರಾಜಸ್ಥಾನದ ಜೈಸಲ್ಮೇರ್ ರಾಜಮನೆತನಕ್ಕೆ ಸೇರಿದವರು. ಕುರುಬನ ರಾಣಿ ಸಿನಿಮಾದ ಮೂಲಕ ಸ್ಯಾಂಡಲ್ವುಡ್ಗೆ ಪಾದಾರ್ಪಣೆ ಮಾಡಿದರು. ತೆಲುಗು, ತಮಿಳು, ಹಿಂದಿ ಸೇರಿದಂತೆ ಹಲವಾರು ಭಾಷೆಗಳ ಸಿನಿಮಾದಲ್ಲಿ ನಟಿಸಿದ್ದಾರೆ.





# ಒಣದ್ರಾಕ್ಷಿಯ ಪ್ರಯೋಜನ

### ಹೆಲ್ತ್ ಟಿಪ್ಸ್



ಒಣದ್ರಾಕ್ಷಿಯ ಪ್ರಯೋಜನಗಳ ಬಗ್ಗೆ ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುತ್ತದೆ. ತೂಕ ಇಳಿಸುವವರಿಗೆ ಈ ಒಣದ್ರಾಕ್ಷಿ ತುಂಬಾ ಸಹಾಯಕವಾಗಿದೆ. ಅಲ್ಲದೇ ಇದು ಚರ್ಮಕ್ಕೆ ತುಂಬಾ ಪ್ರಯೋಜನಕಾರಿಯಾದ ಒಣ ಹಣ್ಣುಗಳಲ್ಲಿ ಒಂದಾಗಿದ್ದು, ಮುಖದಲ್ಲಿ ಮೂಡುವ ಸುಕ್ಕು, ಮೊಡವೆಯಂತಹ ಸಮಸ್ಯೆಗಳಿಗೆ ಇದು ಪರಿಹಾರ ನೀಡುತ್ತದೆ.

ದ್ರಾಕ್ಷಿಯನ್ನು ಒಣಗಿಸಿ ಬಳಸುವುದರಿಂದ ಇದು ಯಾವುದೇ ರಾಸಾಯನಿಕವನ್ನು ಹೊಂದಿರುವುದಿಲ್ಲ. ಹೀಗಾಗಿ ಇದು ಆರೋಗ್ಯಕ್ಕೆ ಯಾವುದೇ ತೊಂದರೆಯನ್ನು ನೀಡಲ್ಲ. ಮುಖದ ಕಾಂತಿಯನ್ನು ಹೆಚ್ಚಿಸುವ ಒಣದ್ರಾಕ್ಷಿಯನ್ನು ಹೀಗೂ ಬಳಸಬಹುದು.

**ಬಳಸುವುದು ಹೇಗೆ?:** ಮೇಲೆ ತಿಳಿಸಿದ ಎಲ್ಲಾ ವಸ್ತುಗಳನ್ನು ಚೆನ್ನಾಗಿ ಮಿಶ್ರಣ ಮಾಡಿ ಮತ್ತು ದಪ್ಪ ಪೇಸ್ಟ್ ತಯಾರಿಸಿ. ಈ ಪೇಸ್ಟ್ ತುಂಬಾ ದಪ್ಪವೆನಿಸದರೆ ಅದಕ್ಕೆ ರೋಸ್ ವಾಟರ್ ಹಾಕಬಹುದು. ಮಿಶ್ರಣವನ್ನು ಮುಖಕ್ಕೆ ಹಚ್ಚಿ. ಸುಮಾರು 25 ನಿಮಿಷಗಳ ಕಾಲ ಹಾಗೆಯೇ ಬಿಡಿ. ನಂತರ ಮುಖವನ್ನು ತಣ್ಣೀರಿನಿಂದ ತೊಳೆಯಬೇಕು.

**ಬಳಸುವುದು ಹೇಗೆ?:** ಮೊದಲಿಗೆ, ಈ ಎಲ್ಲಾ ವಸ್ತುಗಳನ್ನು ಮಿಶ್ರಣ ಮಾಡಿ. ನಂತರ ಒಂದು ಮಿಕ್ಸರ್ನಲ್ಲಿ ಹಾಕಿ ಪುಡಿಮಾಡಿ. ಸಿದ್ಧವಾದ ಪೇಸ್ಟ್ನ್ನು ಮುಖಕ್ಕೆ ಹಚ್ಚಿ. ಕನಿಷ್ಠ 20 ನಿಮಿಷಗಳ ಕಾಲ ಹಾಗೇ ಬಿಡಿ. ಬಳಿಕ ಮುಖವನ್ನು ನೀರಿನಿಂದ ತೊಳೆಯಿರಿ. ಉತ್ತಮ ಫಲಿತಾಂಶಕ್ಕೆ ಈ ಫೇಸ್ ಪ್ಯಾಕ್ನ ವಾರಕ್ಕೊಮ್ಮೆ ಬಳಸಿ.

ಒಣದ್ರಾಕ್ಷಿಯ ಪ್ರಯೋಜನಗಳು ಒಣದ್ರಾಕ್ಷಿಯಲ್ಲಿ ಒಮೆಗಾ -3 ಕೊಬ್ಬಿನಾಮ್ಲಗಳು, ವಿಟಮಿನ್ಗಳು ಮತ್ತು ಖನಿಜಾಂಶಗಳು ಹೇರಳವಾಗಿದ್ದು, ಇದು ಚರ್ಮವನ್ನು ಹೊಳೆಯುವಂತೆ ಮಾಡುತ್ತದೆ. ಇದಲ್ಲದೇ, ಚರ್ಮವನ್ನು ಪುನಶ್ಚೇತನಗೊಳಿಸುವ ಕೆಲಸ ಮಾಡುತ್ತದೆ. ಒಣದ್ರಾಕ್ಷಿಯಲ್ಲಿ ವಿಟಮಿನ್ ಸಿ ಸಮೃದ್ಧವಾಗಿದ್ದು, ಇದು ಕಪ್ಪು ಕಲೆಗಳು ಕಡಿಮೆಯಾಗಲು ಸಹಾಯ ಮಾಡುತ್ತದೆ.

# ಮಕ್ಕಳ ಆರೋಗ್ಯ ಕುರಿತು ಆಪ್ ಕಿ ಬಾತ್ ಕಮ್ಯುನಿಟಿಕೆ ಸಾಥ್ ಆಂದೋಲನಕ್ಕೆ ಚಾಲನೆ



ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್ ನಿಂದ ಸಮುದಾಯವನ್ನು ಸಕ್ರಿಯವಾಗಿ ತೊಡಗಿಸಿಕೊಂಡು ಮಕ್ಕಳ ಆರೋಗ್ಯದ ಬಗ್ಗೆ ಸಮಗ್ರ ಮಾಹಿತಿ ನೀಡುವ ಆಪ್ ಕಿ ಬಾತ್ ಕಮ್ಯುನಿಟಿಕೆ ಸಾಥ್ ಎಂಬ ಮಹತ್ವದ ಅಭಿಯಾನ ಆರಂಭಿಸಲಾಗಿದೆ. ಅಭಿಯಾನದಲ್ಲಿ ಮೊದಲ ಭಾಗವಾಗಿ ರಕ್ತಹೀನತೆ ಕುರಿತು ಜಾಗೃತಿ ಮೂಡಿಸುತ್ತಿದ್ದು, ನಂತರ ಸ್ಥೂಲಕಾಯತೆ, ಆಟಿಸಂ, ತಲಸ್ಸೇಮೀಯಾ ಮತ್ತು ಡೌನ್ ಸಿಂಡ್ರೋಮ್ ಕುರಿತು ಜನ ಜಾಗೃತಿಗೆ ವ್ಯವಸ್ಥೆ ಮಾಡಲಾಗಿದೆ.ಪ್ರತಿಯೊಬ್ಬರಿಗೂ ಖಚಿತ ಮತ್ತು ಪ್ರಸ್ತುತ ಬದುಕಿನಲ್ಲಿ ಅಗತ್ಯವಿರುವ ಮಾಹಿತಿ ನೀಡುವ ಉದ್ದೇಶ ಹೊಂದಲಾಗಿದೆ. ಇದರಿಂದ ಮಕ್ಕಳ ಯೋಗಕ್ಷೇಮ ನೋಡಿಕೊಳ್ಳಲು ಮತ್ತು ಸಾಮಾಜಿಕ ಆರೋಗ್ಯಕ್ಕೆ ಕೊಡುಗೆ ನೀಡಲು ಈ ಬೆಳವಣಿಗೆ ಸಹಕಾರಿಯಾಗಲಿದೆ. ಸರ್ಕಾರದ ಸಹಭಾಗಿತ್ವ, ಸಾಮಾಜಿಕ ಜಾಲತಾಣಗಳ ಮೂಲಕ ಲಕ್ಷಾಂತರ ಮಕ್ಕಳಿಗೆ ವಿಶ್ವಾಸಾರ್ಹ ಮಾಹಿತಿ ತಲುಪಿಸುವ ಗುರಿ ಹೊಂದಲಾಗಿದೆ.ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ 2019 ಮತ್ತು 2020 ರ ಸಮೀಕ್ಷೆಯಂತೆ ಫಲವತ್ತತೆಯ ಸಮಯವಾದ 15 ರಿಂದ 49 ವಯೋಮಿತಿಯ ಅರ್ಧದಷ್ಟು ಮಹಿಳೆಯರು ಹಾಗೂ 6 ರಿಂದ 59 ತಿಂಗಳ ವಯೋಮಿತಿಯ ಮಕ್ಕಳಲ್ಲಿ ಶೇ 59 ರಷ್ಟು ಮಕ್ಕಳು ದೇಶದಲ್ಲಿ ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಕಬ್ಬಿಣ, ಫೋಲಿಕ್ ಆಸಿಡ್ ಮತ್ತು ವಿಟಮಿನ್ ಬಿ12 ಕೊರತೆಯಿಂದ ತೊಂದರೆಗೀಡಾಗಿದ್ದಾರೆ.

ಮಲೇರಿಯಾ, ಅನುವಂಶಿಕ ಪರಿಸ್ಥಿತಿಗಳು, ಅನಾರೋಗ್ಯಕರ ಆಹಾರ ಅಭ್ಯಾಸಗಳು, ಕಬ್ಬಿಣದ ಕೊರತೆಯಿಂದ ಉಂಟಾಗುವ ಅನೀಮಿಯಾ, ಹೆಚ್ಚು ಕಬ್ಬಣಾಂಶದ ಆಹಾರ ಸೇವನೆ, ಋತುಚಕ್ರದ ಮತ್ತು ಹೆರಿಗೆ ಸಮಯದಲ್ಲಿ ತೀವ್ರ ರಕ್ತ ಹಾನಿಯಾಗುವ ಸಮಸ್ಯೆಗಳಿಂದ ಬಳುತ್ತಿರುವವರ ಯೋಗಕ್ಷೇಮಕ್ಕಾಗಿ ಈ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಕಳೆದ 2018 ರಲ್ಲಿ ಕೇಂದ್ರ ಸರ್ಕಾರ ಮಕ್ಕಳು, ಹೆಣ್ಣುಮಕ್ಕಳು ಮತ್ತು ಹದಿಹರೆಯದವರಲ್ಲಿ ರಕ್ತಹೀನತೆ ತಗ್ಗಿಸಲು ಅನೀಮಿಯಾ ಮುಕ್ತ ಭಾರತ ಅಭಿಯಾನ ಆರಂಭಿಸಿತ್ತು.

ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್ ಸಂಘಟನೆಯ 2024 ನೇ ಸಾಲಿನ ಅಧ್ಯಕ್ಷ ಡಾ. ಜಿ.ವಿ. ಬಸವರಾಜ ಮಾತನಾಡಿ, ಭಾರತದಲ್ಲಿ ರಕ್ತಹೀನತೆ ಅತಿ ದೊಡ್ಡ ಸಮಸ್ಯೆಯಾಗಿದೆ. ಇದರಿಂದ ದಣಿವು, ದೌರ್ಬಲ್ಯ, ಅರಿವಿನ ಕಾರ್ಯಕ್ಷಮತೆ ಕಡಿಮೆಯಾಗುವುದು ಮತ್ತು ಸೋಂಕುಗಳು, ಅನಾರೋಗ್ಯದ ಹೆಚ್ಚಿನ ಅಪಾಯ ಉಂಟುಮಾಡಬಹುದು, ಇದರಿಂದ ಸಾಮಾಜಿಕ ಬೆಳವಣಿಗೆಗೆ ಅಡ್ಡಿಯಾಗುತ್ತದೆ. ಬಾಲ್ಯದ ರಕ್ತಹೀನತೆಯ ಬಹುಮುಖಿ ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವ ಮೂಲಕ, ಸಮಗ್ರ ಪರಿಹಾರಗಳು ಈ ಸ್ಥಿತಿಯ ತಕ್ಷಣದ ರೋಗಲಕ್ಷಣಗಳು ಮತ್ತು ದೀರ್ಘಕಾಲೀನ ಪರಿಣಾಮಗಳನ್ನು ಪರಿಹರಿಸಬಹುದು ಎಂದು ಹೇಳಿದರು.ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್ ನಿಂದ ದೇಶದ ಮಕ್ಕಳ ಕ್ಲಿನಿಕ್ ಗಳ 44 ಸಾವಿರ ಮಕ್ಕಳ ತಜ್ಞರಿಂದ ಹುಟ್ಟಿದಾರಾಭ್ಯ 18 ವಯೋಮಿತಿ ಒಳಗಿನ ಮಕ್ಕಳಿಗೆ ಅನಿಮಿಯಾಕೆ ಬಾತ್ ಕಮ್ಯುನಿಟಿಕೆ ಸಾಥ್ ಜೊತೆ ಅನಿಮಿಯಾ ಮುಕ್ತ ಭಾರತ ಅಭಿಯಾನದಡಿ ಉಚಿತ ಅನಿಮೀಯಾ ತಪಾಸಣೆಗೆ ವ್ಯವಸ್ಥೆ ಮಾಡಲಾಗಿದೆ.

# ಪದೇ ಪದೇ ಮುಖ ತೊಳೆಯುತ್ತೀರಾ?

### ಬ್ಯೂಟಿ ಟಿಪ್ಸ್



ಮುಖ ಸುಂದರವಾಗಿ ಕಾಣಬೇಕು ಅನ್ನೋ ಆಸೆ ಎಲ್ಲರಿಗೂ ಇರುವುದು ಸಹಜ. ಬೇಸಿಗೆ ಕಾಲದಲ್ಲಂತೂ ಬೆವರಿನಿಂದಾಗಿ ಮುಖ ಕಾಂತಿ ಕಳೆದುಕೊಳ್ಳಬಹುದು. ಇಂತಹ ಪರಿಸ್ಥಿತಿಯಲ್ಲಿ ಅನೇಕರು ಪದೇ ಪದೇ ಮುಖ ತೊಳೆಯುವ ಅಭ್ಯಾಸ ಮಾಡಿಕೊಂಡಿರುತ್ತಾರೆ. ಆದರೆ ಇದು ತ್ವಚೆಗೆ ಹಾನಿ ಮಾಡುತ್ತದೆ. ಮುಖವನ್ನು ನಿರಂತರವಾಗಿ ತೊಳೆಯುವುದರಿಂದ ತೇವಾಂಶ ಕಡಿಮೆಯಾಗಿ ಚರ್ಮ ಒಣಗಲು ಪ್ರಾರಂಭಿಸುತ್ತದೆ. ಇದರಿಂದ ಮುಖದ ಮೃದುತ್ವಕ್ಕೆ ಹಾನಿಯಾಗುತ್ತದೆ. ಮುಖವನ್ನು ಕ್ಲೀನ್ ಮಾಡಬೇಕೆಂದರೆ ಮತ್ತೆ ಮತ್ತೆ ತೊಳೆಯುವ ಅಗತ್ಯವಿಲ್ಲ. ಒಮ್ಮೆ ಮುಖವನ್ನು ಕ್ಲೀನ್ ಮಾಡಿ ಅದರ ಮೇಲೆ ಲೋಷನ್ ಹಚ್ಚಿದರೆ ಮುಖ ಸ್ವಚ್ಛವಾಗಿ ಕಾಣುತ್ತದೆ. ಪದೇ ಪದೇ ಮುಖ ತೊಳೆದರೆ ತ್ವಚೆ ಹೊಳೆಯುತ್ತದೆ ಎಂದುಕೊಳ್ಳಬೇಡಿ. ಹೀಗೆ ಮಾಡುವುದರಿಂದ ಮುಖದ ಬಣ್ಣ ಸಂಪೂರ್ಣ ಹಾಳಾಗುತ್ತದೆ. ಚರ್ಮವು ಶುಷ್ಕವಾಗಬಹುದು. ಮುಖದಲ್ಲಿನ ನೈಸರ್ಗಿಕ ಎಣ್ಣೆ ಕಡಿಮೆಯಾಗಲು ಪ್ರಾರಂಭಿಸುತ್ತದೆ. ಮುಖವನ್ನು ಆಗಾಗ್ಗೆ ತೊಳೆಯುವುದರಿಂದ ಸುಕ್ಕುಗಳು ಅಕಾಲಿಕವಾಗಿ ಕಾಣಿಸಿಕೊಳ್ಳಲು ಪ್ರಾರಂಭಿಸುತ್ತವೆ. ಯೌವನದಲ್ಲಿಯೇ ನೀವು ವಯಸ್ಸಾದಂತೆ ಕಾಣಿಸುತ್ತೀರಿ. ಇದರ ಜೊತೆಗೆ ತುರಿಕೆ, ದದ್ದುಗಳು ಕೂಡ ಉಂಟಾಗಬಹುದು. ಪಿಹೆಚ್ ಮಟ್ಟವು ಕ್ರಮೇಣ ಕಡಿಮೆಯಾಗಲು ಪ್ರಾರಂಭಿಸುತ್ತದೆ. ಪದೇ ಪದೇ ಮುಖ ತೊಳೆಯುವುದರಿಂದ ಮುಖವು ತಂಪಾಗಿರುತ್ತದೆ ಮತ್ತು ತಾಜಾವಾಗಿರುತ್ತದೆ ಎಂಬ ಭಾವನೆ ಅನೇಕರಲ್ಲಿದೆ. ಆದರೆ ಈ ಅಭ್ಯಾಸ ಚರ್ಮದ ಕೋಶಗಳಿಗೆ ಹಾನಿ ಮಾಡುತ್ತದೆ. ಚರ್ಮದ ಮೇಲೆ ಸಿಪ್ಪೆಸುಲಿಯುವುದು, ದದ್ದುಗಳು, ಸುಡುವ ಸಂವೇದನೆ ಮುಂತಾದ ಸಮಸ್ಯೆಗಳು ಬರುತ್ತವೆ.

## ರಾಶಿ ಭವಿಷ್ಯ



ಜಯಶ್ರೀ.ಬಿ.ಆರ್
ಖ್ಯಾತ ಜ್ಯೋತಿಷಿ
ದೂರವಾಣಿ-9964739507
www.jyotishyavaastu.com

**ಮೇಷ:** ಆರ್ಥಿಕ ನಷ್ಟಗಳು, ಮಾಟ ಮಂತ್ರ ತಂತ್ರದ ಭೀತಿ, ದಾಂಪತ್ಯದಲ್ಲಿ ನಿರಾಸಕ್ತಿ, ಪಾಲುದಾರಿಕೆಯಲ್ಲಿ ಸಮಸ್ಯೆ

**ವೃಷಭ:** ಶಾರೀರಿಕ ಅಸಮತೋಲನ, ವೃತ್ತಿಯಲ್ಲಿ ಹಿನ್ನಡೆ, ಆಲಸ್ಯ ಸೋಮಾರಿತನ ಜಿಗುಪ್ಸೆ, ಗುಪ್ತಶತ್ರು, ಸಾಲದ ಚಿಂತೆ

**ಮಿಥುನ:** ಗರ್ಭ ದೋಷಗಳು, ಮಕ್ಕಳ ಭವಿಷ್ಯದ ಚಿಂತೆ, ಉದ್ಯೋಗ ನಷ್ಟ, ಪ್ರೀತಿ-ಪ್ರೇಮದಲ್ಲಿ ಸಮಸ್ಯೆ

**ಕಟಕ:** ಮಾನಸಿಕ ಅಸಮತೋಲನ, ಮಾಟ ಮಂತ್ರ ತಂತ್ರದ ಯೋಚನೆ, ಮಿತ್ರರಿಂದ ಬೇಸರ, ಲಾಭದ ಪ್ರಮಾಣ ಕುಂಠಿತ

**ಸಿಂಹ:** ಅವಕಾಶ ವಂಚಿತರಾಗುವಿರಿ, ಉದ್ಯೋಗ ಬದಲಾವಣೆ ಪ್ರಯತ್ನ, ವಿದ್ಯಾಭ್ಯಾಸದಲ್ಲಿ ಹಿನ್ನಡೆ, ಮಹಿಳೆಯರಿಂದ ನೋವು

**ಕನ್ಯಾ:** ಆಕಸ್ಮಿಕ ಧನಾಗಮನ, ಕುಟುಂಬದಿಂದ ಬೇಸರ, ವಸ್ತ್ರಾಭರಣ ಸಮಸ್ಯೆ, ಮಾತಿನಿಂದ ಸಮಸ್ಯೆ

**ತುಲಾ:** ಸ್ವಯಂಕೃತ ಅಪರಾಧಗಳು, ಜಿಗುಪ್ಸೆ ಮತ್ತು ಬೇಸರ, ಸಂಗಾತಿಯಿಂದ ಸಮಸ್ಯೆ, ಅನಾರೋಗ್ಯ

**ವೃಶ್ಚಿಕ:** ದುಃಸ್ವಪ್ನಗಳು, ಮೋಜು-ಮಸ್ತಿಯಿಂದ ಸಮಸ್ಯೆ, ಸಂಗಾತಿಯಿಂದ ಅಂತರ, ಪಾಲುದಾರಿಕೆಯಲ್ಲಿ ನಷ್ಟ

**ಧನಸ್ಸು:** ಸಾಲ ತೀರಿಸುವ ಪ್ರಯತ್ನ, ಉದ್ಯೋಗ ಬಿಡುವ ಯೋಚನೆ, ಸೇವಕರಿಂದ ನಷ್ಟ, ಅನಾರೋಗ್ಯದಿಂದ ಅಲ್ಪ ಚೇತರಿಕೆ

**ಮಕರ:** ಪ್ರೀತಿ-ಪ್ರೇಮದಲ್ಲಿ ಸೋಲು, ಜೂಜು ಮೋಜು ಮಸ್ತಿಯಿಂದ ತೊಂದರೆ, ಉದ್ಯೋಗ ಸಹಾಯದ ನಿರೀಕ್ಷೆ, ಬಾಲಗ್ರಹ ದೋಷಗಳು

**ಕುಂಭ:** ಸ್ಥಿರಾಸ್ತಿ ವಾಹನದಿಂದ ನಷ್ಟ, ಮಾಟ ಮಂತ್ರದಿಂದ ತೊಂದರೆ, ದೃಷ್ಟಿ ದೋಷಗಳು, ಧಾರ್ಮಿಕ ಕಾರ್ಯದಲ್ಲಿ ಅಡೆತಡೆ

**ಮೀನ:** ಪ್ರಯಾಣದಲ್ಲಿ ನಿರಾಸಕ್ತಿ, ಭಯ ಗಾಬರಿ ಆತಂಕ, ಆಕಸ್ಮಿಕ ಅವಘಡಗಳು, ಆರ್ಥಿಕ ಹಿನ್ನಡೆ, ಕಲಹಗಳು

## ಆವಿಷ್ಕಾರ ದಿನ




ಹೊಸ ಜ್ಞಾನವು ದೇಶವನ್ನು ಹೆಚ್ಚು ಮುಂದುವರಿದ ಮತ್ತು ಶಕ್ತಿಯುತವಾಗಿ ಮಾಡುವಲ್ಲಿ ವಹಿಸುವ ಪಾತ್ರವನ್ನು ಗುರುತಿಸಲು ಫೆಬ್ರವರಿ 16 ರಂದು ಆವಿಷ್ಕಾರ ದಿನವನ್ನು ಸ್ಮರಿಸಲಾಗುತ್ತದೆ. ಈ ದಿನವು ವಿಜ್ಞಾನಿಗಳ ಅಸ್ತಿತ್ವದಲ್ಲಿರುವ ಬೆಳೆ ಮೌಲ್ಯಯುತ ಮತ್ತು ಮೆಚ್ಚುಗೆಯನ್ನು ಅನುಭವಿಸಲು ಉತ್ತಮ ಮಾರ್ಗವಾಗಿದೆ, ಆದರೆ ತಂತ್ರಜ್ಞಾನ ಮತ್ತು ನಾವೀನ್ಯತೆಯಲ್ಲಿ ವೃತ್ತಿಜೀವನವನ್ನು ಮುಂದುವರಿಸಲು ಯುವಜನರನ್ನು ಪ್ರೇರೇಪಿಸುತ್ತದೆ. ಈ ವಿಶೇಷ ದಿನವು ವೈಜ್ಞಾನಿಕ ಸಮುದಾಯದ ಸಾಧನೆಗಳನ್ನು ಆಚರಿಸುತ್ತದೆ ಮತ್ತು ಯುವ ಪೀಳಿಗೆಗೆ ಹೊಸ ತಂತ್ರಜ್ಞಾನಗಳು, ಆವಿಷ್ಕಾರಗಳು ಮತ್ತು ವೃತ್ತಿಜೀವನದ ಬಾಗಿಲುಗಳನ್ನು ತೆರೆಯುತ್ತದೆ. ಒಂದು ಸಂಸ್ಥೆ ಅಥವಾ ವ್ಯಕ್ತಿಯು ಜನರಿಗೆ ನಿರ್ದಿಷ್ಟ ಕಾರ್ಯವನ್ನು ಸರಳಗೊಳಿಸುವ ಹೊಸ ಸೇವೆ ಅಥವಾ ಉತ್ಪನ್ನವನ್ನು ಪರಿಚಯಿಸಿದಾಗ, ಅದನ್ನು ನಾವೀನ್ಯತೆ ಎಂದು ಕರೆಯಲಾಗುತ್ತದೆ. ನಾವೀನ್ಯತೆ ದಿನವು ಅಂತಹ ಒಂದು ಘಟನೆಯಾಗಿದ್ದು ಅದು ಹೊಸ ಆಲೋಚನೆಗಳು ಮತ್ತು ಆವಿಷ್ಕಾರಗಳನ್ನು ಅಂಗೀಕರಿಸುತ್ತದೆ. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ನಾವೀನ್ಯತೆ ಮತ್ತು ಬದಲಾವಣೆಯನ್ನು ತರುತ್ತಿರುವ ಆವಿಷ್ಕಾರಕರ ಪ್ರಯತ್ನಗಳನ್ನು ಶ್ಲಾಘಿಸುವುದು ಈ ದಿನದ ಹಿಂದಿನ ಮುಖ್ಯ ಉದ್ದೇಶವಾಗಿದೆ. ಸೈನ್ಸ್ ಹಿಸ್ಟರಿ ಇನ್ಸಿಟ್ಯೂಟ್ ಮತ್ತು ಸೊಸೈಟಿ ಆಫ್ ಕೆಮಿಕಲ್ ಇಂಡಸ್ಟ್ರಿ ಈ ದಿನವನ್ನು ರಚಿಸಿದ್ದು, ಹಿಂದೆ ಕ್ರಾಂತಿಕಾರಿ ಆವಿಷ್ಕಾರಗಳನ್ನು ಮಾಡಿದ ಸೃಷ್ಟಿಕರ್ತರನ್ನು ಗುರುತಿಸಲು ಅವರು ವರ್ಷಗಳ ಹಿಂದೆ ಇನ್ನೂ ಉಪಯುಕ್ತವಾಗಿದೆ. ನಾವೀನ್ಯತೆ ದಿನವು ಚಿಕ್ಕ ಮಕ್ಕಳನ್ನು ತಮ್ಮ ಆಸಕ್ತಿಯ ಕ್ಷೇತ್ರಗಳಲ್ಲಿ ಪ್ರಾಯೋಗಿಕ ಮತ್ತು ಆವಿಷ್ಕಾರಕವಾಗಿರಲು ಪ್ರೇರೇಪಿಸುತ್ತದೆ. ನಾವೀನ್ಯತೆ ಎಂಬ ಪದವು 19 ನೇ ಶತಮಾನದಲ್ಲಿ ಜನಪ್ರಿಯತೆಯನ್ನು ಗಳಿಸಲು ಪ್ರಾರಂಭಿಸಿತು. ಅದೇ ಅವಧಿಯಲ್ಲಿ ಗ್ರೇಟ್ ಬ್ರಿಟನ್ನಲ್ಲಿ ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿಗಾಗಿ ಕೈಗಾರಿಕಾ ಕ್ರಾಂತಿ ಪ್ರಾರಂಭವಾಯಿತು. ಈ ಯುಗದಲ್ಲಿ, ಸಂಶೋಧಕರ ಮುಖ್ಯ ಗಮನವು ತಾಂತ್ರಿಕ ಆವಿಷ್ಕಾರಗಳ ಮೇಲೆ ಇತ್ತು.ಇದಲ್ಲದೆ, 1700 ರ ದಶಕದಲ್ಲಿ ಪ್ರಾರಂಭವಾದ ಮತ್ತು 1920 ರ ದಶಕದಲ್ಲಿ ಪ್ರಪಂಚದ ವಿವಿಧ ಭಾಗಗಳಲ್ಲಿ ಹರಡಿದ ಗ್ರಾಹಕ ಸಂಸ್ಕೃತಿಯ ಏರಿಕೆಯು ವಿವಿಧ ವ್ಯಾಪಾರ ಸಂಸ್ಥೆಗಳನ್ನು ನವೀನ ಸರಕುಗಳು ಮತ್ತು ಸೇವೆಗಳೊಂದಿಗೆ ಬರಲು ಪ್ರೋತ್ಸಾಹಿಸಿತು. ಸಂಶೋಧನೆ ಮತ್ತು ಪ್ರಯೋಗಕ್ಕಾಗಿ ಲ್ಯಾಬ್ಗಳನ್ನು ಯುಎಸ್ ಮತ್ತು ಯುರೋಪಿಯನ್ ದೇಶಗಳಲ್ಲಿ ಸ್ಥಾಪಿಸಲಾಯಿತು, ಅವುಗಳಿಗೆ ಅನುದಾನ ನೀಡುವ ಸಂಸ್ಥೆಗಳು ಮತ್ತು ಸರ್ಕಾರಗಳಿಂದ ಧನಸಹಾಯ ನೀಡಲಾಯಿತು.

ಸಂಜೆ ಮುಗಿಲು
ಶುಕ್ರವಾರ
16.2.2024



# ಎನ್ಎಸ್ ಡಿಸಿ ಜತೆಗೆ ರಿಲಯನ್ಸ್ ಫೌಂಡೇಷನ್ ಪಾಲುದಾರಿಕೆ ಐದು ಲಕ್ಷ ಭಾರತೀಯ ಯುವಜನರಿಗೆ ಕೌಶಲ ತರಬೇತಿ

ನವದೆಹಲಿ, ರಿಲಯನ್ಸ್ ಫೌಂಡೇಷನ್ ಹಾಗೂ ರಾಷ್ಟ್ರೀಯ ಕೌಶಲ ಅಭಿವೃದ್ಧಿ ನಿಗಮವು (ಎನ್ಎಸ್ ಡಿಸಿ) ಕಾರ್ಯತಂತ್ರ ಪಾಲುದಾರಿಕೆ ವಹಿಸಿದ್ದು, ಐದು ಲಕ್ಷ ಭಾರತೀಯ ಯುವಜನರಿಗೆ ಭವಿಷ್ಯಕ್ಕೆ ಅಗತ್ಯವಾದ ಕೌಶಲಗಳೊಂದಿಗೆ ಕೋರ್ಸ್ ಗಳನ್ನು ರೂಪಿಸುವುದಕ್ಕೆ ಈ ಪಾಲುದಾರಿಕೆ ಮಾಡಿಕೊಳ್ಳಲಾಗಿದೆ. ಈ ಸಹಭಾಗಿತ್ವದಲ್ಲಿ ಪಠ್ಯಕ್ರಮದ ಅಭಿವೃದ್ಧಿ ಪಡಿಸಲಾಗುತ್ತದೆ. ಎಜುಟೆಕ್, ಸೈಬರ್ ಸೆಕ್ಯೂರಿಟಿ, ಆರ್ಟಿಫಿಷಿಯಲ್ ಇಂಟೆಲಿಜೆನ್ಸ್, ಪರಿಸರ ಸುಸ್ಥಿರತೆ, ನೀತಿ ವಿಶ್ಲೇಷಣೆ ಹಾಗೂ ಇನ್ನೂ ಹೆಚ್ಚಿನ ಕ್ಷೇತ್ರಗಳನ್ನು ಕೋರ್ಸ್ ಒಳಗೊಂಡಿದೆ. ಇವುಗಳಲ್ಲಿ ಯುವಜನರ ಸಾಮರ್ಥ್ಯ ಸೃಷ್ಟಿ ಆಗುವ ಕಡೆಗೆ ಗಮನವನ್ನು ಕೇಂದ್ರೀಕರಿಸಲಾಗುತ್ತದೆ. ಭವಿಷ್ಯದಲ್ಲಿ ಅಗತ್ಯ ಕಂಡುಬರುವ ಕೌಶಲವನ್ನು ಕಲಿಯುವ ನಿಟ್ಟಿನಲ್ಲಿ ಹೊಸ ಉದ್ಯೋಗಗಳ ಬಗ್ಗೆ ಆಸಕ್ತಿ ಇರುವ ಯುವಜನರಲ್ಲಿ ರಿಲಯನ್ಸ್ ಫೌಂಡೇಷನ್ ನ ಡಿಜಿಟಲ್ ಫಾರ್ವರ್ಡ್ ವಿಧಾನದ ನೆರವಿನೊಂದಿಗೆ ಜನಪ್ರಿಯತೆ ಗಳಿಸಬಹುದು ಎಂಬ ನಿರೀಕ್ಷೆ ಇದೆ.

ಕೇಂದ್ರ ಶಿಕ್ಷಣ ಮತ್ತು ಕೌಶಲ್ಯಭಿವೃದ್ಧಿ ಹಾಗೂ



ವಾಣಿಜ್ಯೋದ್ಯಮ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಮಾತನಾಡಿ, ''ಕೌಶಲ ಅಳವಡಿಕೆ, ಮರು ಕೌಶಲ ಮತ್ತು ಕೌಶಲಾಭಿವೃದ್ಧಿ ಮಂತ್ರವನ್ನು ಅಳವಡಿಸಿಕೊಳ್ಳುವ ಮೂಲಕ ಭಾರತವು ತಡೆಯಲು ಸಾಧ್ಯವಾಗದಷ್ಟು ಬೆಳವಣಿಗೆ ಕಾಣಲಿದೆ. ಕೌಶಲ ಪರಿಸರ ವ್ಯವಸ್ಥೆಯಲ್ಲಿನ ವಿವಿಧ ಡಿಜಿಟಲ್ ಉಪಕ್ರಮಗಳು ಎಲ್ಲಿಯೇ ಆದರೂ ಕೌಶಲ, ಯಾವುದೇ ಸಮಯದಲ್ಲಿ ಕೌಶಲ ಮತ್ತು ಎಲ್ಲರಿಗೂ ಕೌಶಲಗಳನ್ನು ಖಾತ್ರಿಪಡಿಸುತ್ತದೆ. ಭಾರತವು ಅಭಿವೃದ್ಧಿ ಹೊಂದಿದ ರಾಷ್ಟ್ರವಾಗುವತ್ತ ಸಾಗುತ್ತಿರುವಾಗ ತಂತ್ರಜ್ಞಾನ ವ್ಯಾಪ್ತಿ, ಪ್ರಮಾಣ ಮತ್ತು ಸುಸ್ಥಿರತೆಯನ್ನು ಸದುಪಯೋಗ ಮಾಡಿಕೊಳ್ಳುವ ಮೂಲಕ ಭಾರತೀಯ ಉದ್ಯೋಗಿಗಳು ದೇಶೀಯ ಬೇಡಿಕೆಯನ್ನು ಮಾತ್ರವಲ್ಲದೆ ಜಾಗತಿಕ ಬೇಡಿಕೆಯನ್ನೂ ಪೂರೈಸುತ್ತಾರೆ ಮತ್ತು ಹೊಸ ಮಾನದಂಡಗಳನ್ನು ನಿಗದಿ ಮಾಡುತ್ತಾರೆ,'' ಎಂದರು.

ಈ ಕಾರ್ಯತಂತ್ರ ಸಹಭಾಗಿತ್ವದ ಪ್ರಾಮುಖ್ಯವನ್ನು ಒತ್ತಿಹೇಳುತ್ತಾ ಮಾತನಾಡಿದ ರಿಲಯನ್ಸ್ ಫೌಂಡೇಷನ್‌ನ ಸಿಇಒ ಜಗನ್ನಾಥ ಕುಮಾರ್, ''ಭಾರತವು ವಿಶ್ವದಲ್ಲೇ ಅತಿ ಹೆಚ್ಚು ಯುವಜನತೆಯನ್ನು ಹೊಂದಿದೆ ಮತ್ತು ಅವರನ್ನು ಭವಿಷ್ಯಕ್ಕೆ ಅಗತ್ಯವಾದ ಸಿದ್ಧ ಕೌಶಲಗಳ ಜತೆಗೆ ಸನ್ನದ್ಧಗೊಳಿಸುವುದು ನಮ್ಮ ಪ್ರಯತ್ನವಾಗಿದೆ. ರಿಲಯನ್ಸ್ ಫೌಂಡೇಷನ್‌ನಲ್ಲಿ ನಾವು ನಂಬುವುದೇನೆಂದರೆ ಇದು ಅವರ ಆಕಾಂಕ್ಷೆಗಳನ್ನು ಪೂರೈಸುತ್ತದೆ ಮತ್ತು ಅವರ ಗುರಿಗಳನ್ನು ಸಾಧಿಸಲು ಸಹಾಯ ಮಾಡುತ್ತದೆ. ಎನ್ ಎಸ್ ಡಿಸಿ ಜತೆಗಿನ ಪಾಲುದಾರಿಕೆ ಯುವಜನರಿಗೆ ಕೌಶಲ ಕಲಿಯುವುದಕ್ಕೆ ಸಹಾಯ ಮಾಡುತ್ತದೆ. ಇನ್ನು ಪರಿವರ್ತನೆ ಕಾಣುತ್ತಿರುವ ಉದ್ಯೋಗಗಳ ಅಗತ್ಯ ಮತ್ತು ಉದ್ಯೋಗದ ಅವಕಾಶಗಳಿಗೆ ತಕ್ಕಂತೆ ಸಹಾಯ ಆಗುತ್ತದೆ. ರಿಲಯನ್ಸ್ ಫೌಂಡೇಷನ್ ಮತ್ತು ಎನ್ಎಸ್ ಡಿಸಿ ಒಂದೇ ಥರದ ದೃಷ್ಟಿಕೋನ ಮತ್ತು ಉದ್ದೇಶದೊಂದಿಗೆ ಬಂದಿವೆ. ಜತೆಗೆ ನಮ್ಮ ಯುವಜನರಿಗೆ ಕೊಡುಗೆ ನೀಡುವ ನಿಟ್ಟಿನಲ್ಲಿ ವಿಶಿಷ್ಟ ಶಕ್ತಿಯನ್ನು ಒಟ್ಟು ಮಾಡುತ್ತದೆ,'' ಎಂದರು.

ಉತ್ತಮ ಗುಣಮಟ್ಟದ ಪಠ್ಯಕ್ರಮ ರೂಪಿಸಿ ಮತ್ತು ಅಭಿವೃದ್ಧಿ ಪಡಿಸಲಾಗುತ್ತದೆ; ವಿದ್ಯಾರ್ಥಿ ಸೇವೆಗಳನ್ನು ಅಳವಡಿಸಲಾಗುತ್ತದೆ; ತರಬೇತುದಾರರ ತರಬೇತಿ; ಸಹಯೋಗಕ್ಕೆ ಬೆಂಬಲ; ಕೃತಕ ಬುದ್ಧಿಮತ್ತೆ ಸಹಾಯದ ಆನ್‌ಲೈನ್ ಮೌಲ್ಯಮಾಪನಗಳು; ಪ್ರಮಾಣಪತ್ರಗಳು ಮತ್ತು ಉದ್ಯಮಕ್ಕೆ ಸೂಕ್ತವಾದ ಪ್ಲೇಸ್ ಮೆಂಟ್ ಈ ಪಾಲುದಾರಿಕೆಯ ಅವಿಭಾಜ್ಯ ಅಂಗವಾಗಿದೆ.

## ಜಮ್ಮು–ಕಾಶ್ಮೀರದಲ್ಲಿ ಏಕಾಂಗಿ ಸ್ಪರ್ಧೆ: ಫಾರೂಖ್ ಅಬ್ದುಲ್ಲಾ



**ಜಮ್ಮು–ಕಾಶ್ಮೀರ:** ಈ ಬಾರಿ ನಡೆಯಲಿರುವ ಲೋಕಸಭೆ ಚುನಾವಣೆಯಲ್ಲಿ ತಾವು ಏಕಾಂಗಿಯಾಗಿ ಸ್ಪರ್ಧಿಸಲಿದ್ದೇವೆ. ಇಂಡಿಯಾ ಮೈತ್ರಿಕೂಟದ ಜೊತೆಗಿಲ್ಲವೆಂದು ಫಾರೂಖ್ ಅಬ್ದುಲ್ಲಾ ಹೇಳಿದ್ದಾರೆ. ಮೋದಿಯನ್ನು ಈ ಬಾರಿ ಸೋಲಿಸಲೇಬೇಕು ಎಂದು ಪಣತೊಟ್ಟಿದ್ದ ಕಾಂಗ್ರೆಸ್ ಹಲವು ಪಕ್ಷಗಳನ್ನು ಸೇರಿಸಿ, ಇಂಡಿಯಾ ಮೈತ್ರಿಕೂಟ ಕಟ್ಟಿತ್ತು. ಆದರೆ ಲೋಕಸಭೆ ಚುನಾವಣೆ ಹತ್ತಿರವಾಗುತ್ತಿದ್ದಂತೆ, ಸೀಟು ಹಂಚಿಕೆ ವಿಚಾರವಾಗಿ ಭಿನ್ನಾಭಿಪ್ರಾಯ ಶುರುವಾಗಿದ್ದು, ಹಲವು ಪಕ್ಷಗಳು ಇಂಡಿಯಾ ಮೈತ್ರಿಕೂಟದಿಂದ ಹಿಂದೆ ಸರಿಯುತ್ತಿದೆ. ಮೊದಲು ಟಿಎಂಸಿ, ಬಳಿಕ ಆಪ್, ಇದೀಗ ಎನ್ಸಿ ಪಕ್ಷಗಳು ಕಾಂಗ್ರೆಸ್ನಿಂದ ದೂರ ಸರಿದಿವೆ. ಬಂಗಾಳದಲ್ಲಿ ನಾವು ಸ್ವತಂತ್ರವಾಗಿ ಚುನಾವಣೆಗೆ ನಿಲ್ಲಲಿದ್ದೇವೆ ಎಂದು ಸಿಎಂ ಮಮತಾ ಬ್ಯಾನರ್ಜಿ ಹೇಳಿದ್ದರು. ಬಳಿಕ ಪಂಜಾ?ಬ್ನಲ್ಲಿ ಭಗವಂತ್ ಮಾನ್ ನಾವು ಕೂಡ ಏಕಾಂಗಿ ಸ್ಪರ್ಧೆ ಮಾಡಲಿದ್ದೇವೆ ಎಂದಿದ್ದರು. ಇದೀಗ ಜಮ್ಮು–ಕಾಶ್ಮೀರದಲ್ಲಿ ನಮ್ಮ ಎನ್ಸಿ ಪಕ್ಷ ಸ್ವತಂತ್ರವಾಗಿ ಸ್ಪರ್ಧಿಸಲಿದೆ ಎಂದು ಫಾರೂಖ್ ಅಬ್ದುಲ್ಲಾ ಹೇಳಿದ್ದಾರೆ. ಫಾರೂಖ್ ಅಬ್ದುಲ್ಲಾ ನೇತೃತ್ವದ ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ಮೇಲೆ ಜನ ಸಂಪೂರ್ಣ ನಂಬಿಕೆ ಇಟ್ಟಿದ್ದಾರೆ. ಹಾಗಾಗಿ ನಮ್ಮ ಪಕ್ಷ ಯಾರೊಂದಿಗೂ ಮೈತ್ರಿ ಮಾಡಿಕೊಳ್ಳದೇ, ಏಕಾಂಗಿ ಹೋರಾಟ ಮಾಡಲಿದೆ. ಇದರಲ್ಲಿ ಯಾವುದೇ ಗೊಂದಲವಿಲ್ಲವೆಂದು ಸುದ್ದಿಗೋಷ್ಠಿಯ ಮೂಲಕ ಅಬ್ದುಲ್ಲಾ ಸ್ಪಷ್ಟನೆ ನೀಡಿದ್ದಾರೆ.

## ಜಪಾನ್‌ನಲ್ಲಿ ಆರ್ಥಿಕ ಹಿಂಜರಿತ

**ಟೋಕಿಯೋ:** ಇದುವರೆಗೆ ವಿಶ್ವದ 3ನೇ ಬೃಹತ್ ಆರ್ಥಿಕತೆಯಾಗಿದ್ದ ಜಪಾನ್ ಈಗ ಆರ್ಥಿಕ ಹಿಂಜರಿತಕ್ಕೆ ಸಿಲುಕಿದ್ದು, 4ನೇ ಸ್ಥಾನಕ್ಕೆ ಕುಸಿದಿದೆ. ಪ್ರಸ್ತುತ ಇಡೀ ಜಗತ್ತಿನಲ್ಲಿ ಆರ್ಥಿಕ ಹಿಂಜರಿತದ ಸ್ಥಿತಿಯಿದೆ. 2023ರಲ್ಲಿ ಒಟ್ಟಾರೆಯಾಗಿ ಜಪಾನ್ ಜಿಡಿಪಿಯಲ್ಲಿ ಶೇ.1.9 ಏರಿಕೆಯಾಗಿದೆ. ಆದರೆ ಅಕ್ಟೋಬರ್–ಡಿಸೆಂಬರ್ ಅವಧಿಯಲ್ಲಿ ಶೇ.0.4, ಅದಕ್ಕೂ ಮುಂಚಿನ ಜುಲೈ–ಸೆಪ್ಟೆಂಬರ್ನಲ್ಲಿ ಶೇ.2.9ರಷ್ಟು ಕುಸಿತವಾಗಿತ್ತು. ಸತತ ಎರಡು ತ್ರೈಮಾಸಿಕಗಳ ಕುಸಿತವನ್ನು ನೋಡಿದಾಗ, ಜಪಾನ್ ತಾಂತ್ರಿಕವಾಗಿ ಹಿಂಜರಿತಕ್ಕೆ ತುತ್ತಾಗಿದೆ ಎಂದು ಹೇಳಲಾಗಿದೆ. 2010ರವರೆಗೆ ವಿಶ್ವದ 2ನೇ ಬೃಹತ್ ಆರ್ಥಿಕತೆಯಾಗಿದ್ದ ಜಪಾನ್ ನಂತರ 3ಕ್ಕೆ ಕುಸಿದಿತ್ತು. ಚೀನಾ 2ನೇ ಸ್ಥಾನ ಪಡೆದುಕೊಂಡಿತ್ತು. ಈಗ ಜಪಾನ್ 3ನೇ ಸ್ಥಾನವನ್ನೂ ಕಳೆದುಕೊಂಡು, ಅದನ್ನು ಜರ್ಮನಿಗೆ ಬಿಟ್ಟುಕೊಟ್ಟಿದೆ.ಕಾರಣವೇನು ಡಾಲರ್ ಎದುರು ಜಪಾನಿನ ಯೆನ್ ಮೌಲ್ಯ ಕುಸಿತ, ಜನಸಂಖ್ಯೆಯಲ್ಲಾದ ತೀವ್ರ ಕುಸಿತ, ಇಳಿಮುಖವಾದ ಉತ್ಪಾದಕತೆಯಿಂದ ಸಮಸ್ಯೆಯಾಗಿದೆ.

## ಅಕ್ಕಿಯೊಳಗೆ ಗೋಮಾಂಸ: ವಿಜ್ಞಾನಿಗಳ ಪ್ರಯೋಗ ಯಶಸ್ವಿ



**ಕೊರಿಯಾ:** ವಿಜ್ಞಾನಿಗಳು ಹೊಸ ರೀತಿಯ ಮಾಂಸ ಭರಿತ ಹೈಬ್ರಿಡ್ ಅಕ್ಕಿಯನ್ನು ತಯಾರಿಸಿದ್ದಾರೆ. ಅಗ್ಗವಾದ ಮತ್ತು ಪರಿಸರ ಸ್ನೇಹಿಯಾಗಿರುವ ಈ ಅಕ್ಕಿಗೆ ಗೋಮಾಂಸವನ್ನು ಸೇರಿಸಲಾಗಿದೆ.

ದಕ್ಷಿಣ ಕೊರಿಯಾದ ವಿಜ್ಞಾನಿಗಳು ತಯಾರಿಸಿರುವ ಸೆಲ್–ಕಲ್ಚರ್ಡ್ ಪ್ರೊಟೀನ್ ರೈಸ್ನಿಂದ ನಮಗೆ ಅಗತ್ಯವಿರುವ ಎಲ್ಲಾ ಪೋಷಕಾಂಶಗಳನ್ನು ಪಡೆದುಕೊಳ್ಳಬಹುದು ಎಂದು ಯೋನ್ಸೆ ವಿಶ್ವವಿದ್ಯಾಲಯದ ಪ್ರಮುಖ ಲೇಖಕ ಸೋಹಿಯಾನ್ ಪಾರ್ಕ್ ಹೇಳಿದ್ದಾರೆ.

ಪ್ರಯೋಗಾಲಯದಲ್ಲಿ ಬೆಳೆಯುವ ಈ ಅಕ್ಕಿಯು ಗೋಮಾಂಸ, ಸ್ನಾಯು ಮತ್ತು ಕೊಬ್ಬಿನ ಕೋಶಗಳಿಂದ ತುಂಬಿರುತ್ತದೆ. ಅಕ್ಕಿಗೆ ಮೀನಿನ ಜೆಲಾಟಿನ್ ಬಳಸಿ ಬಳಿಕ ದನದ ಕೋಶಗಳು ಅಂಟಿಸಲಾಗುತ್ತದೆ. ಇದರ ತಯಾರಿ ಪ್ರಕ್ರಿಯೆಗೆ 11 ದಿನಗಳು ಬೇಕಾಗುತ್ತದೆ.

ಈ ಅಕ್ಕಿಯು ಭವಿಷ್ಯದಲ್ಲಿ ಕ್ಷಾಮ ಎದುರಾದಾಗ ಬಳಸಬಹುದು. ಮಿಲಿಟರಿಯವರಿಗೆ ಪಡಿತರವಾಗಿ ಕೊಡಬಹುದು. ಬಾಹ್ಯಾಕಾಶದಲ್ಲಿ ಬಳಸಬಹುದು. ಆದರೆ ಇದು ಮಾರುಕಟ್ಟೆಗೆ ಬಂದರೆ ಗ್ರಾಹಕರು ಖರೀದಿ ಮಾಡುವರೇ ಎಂಬುದನ್ನು ಕಾದು ನೋಡಬೇಕು. ಎಂದು ಸಂಶೋಧಕರು ಹೇಳುತ್ತಾರೆ.

ಹೈಬ್ರಿಡ್ ಅಕ್ಕಿಯು ಸಾಮಾನ್ಯ ಅಕ್ಕಿಗಿಂತ ಸ್ವಲ್ಪ ಗಟ್ಟಿಯಾಗಿರುತ್ತದೆ ಮತ್ತು ದುರ್ಬಲವಾಗಿರುತ್ತದೆ. ಆದರೆ ಹೆಚ್ಚು ಪ್ರೋಟೀನ್ ಅನ್ನು ಹೊಂದಿರುತ್ತದೆ. ಇದು ಶೇ. 8ಕ್ಕಿಂತ ಹೆಚ್ಚು ಪ್ರೋಟೀನ್ ಮತ್ತು ಶೇ. 7ಕ್ಕಿಂತ ಹೆಚ್ಚು ಕೊಬ್ಬನ್ನು ಹೊಂದಿದೆ.

## ಮಾಲ್ಡೀವ್ಸ್‌ನಿಂದ 43 ಮಂದಿ ಭಾರತೀಯರ ಗಡಿಪಾರು!

**ಮಾಲ್ಡೀವ್ಸ್:** ವೀಸಾ ನಿಯಮ ಉಲ್ಲಂಘನೆ, ಮಾದಕವಸ್ತು ಅಕ್ರಮ ಮಾರಾಟದಂಥ ಆರೋಪಗಳಿಗೆ ಸಂಬಂಧಿಸಿ 186 ವಿದೇಶಿಯರನ್ನು ಮಾಲ್ಡೀವ್ಸ್ ಗಡಿಪಾರು ಮಾಡಿದೆ. ಅವರಲ್ಲಿ 43 ಮಂದಿ ಭಾರತೀಯರಿದ್ದಾರೆ ಎಂದು ಅಲ್ಲಿಯ ಮಾಧ್ಯಮವೊಂದು ವರದಿ ಮಾಡಿದೆ.

ಗಡಿಪಾರಾದವರಲ್ಲಿ ಹೆಚ್ಚಿನವರು ಬಾಂಗ್ಲಾದೇಶೀಯರು (83 ಮಂದಿ). ನಂತರದ ಸ್ಥಾನದಲ್ಲಿ ಭಾರತ, ಶ್ರೀಲಂಕಾ (25), ನೇಪಾಳದ (8) ಪ್ರಜೆಗಳಿದ್ದಾರೆ. ಗಡಿಪಾರು ಮಾಡಿರುವ ದಿನಾಂಕ ಇನ್ನೂ ತಿಳಿದುಬಂದಿಲ್ಲ ಎಂದು 'ಅಧಾಧು' ಮಾಧ್ಯಮ ವರದಿ ಮಾಡಿದೆ.



ಈ ಕುರಿತು ಮಾಲ್ಡೀವ್ಸ್ನ ಆಂತರಿಕ ಭದ್ರತಾ ಸಚಿವ ಅಲಿ ಇಹುಸನ್ ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ್ದಾರೆ. ವಿವಿಧ ಹೆಸರುಗಳಲ್ಲಿ ಅಕ್ರಮವಾಗಿ ನಡೆಸಲಾಗುತ್ತಿರುವ ವ್ಯಾಪಾರಗಳ ವಿರುದ್ಧ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ಭದ್ರತಾ ಸಚಿವಾಲಯ ಮತ್ತು ಅರ್ಥ ಸಚಿವಾಲಯ ಜಂಟಿಯಾಗಿ ಕೆಲಸ ಮಾಡುತ್ತಿವೆ ಎಂದರು. ವಿದೇಶಿಗರು ಕ್ರಿಮಿನಲ್ ಅಪರಾಧಗಳಲ್ಲಿ ಭಾಗಿಯಾಗಿದ್ದಾರೆಯೇ ಎಂದು ತಿಳಿಯಲು ಹಲವಾರು ಕಾರ್ಯಾಚರಣೆಗಳನ್ನು ನಡೆಸಲಾಗಿದೆ. ಸಮರ್ಪಕವಾದ ದಾಖಲೆಗಳು ಮತ್ತು ಪಾಸ್ಪೋರ್ಟ್ ಹೊಂದಿರುವ ಆರೋಪಿಗಳನ್ನು ಗಡಿಪಾರು ಮಾಡಲಾಗಿದೆ ಎಂದು ತಿಳಿಸಿದ್ದಾರೆ.

## ಬಲೂಚಿಸ್ತಾನದಲ್ಲಿ ಗುಂಡಿನ ದಾಳಿ; ಇಬ್ಬರ ಸಾವು

ಇಸ್ಲಾಮಾಬಾದ್: ಪಾಕಿಸ್ತಾನದ ಬಲೂಚಿಸ್ತಾನದಲ್ಲಿ ನಡೆದ ಮರು ಮತ ಎಣಿಕೆ ವೇಳೆ ಎರಡು ರಾಜಕೀಯ ಪಕ್ಷಗಳ ಬೆಂಬಲಿಗರ ನಡುವೆ ಘರ್ಷಣೆ ಉಂಟಾಗಿದ್ದು, ಗುಂಡಿನ ದಾಳಿಗೆ ಇಬ್ಬರ ಸಾವಾಗಿದೆ. ಘಟನೆಯಲ್ಲಿ 14 ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ಕರಾಚಿಯ ಗಡಿಯಲ್ಲಿರುವ ಕೈಗಾರಿಕಾ ಪಟ್ಟಣವಾದ ಹಬ್ನಲ್ಲಿರುವ ಚುನಾವಣಾಧಿಕಾರಿ ಕಚೇರಿಯ ಮುಂಭಾಗ ಬಲೂಚಿಸ್ತಾನ್ ಅವಾಮಿ ಪಾರ್ಟಿ ಮತ್ತು ಪಾಕಿಸ್ತಾನ್ ಪೀಪಲ್ಸ್ ಪಾರ್ಟಿ ಬೆಂಬಲಿಗರ ನಡುವೆ ಘರ್ಷಣೆ ಸಂಭವಿಸಿದೆ. ಈ ವೇಳೆ ಇಬ್ಬರ ಸಾವಾಗಿದೆ.

ಫೆಬ್ರವರಿ 8 ರಂದು ಚುನಾವಣೆಯ ಬಳಿಕ ಬಿಎಪಿಯ ಮುಹಮ್ಮದ್ ಸಲೇಹ್ ಭೂತಾನಿ ಅನಧಿಕೃತ ಫಲಿತಾಂಶಗಳ ಆಧಾರದ ಮೇಲೆ ವಿಜಯವನ್ನು ಘೋಷಿಸಿದರು. ಆದರೆ ಪಿಪಿಪಿಯ ಅಲಿ ಹಸನ್ ಜೆಹ್ರಿ ಫಲಿತಾಂಶವನ್ನು ನಿರಾಕರಿಸಿ ಮತ ಮರುಎಣಿಕೆಗೆ ವಿನಂತಿಸಿದರು. ಪರಿಣಾಮ ಪಾಕಿಸ್ತಾನದ ಚುನಾವಣಾ ಆಯೋಗ ಮತ ಮರು ಎಣಿಕೆಯನ್ನು ಕಡ್ಡಾಯಗೊಳಿಸಿತು.

ಬುಧವಾರ 39 ಮತಗಟ್ಟೆಗಳ ಮತಗಳನ್ನು ಮರು ಎಣಿಕೆ ಮಾಡುವಾಗ ಘರ್ಷಣೆ ನಡೆದಿದೆ.



## ಗುಂಡಿಕ್ಕಿ ಮೋಟೆಲ್ ಮಾಲೀಕ ಪ್ರವೀಣ್ ರಾವ್ ಪಟೇಲ್ ಹತ್ಯೆ



**ಅಲಬಾಮಾ:** ಅಮೆರಿಕದ ಅಲಬಾಮಾದಲ್ಲಿ ಬಾಡಿಗೆ ರೂಮಿನ ವಿಚಾರವಾಗಿ ನಡೆದ ಜಗಳದ ವೇಳೆ ಗ್ರಾಹಕರೊಬ್ಬರು ಗುಂಡು ಹಾರಿಸಿದ್ದರಿಂದ ಭಾರತೀಯ ಮೂಲದ ಮೋಟೆಲ್ ಮಾಲಕರೊಬ್ಬರು ಹತ್ಯೆಗೀಡಾಗಿದ್ದು, ಸಮುದಾಯದ ವಿರುದ್ಧ ನಡೆದ ಹಿಂಸಾತ್ಮಕ ಘಟನೆಗಳು ಭಾರತೀಯರನ್ನು ಬೆಚ್ಚಿಬೀಳಿಸುವಂತೆ ಮಾಡಿದೆ. 76 ವರ್ಷದ ಪ್ರವೀಣ್ ರಾವ್ ಜಿ ಭಾಯ್ ಪಟೇಲ್ ಅವರು ಶೆಫೀಲ್ಡ್ ನಲ್ಲಿರುವ ಹಿಲ್ ಕ್ರೆಸ್ಟ್ ಮೋಟೆಲ್ನ ಮಾಲೀಕರಾಗಿದ್ದರು. ಕಳೆದ ವಾರ ಅವರನ್ನು ಗುಂಡಿಕ್ಕಿ ಕೊಲ್ಲಲಾಯಿತು. ವಿಲಿಯಂ ಜೆರೆಮಿ ಮೂರ್(34) ಎಂಬಾತ ಪಟೇಲ್ ಮೇಲೆ ಗುಂಡಿನ ದಾಳಿ ನಡೆಸಿದ್ದು, ಆತನನ್ನು ಬಂಧಿಸಲಾಯಿತು. ಮೂರ್ ಕೋಣೆಯನ್ನು ಬಾಡಿಗೆಗೆ ಪಡೆಯಲು ಬಂದ ವೇಳೆ ವಾಗ್ವಾದ ನಡೆದು ಮೂರ್ ಗನ್ ತೆಗೆದು ಮೋಟೆಲ್ ಮಾಲೀಕರಿಗೆ ಗುಂಡು ಹಾರಿಸಿದರು ಎಂದು ಶೆಫೀಲ್ಡ್ ಪೊಲೀಸ್ ಮುಖ್ಯಸ್ಥ ರಿಕಿ ಟೆರ್ರಿ ಹೇಳಿದ್ದಾರೆ. ಮೂರ್ ಅವರು 13 ನೇ ಅವೆನ್ಯೂದಲ್ಲಿ ಮನೆಗೆ ಪ್ರವೇಶಿಸಲು ಪ್ರಯತ್ನಿಸುತ್ತಿದ್ದಾಗ ಶೆಫೀಲ್ಡ್ ಪೊಲೀಸರು ಬಂಧಿಸಿದ್ದಾರೆ. ಅವರ ಬಳಿ ಗನ್ ಪತ್ತೆಯಾಗಿದೆ.

## ಸಂಸದೆ ಸ್ಥಾನಕ್ಕೆ ಮಿಮಿ ಚಕ್ರವರ್ತಿ ರಾಜೀನಾಮೆ





ನವದೆಹಲಿ: ಪಶ್ಚಿಮ ಬಂಗಾಳದ ತೃಣಮೂಲ ಕಾಂಗ್ರೆಸ್ ಸಂಸದೆ ಮಿಮಿ ಚಕ್ರವರ್ತಿ ಸ್ಥಳೀಯ ಪಕ್ಷದ ನಾಯಕತ್ವದ ವಿರುದ್ಧ ರಾಜೀನಾಮೆ ನೀಡುವುದಾಗಿ ಘೋಷಿಸಿದ್ದಾರೆ. ಇನ್ನು ತಮ್ಮ ರಾಜೀನಾಮೆಯನ್ನ ತೃಣಮೂಲ ಕಾಂಗ್ರೆಸ್ ಮುಖ್ಯಸ್ಥೆ ಮಮತಾ ಬ್ಯಾನರ್ಜಿಗೆ ಹಸ್ತಾಂತರಿಸಿದ್ದಾರೆ.

2019 ರ ಲೋಕಸಭಾ ಚುನಾವಣೆಯಲ್ಲಿ ಮಿಮಿ ಚಕ್ರವರ್ತಿ ಜಾದವ್ಪುರ ಸ್ಥಾನವನ್ನು ಗೆದ್ದರು. ಆದಾಗ್ಯೂ, ಅವರು ತಮ್ಮ ರಾಜೀನಾಮೆಯನ್ನು ಲೋಕಸಭಾ ಸ್ಪೀಕರ್ಗೆ ಕಳುಹಿಸದ ಕಾರಣ ಇದು ಅವರ ಔಪಚಾರಿಕ ರಾಜೀನಾಮೆ ಎಂದು ಪರಿಗಣಿಸಲಾಗುವುದಿಲ್ಲ.

## ಕ್ಯಾನ್ಸರ್ ಲಸಿಕೆ ಲಭ್ಯ: ರಷ್ಯಾ ಅಧ್ಯಕ್ಷ ಘೋಷಣೆ!

**ನವದೆಹಲಿ:** ರಷ್ಯಾದ ವಿಜ್ಞಾನಿಗಳು ಕ್ಯಾನ್ಸರ್ಗೆ ಲಸಿಕೆಗಳನ್ನು ರಚಿಸಲು ಹತ್ತಿರದಲ್ಲಿದ್ದಾರೆ ಎಂದು ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಬುಧವಾರ (ಸ್ಥಳೀಯ ಸಮಯ) ಹೇಳಿದ್ದಾರೆ. ಹೊಸ ಪೀಳಿಗೆಗಾಗಿ ಕ್ಯಾನ್ಸರ್ ಲಸಿಕೆಗಳು ಮತ್ತು ಇಮ್ಯುನೊಮೋಡ್ಯುಲೇಟರಿ ಔಷಧಿಗಳ ಸೃಷ್ಟಿಗೆ ನಾವು ಬಹಳ ಹತ್ತಿರದಲ್ಲಿದ್ದೇವೆ ಎಂದು ಪುಟಿನ್ ದೂರದರ್ಶನದಲ್ಲಿ ನೀಡಿರುವ ಹೇಳಿಕೆಯಲ್ಲಿ ತಿಳಿಸಿದ್ದಾರೆ.ಶೀಘ್ರದಲ್ಲೇ ಅವುಗಳನ್ನು ವೈಯಕ್ತಿಕ ಚಿಕಿತ್ಸೆಯ ವಿಧಾನಗಳಾಗಿ ಪರಿಣಾಮಕಾರಿಯಾಗಿ ಬಳಸಲಾಗುವುದು ಎಂದು ನಾನು ಭಾವಿಸುತ್ತೇನೆ ಎಂದು ಅವರು ಭವಿಷ್ಯದ ತಂತ್ರಜ್ಞಾನಗಳ ಬಗ್ಗೆ ಮಾಸ್ಕೋ ವೇದಿಕೆಯಲ್ಲಿ ಮಾತನಾಡುತ್ತಾ ಹೇಳಿದರು. ಪ್ರಸ್ತಾವಿತ ಲಸಿಕೆಗಳು ಯಾವ ರೀತಿಯ ಕ್ಯಾನ್ಸರ್ ಅನ್ನು ಗುರಿಯಾಗಿಸುತ್ತವೆ ಅಥವಾ ಹೇಗೆ ಎಂದು ಪುಟಿನ್ ನಿರ್ದಿಷ್ಟಪಡಿಸಿಲ್ಲ. 2030 ರ ವೇಳೆಗೆ 10,000 ರೋಗಿಗಳನ್ನು ತಲುಪುವ ಗುರಿಯೊಂದಿಗೆ ವೈಯಕ್ತಿಕಗೊಳಿಸಿದ ಕ್ಯಾನ್ಸರ್ ಚಿಕಿತ್ಸೆಗಳನ್ನು ಒದಗಿಸುವ ಕ್ಲಿನಿಕಲ್ ಪ್ರಯೋಗಗಳನ್ನು ಪ್ರಾರಂಭಿಸಲು ಯುಕೆ ಸರ್ಕಾರ ಕಳೆದ ವರ್ಷ ಜರ್ಮನಿ ಮೂಲದ ಬಯೋಎನ್ಟೆಕ್ನೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿತು. ಔಷಧೀಯ ಕಂಪನಿಗಳಾದ ಮಾಡರ್ನಾ ಮತ್ತು ಮರ್ಕ್ ಕೋ ಪ್ರಾಯೋಗಿಕ ಕ್ಯಾನ್ಸರ್ ಲಸಿಕೆಯನ್ನು ಅಭಿವೃದ್ಧಿಪಡಿಸುತ್ತಿವೆ।



## ಇಂಡೋನೇಷ್ಯಾ ಅಧ್ಯಕ್ಷೀಯ ಚುನಾವಣೆಯಲ್ಲಿ ಪ್ರಬೊವೊ ಸುಬಿಯಾಂಟೊಗೆ ಗೆಲುವು



**ಇಂಡೋನೇಷ್ಯಾ:**ಇಂಡೋನೇಷ್ಯಾದ ರಕ್ಷಣಾ ಸಚಿವ ಪ್ರಬೊವೊ ಸುಬಿಯಾಂಟೊ ಅಧ್ಯಕ್ಷೀಯ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದಾರೆ.

ಆದಾಗ್ಯೂ, ಚುನಾವಣೆಯ ಅಧಿಕೃತ ಫಲಿತಾಂಶಗಳು ಬರಲು ಬಹಳ ಸಮಯ ತೆಗೆದುಕೊಳ್ಳಬಹುದು. 72 ವರ್ಷದ ಪ್ರಬೋವೊ ಎರಡು ಬಾರಿ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸಿದ್ದಾರೆ. ಪ್ರಸ್ತುತ ಚುನಾವಣೆಯಲ್ಲಿ ಅವರು ಶೇಕಡಾ 58 ರಷ್ಟು ಮತಗಳನ್ನು ಪಡೆಯುವ ಸಾಧ್ಯತೆಯಿದೆ. ವಿವಿಧ ಮತಗಟ್ಟೆಗಳಲ್ಲಿ ಶೇ.86ರಿಂದ 95ರಷ್ಟು ಮತಪತ್ರಗಳನ್ನು ಎಣಿಕೆ ಮಾಡಿದ ನಂತರ ಅನಧಿಕೃತ ಫಲಿತಾಂಶಗಳನ್ನು ಬಿಡುಗಡೆ ಮಾಡಲಾಗಿದೆ. ಪ್ರಬೋವೊ ಅವರ ಪ್ರತಿಸ್ಪರ್ಧಿ ಎನ್ನೆಸ್ ಬಸ್ವೆಡನ್ ಶೇ.25 ಮತ್ತು ಗಂಜರ್ ಪ್ರನೋವೊ ಶೇ.17ರಷ್ಟು ಮತಗಳನ್ನು ಪಡೆದಿದ್ದಾರೆ. ಅಂತಹ ಪರಿಸ್ಥಿತಿಯಲ್ಲಿ, ಅಂತಿಮ ಫಲಿತಾಂಶಗಳಲ್ಲಿ ಬದಲಾವಣೆಯ ಸಾಧ್ಯತೆ ತುಂಬಾ ಕಡಿಮೆ. ಆದಾಗ್ಯೂ, ಅಧಿಕೃತ ಎಣಿಕೆಯಲ್ಲಿ, ಪ್ರಬೋವೊ ಇಲ್ಲಿಯವರೆಗೆ 57.7 ಪ್ರತಿಶತದಷ್ಟು ಮತಗಳನ್ನು ಪಡೆದಿದೆ ಮತ್ತು ಕೇವಲ ಆರು ಪ್ರತಿಶತದಷ್ಟು ಮತಗಳನ್ನು ಎಣಿಕೆ ಮಾಡುವುದು ಬಾಕಿಯಿದೆ. ಫಲಿತಾಂಶಗಳಲ್ಲಿ ದೊಡ್ಡ ಮುನ್ನಡೆ ಸಾಧಿಸಿದ ನಂತರ, ಪ್ರಬೋವೊ ತನ್ನ ಬೆಂಬಲಿಗರನ್ನು ಉದ್ದೇಶಿಸಿ ಮತ್ತು ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ''ನಾವು ಅಹಂಕಾರವನ್ನು ಹೊಂದಬಾರದು. ನಾವು ಅಹಂಕಾರಿಗಳಾಗಬಾರದು. ನಾವು ವಿನಮ್ರರಾಗಿರಬೇಕು. ಈ ಗೆಲುವು ಇಂಡೋನೇಷ್ಯಾದ ಎಲ್ಲ ಜನರ ಜಯವಾಗಬೇಕು' ಎಂದು ಹೇಳಿದ್ದಾರೆ.

## ಪಾಕ್ ಯುವ ಟೆನಿಸ್ ಆಟಗಾರ್ತಿ ಜೈನಾಬ್ ಅಲಿ ನಖ್ವಿ ಕುಸಿದು ಬಿದ್ದು ಸಾವು

**ಇಸ್ಲಾಮಾಬಾದ್:** ಪಾಕಿಸ್ತಾನದ ಯುವ ಟೆನಿಸ್ ಆಟಗಾರ್ತಿ ಜೈನಾಬ್ ಅಲಿ ನಖ್ವಿ(17) ಅವರು ಹೃದಯಾಘಾತದಿಂದ ಮೃತಪಟ್ಟಿದ್ದಾರೆ. ಐಟಿಎಫ್ ಜೂನಿಯರ್ ಟೂರ್ನಮೆಂಟ್ನಲ್ಲಿ ಭಾಗವಹಿಸಲು ಜೈನಾಬ್ ಬಂದಿದ್ದರು. ಫೆಬ್ರವರಿ 12 ರಂದು, ಅಭ್ಯಾಸ ಮುಗಿಸಿ ಹೋಟೆಲ್ ಕೋಣೆಗೆ ಬಂದಾಗಸೋಮವಾರ ನಖ್ವಿ ಅವರು ಖಿಐಈ ಜೂನಿಯರ್ ಪಂದ್ಯಾವಳಿಯ ಮೊದಲು ಅಭ್ಯಾಸ ಪಂದ್ಯದಲ್ಲಿ ಆಡಿದ ಬಳಿಕ ಹೋಟೆಲ್ ಕೋಣೆಗೆ ತೆರಳಿದ್ದ ವೇಳೆ ಕುಸಿದು ಬಿದ್ದಿದ್ದಾರೆ, ಈ ವೇಳೆ ಜೊತೆಗಿದ್ದ ಆಕೆಯ ಅಜ್ಜಿ ಸಹಾಯಕ್ಕೆ ಮನವಿ ಮಾಡಿಕೊಂಡಿದ್ದಾರೆ ಬಳಿಕ ಅಲ್ಲಿದ್ದ ಮಂದಿ ಆಕೆಯನ್ನು ಕೂಡಲೇ ಆಕೆಯನ್ನು ಆಸ್ಪತ್ರೆಗೆ ದಾಖಲಿಸಿತಾದರೂ ಅಷ್ಟೊತ್ತಿಗಾಗಲೇ ಆಕೆ ಕೊನೆಯುಸಿರೆಳೆದಿದ್ದರು ಎಂದು ವೈದ್ಯರು ಹೇಳಿದ್ದಾರೆ.ಆಸ್ಪತ್ರೆಯಲ್ಲಿ ಪರೀಕ್ಷಿಸಿದ ವೈದ್ಯರು ಆಕೆ ಹೃದಯಾಘಾತಕ್ಕೆ ಒಳಗಾಗಿದ್ದರು ಎಂದು ಹೇಳಿದ್ದಾರೆ. ಜೈನಾಬ್ ಮಹಿಳಾ ಟೆನಿಸ್ ನಲ್ಲಿ ಅತ್ಯಂತ ಭರವಸೆಯ ಆಟಗಾರ್ತಿಯಾಗಿದ್ದರು ಮತ್ತು ಐಟಿಎಫ್ ಜೂನಿಯರ್ ಸ್ಪರ್ಧೆಯಲ್ಲಿ ಗೆಲ್ಲಲು ಉತ್ಸಾಹದಿಂದ ಶ್ರಮಿಸುತ್ತಿದ್ದರು'' ಎಂದು ಪಾಕಿಸ್ತಾನದ ಹಿರಿಯ ಟೆನಿಸ್ ಫೆಡರೇಶನ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಸದ್ಯ ನಖ್ವಿ ಅವರ ಮೃತದೇಹವನ್ನು ಕುಟುಂಬವು ಕರಾಚಿಗೆ ಕೊಂಡೊಯ್ದಿದೆ ಎಂದು ಮೂಲಗಳು ತಿಳಿಸಿವೆ.



Postal Registration No.KA/BGW-1823/2019-2021, Posted at Patrika Channel, RMS Bhavan, Bengaluru PSO, Mysore Road, Bengaluru- 560020, RNI No.KARKAN/2002/08054

# ಮುತ್ತಿಟ್ಟು ಅಭಿಮಾನಿಗಳಿಗೆ ಮತ್ತೇರಿಸಿದ ನಟಿ ಅನುಪಮಾ





ಕನ್ನಡವೂ ಸೇರಿದಂತೆ ಹಲವಾರು ಚಿತ್ರಗಳಲ್ಲಿ ನಟಿಸಿರುವ ನಟಿ ಅನುಪಮಾ ಪರಮೇಶ್ವರನ್ ಇದೀಗ ಟಿಲ್ಲು ಸ್ಕ್ವೇರ್ ಸಿನಿಮಾದಲ್ಲಿ ಹೊಸ ಬಗೆಯ ಪಾತ್ರ ಮಾಡಿದ್ದಾರೆ. ಸಿದ್ದು ಜೊನ್ನಲಗಡ್ಡ ಜೊತೆಯಾಗಿ ನಟಿಸಿರುವ ಅನುಪಮಾ ಅಭಿಮಾನಿಗಳಿಗೆ ಮತ್ತೇರಿಸುವಂತ ದೃಶ್ಯದಲ್ಲಿ ಕಾಣಿಸಿಕೊಂಡಿದ್ದಾರೆ.

ಬೋಲ್ಡ್ ಪಾತ್ರಗಳಲ್ಲಿ ಮಾಡಲ್ಲ ಅಂತಿದ್ದ ಈ ನಟಿ ಟಿಲ್ಲು ಸ್ಕ್ವೇರ್ ಸಿನಿಮಾದಲ್ಲಿ ಬೋಲ್ಡ್ ಆಗಿ ನಟಿಸಿದ್ದಾರೆ. ಜೊತೆಗೆ ಲಿಪ್ ಲಾಕ್ ಕೂಡ ಮಾಡಿದ್ದಾರೆ. ಈ ಹಿಂದೆ ರೌಡಿ ಬಾಯ್ಸ್ ಸಿನಿಮಾದಲ್ಲಿ ಈ ರೀತಿಯ ದೃಶ್ಯಗಳಲ್ಲಿ ಕಾಣಿಸಿಕೊಂಡಿದ್ದರೂ, ಅಭಿಮಾನಿಗಳಿಗೆ ಅಷ್ಟೇನೂ ಅವು ಮತ್ತೇರಿಸಿರಲಿಲ್ಲ.

ಟಿಲ್ಲು ಸ್ಕ್ವೇರ್ ಸ್ವೀಕೆಲ್ ಸಿನಿಮಾ. ಈ ಹಿಂದೆ 2022ರಲ್ಲಿ ಬಿಡುಗಡೆಯಾಗಿದ್ದ ಡಿಜೆ ಟಿಲ್ಲು ಸಿನಿಮಾದ ಮುಂದುವರೆದ ಭಾಗ ಇದಾಗಿದೆ. ಟಿಲ್ಲು ಸ್ಕ್ವೇರ್ ಸಿನಿಮಾದ ಟ್ರೈಲರ್ ರಿಲೀಸ್ ಆಗಿದ್ದು ಅನುಪಮಾ ಅಚ್ಚರಿ ಎನ್ನುವಂತೆ ಬೋಲ್ಡ್ ಸ್ಟೆಪ್ ಇಟ್ಟಿದ್ದಾರೆ. ಈ ಸಿನಿಮಾವನ್ನು ಮಲ್ಲಿಕ್ ರಾಮ್ ನಿರ್ದೇಶನ ಮಾಡಿದ್ದು, ಸೂರ್ಯದೇವರ ನಾಗ್ ವಂಶಿ ನಿರ್ಮಾಣ ಮಾಡಿದ್ದಾರೆ.

ಅನುಪಮಾ ಈ ಹಿಂದೆ ಈಗಲ್ ಸಿನಿಮಾದಲ್ಲಿ ನಟಿಸಿದ್ದರು. ಆ ಸಿನಿಮಾ ಸೂಪರ್ ಹಿಟ್ ಆಗಿತ್ತು. ಈ ಬೆನ್ನಲ್ಲೆ ಟಿಲ್ಲು ಸ್ಕ್ವೇರ್ ಚಿತ್ರ ಬಿಡುಗಡೆಗೆ ಸಿದ್ಧವಾಗಿದೆ. ಮಾರ್ಚ್ 29ರಂದು ವಿಶ್ವದಾದ್ಯಂತ ಬಿಡುಗಡೆ ಆಗುತ್ತಿದೆ.

### 6ನೇ ಕ್ಲಾಸ್‌ನಲ್ಲಿ ಲವ್

# ನಟಿ ಹನಿ ರೋಸ್ ಬಿಚ್ಚಿಟ್ಟ ಪ್ರೇಮ್ ಕಹಾನಿ



ಪ್ರೇಮಿಗಳ ದಿನಾಚರಣೆ ಸಂದರ್ಭದಲ್ಲಿ ತಮ್ಮ ಜೀವನದ ಫಸ್ಟ್ ಲವ್ ಬಗ್ಗೆ ಹಂಚಿಕೊಂಡಿದ್ದಾರೆ ದಕ್ಷಿಣದ ಖ್ಯಾತ ನಟಿ ಹನಿ ರೋಸ್. ತಾವು 6ನೇ ಕ್ಲಾಸ್ ನಲ್ಲಿ ಇರುವಾಗಲೇ 10ನೇ ತರಗತಿಯಲ್ಲಿ ಓದುತ್ತಿದ್ದ ಹುಡುಗನೊಬ್ಬ ತಮಗೆ ಲವ್ ಲೆಟರ್ ಕೊಟ್ಟಿದ್ದ ಎನ್ನುವುದನ್ನು ನೆನಪಿಸಿಕೊಂಡಿದ್ದಾರೆ.

ಹನಿ ರೋಸ್ ಈ ಹೇಳಿಕೆ ನೀಡುತ್ತಿದ್ದಂತೆಯೇ ನಾನಾ ರೀತಿಯ ಕಾಮೆಂಟ್ ಹರಿದು ಬಂದಿವೆ. ಇದು ಹೇಗೆ ಸಾಧ್ಯ? ಅದು 6ನೇ ತರಗತಿಯಲ್ಲಿ ಎಂದು ಹಲವರು ಕೇಳಿದ್ದಾರೆ. ಹನ್ನೆರಡನೇ ವಯಸ್ಸಲ್ಲಿ ಲವ್ ಲೆಟರ್ ಸಿಕ್ಕಿದ್ದರೂ ಇನ್ನೂ ಯಾಕೆ ಮದುವೆ ಆಗಿಲ್ಲ ಎಂದು ಕೆಲವರು ಪ್ರಶ್ನೆ ಮಾಡಿದ್ದಾರೆ.

ಹನಿ ರೋಸ್ ಬಗ್ಗೆ ಸೋಷಿಯಲ್ ಮೀಡಿಯಾದಲ್ಲಿ ನೆಗೆಟಿವ್ ಕಾಮೆಂಟ್ ಗಳನ್ನು ಹಾಕುವುದು ಇದೇ ಮೊದಲೇನೂ ಅಲ್ಲ. ಈ ಹಿಂದೆ ಅವರು ನೆಗೆಟಿವ್ ಕಾಮೆಂಟ್ ಮತ್ತು ಅಶ್ಲೀಲ ಕಾಮೆಂಟ್ ಹಾಕುವವರ ವಿರುದ್ಧ ಧ್ವನಿ ಎತ್ತಿದ್ದರು. ಈ ರೀತಿಯ ಕಾಮೆಂಟ್ ಮಾಡುವವರು ಅದನ್ನು ವೃತ್ತಿಯನ್ನಾಗಿಸಿಕೊಂಡಿದ್ದಾರೆ. ಇವರ ಸಲುವಾಗಿ ಸಮಾಜವನ್ನು ದೂಷಿಸುವ ಅಗತ್ಯವಿಲ್ಲ ಎಂದಿದ್ದರು. ತಮ್ಮ ಫೋಟೋ ಮತ್ತು ಫೋಟೋಗೆ ಕೆಟ್ಟದ್ದಾಗಿ ಕಾಮೆಂಟ್ ಹಾಕುವವರ ಬಗ್ಗೆ ಬೇಸರವನ್ನೂ ವ್ಯಕ್ತ ಪಡಿಸಿದ್ದರು.

ಸೌಂದರ್ಯಕ್ಕೆ ಮತ್ತೊಂದು ಹೆಸರೇ ಹನಿ ರೋಸ್. ಇವರು ಮಾಡಿದ ಸಿನಿಮಾಗಳಿಗಿಂತ ಇವರ ಹಾಟ್ ಹಾಟ್ ಫೋಟೋಗಳು ಸಖತ್ ಸದ್ದು ಮಾಡುತ್ತವೆ. ನಡು ವಯಸ್ಸಿಗೆ ಹತ್ತಿರವಾಗಿರುವ ಹನಿ ಸೌಂದರ್ಯದ ಬಗ್ಗೆ ಹಲವರು ಕಾಮೆಂಟ್ ಮಾಡುತ್ತಲೇ ಇರುತ್ತಾರೆ. ಅದಕ್ಕೆ ಸ್ಪಷ್ಟನೆ ಕೊಟ್ಟರೂ ಈ ಪ್ರಶ್ನೆಗಳು ಮಾತ್ರ ನಿಲ್ಲದೇ ಇರುವುದಕ್ಕೆ ಹನಿಗೆ ಬೇಸರವಿದೆಯಂತೆ.

ಮಾನಸ್ಟರ್, ಬಿಗ್ ಬ್ರದರ್, ವೀರ ಸಿಂಹ ರೆಡ್ಡಿ ಸಿನಿಮಾಗಳಲ್ಲಿ ನಾಯಕಿಯಾಗಿ ಹನಿ ರೋಸ್ ನಟಿಸಿದ್ದಾರೆ. ಮೋಹನ್ ಲಾಲ್, ಬಾಲಯ್ಯ ಅವರಂತಹ ದಿಗ್ಗಜ ನಟರಿಗೆ ನಾಯಕಿಯಾಗಿ ಮೋಡಿ ಮಾಡಿದ್ದಾರೆ. ನೋಡಲು ಫಿಟ್ ಮತ್ತು ಮುದ್ದಾಗಿರೋ ಹನಿ ರೋಸ್ ಅವರು ಶಸ್ತಚಿಕಿತ್ಸೆ ಮಾಡಿಸಿದ್ದಾರೆ. ಅದಕ್ಕೆ ಅವರು ಇಷ್ಟು ಮುದ್ದಾಗಿ ಕಾಣ್ತಿದ್ದಾರೆ ಅಂತೆಲ್ಲಾ ಸುದ್ದಿ ಹರಿದಾಡುತ್ತಲೇ ಇರುತ್ತದೆ.

ಸೋಷಿಯಲ್ ಮೀಡಿಯಾದಲ್ಲಿ ಅವರ ಬೋಲ್ಡ್ ಫೋಟೋಗಾಗಿಯೇ ಕಾಯುವ ಫ್ಯಾನ್ಸ್ ಇದ್ದಾರೆ. ಹನಿ ರೋಸ್ ಕಾಸ್ಮೆಟಿಕ್ ಸರ್ಜರಿ ಮಾಡಿಸಿಕೊಂಡಿದ್ದು, ಇದೇ ಅವರ ಸೀಕ್ರೆಟ್ ಎಂದು ಅನೇಕರು ಆರೋಪಿಸಿದ್ರು. ನಟಿ ತಾನು ಯಾವುದೇ ಶಸ್ತಚಿಕಿತ್ಸೆಗೆ ಒಳಗಾಗಿಲ್ಲ ಎಂದು ಸ್ಪಷ್ಟನೆ ಕೂಡ ನೀಡಿದ್ದರು. ನನಗೆ ದೇವರು ಈ ಅಂದ ಕೊಟ್ಟಿದ್ದು ಬಿಟ್ರೆ ಬೇರೇನೂ ಇಲ್ಲ ಎಂದಿದ್ದರು. ನಾನು ಯಾವುದೇ ಸರ್ಜರಿ ಮಾಡಿಸಿಕೊಂಡು ಸೌಂದರ್ಯ ಹೆಚ್ಚಿಸಿಕೊಂಡಿಲ್ಲ ಎಂದು ಸ್ಪಷ್ಟಪಡಿಸಿದ್ದರು.

ಸದ್ಯ ರಾಚೆಲ್ ಎಂಬ ಮಹಿಳಾ ಪ್ರಧಾನ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಭಿನ್ನವಾಗಿರುವ ಪಾತ್ರದ ಮೂಲಕ ಅಭಿಮಾನಿಗಳ ಮುಂದೆ ಬರಲಿದ್ದಾರೆ. ನಟಿ ಫಸ್ಟ್ ಲುಕ್ ಕೂಡ ಅಭಿಮಾನಿಗಳ ಗಮನ ಸೆಳೆದಿದೆ. ಕನ್ನಡ, ಮಲಯಾಳಂ ಸೇರಿದಂತೆ ಬಹುಭಾಷೆಗಳಲ್ಲಿ ರಾಚೆಲ್ ಸಿನಿಮಾ ಮೂಡಿ ಬರಲಿದೆ.

# ರಾಜಧಾನಿ ಎಕ್ಸ್‌ಪ್ರೆಸ್ ಚಿತ್ರದಲ್ಲಿ ಸಿಎಂ ಜಗನ್ ವಿಲನ್?






ರಾಜ್ಯ ಚುನಾವಣೆ ಸಮೀಪಿಸುತ್ತಿದ್ದಂತೆಯೇ ಆಂಧ್ರ ಪ್ರದೇಶದಲ್ಲಿ ಸಿನಿಮಾ ರಾಜಕಾರಣ ಕೂಡ ಅಷ್ಟೇ ವೇಗವನ್ನು ಪಡೆದುಕೊಳ್ಳುತ್ತಿದೆ. ಅಲ್ಲಿನ ರಾಜಕೀಯ ಮುಖಂಡರನ್ನು ಹೀರೋ, ವಿಲನ್ ರೀತಿಯಲ್ಲಿ ತೋರಿಸುವ ಮೂಲಕ ಸಿನಿ ರಾಜಕಾರಣಕ್ಕೆ ಮುಂದಾಗುತ್ತಿದ್ದಾರೆ ನಿರ್ದೇಶಕರು. ಈ ನಡೆಯನ್ನು ಪ್ರಶ್ನಿಸಿ ಕೆಲವರು ಹೈಕೋರ್ಟ್ ಮೆಟ್ಟಿಲು ಕೂಡ ಹತ್ತಿದ್ದಾರೆ.

ಇತ್ತೀಚೆಗಷ್ಟೇ ಆಂಧ್ರದ ಸಿಎಂ ಜಗನ್ ಮೋಹನ್ ರೆಡ್ಡಿ ಅವರನ್ನು ಹೀರೋ ಆಗಿ ತೋರಿಸಿದ್ದ ಯಾತ್ರ 2 ಚಿತ್ರ ರಿಲೀಸ್ ಆಗಿದೆ. ಈ ಸಿನಿಮಾದಲ್ಲಿ ಜಗನ್ ವಿರೋಧಿಗಳನ್ನು ವಿಲನ್ ರೀತಿಯಲ್ಲಿ ಬಿಂಬಿಸಲಾಗಿದೆ. ಚಂದ್ರ ಬಾಬು ನಾಯ್ಡು ವಿರುದ್ಧ ವ್ಯೂಹಂ ಚಿತ್ರ ರೆಡಿಯಾಗಿದೆ. ಅದು ಇನ್ನಷ್ಟೇ ಬಿಡುಗಡೆ ಆಗಬೇಕು. ಈ ನಡುವೆ ರಾಜಧಾನಿ ಫೈಲ್ಸ್ ಎನ್ನುವ ಚಿತ್ರ ಸದ್ದು ಮಾಡುತ್ತಿದೆ.

ರಾಜಧಾನಿ ಫೈಲ್ಸ್ ಸಿನಿಮಾದಲ್ಲಿ ನೇರವಾಗಿ ಜಗನ್ ಬಗ್ಗೆಯೇ ಮಾತನಾಡದೇ, ಜಗನ್ ಪಾತ್ರದ ಹೆಸರನ್ನು ಕೊಡಲಿ ನಾನಿ ಪಾತ್ರವಾಗಿಸಿದ್ದಾರೆ. ಸಚಿವೆ ರೋಜಾ ಪಾತ್ರವನ್ನೂ ಈ ಸಿನಿಮಾದಲ್ಲಿ ತರಲಾಗಿದೆ. ನಾನಿ ಮತ್ತು ಸಚಿವೆ ಕ್ಲಬ್ ಡಾನ್ಸ್ ಮಾಡುವಂತಹ ದೃಶ್ಯಗಳು ಇದರಲ್ಲಿ ಇವೆ ಎನ್ನುವುದು ಜಗನ್ ಪಕ್ಷದ ಆರೋಪ. ಹಾಗಾಗಿ ಈ ಸಿನಿಮಾವನ್ನು ರಿಲೀಸ್ ಮಾಡದಂತೆ ಜಗನ್ ಪಕ್ಷ ಕೋರ್ಟ್ ಮೆಟ್ಟಿಲು ಏರಿದೆ.

ಜಗನ್, ಚಂದ್ರಬಾಬು ನಾಯ್ಡು ಸೇರಿದಂತೆ ಹಲವಾರು ರಾಜಕೀಯ ನಾಯಕರನ್ನು ಗುರಿಯಾಗಿರಿಸಿಕೊಂಡು ಸಿನಿಮಾ ಮಾಡಲಾಗುತ್ತಿದೆ. ಇದರ ಉದ್ದೇಶ ರಾಜಕಾರಣ ಎನ್ನುವುದು ಸ್ಪಷ್ಟವಾಗಿದ್ದರೂ, ಸಿನಿಮಾ ಮೂಲಕ ರಾಜಕೀಯ ಕೆಸರೆರಚಾಟಕ್ಕೆ ತೊಡಗಿದ್ದು ದುರಂತ ಎನ್ನುತ್ತಾರೆ ಸಿನಿಮಾ ಮೇಕರ್ಸ್.

# ರೋಹಿತ್ ಬೊಂಬಾಟ್ ಶತಕ

## ಮಹಿ ಸಿಕ್ಸರ್ ದಾಖಲೆ ಮುರಿದ ಹಿಟ್‌ಮ್ಯಾನ್



ಇಂಗ್ಲೆಂಡ್ ವಿರುದ್ಧ ನಡೆಯುತ್ತಿರುವ 3ನೇ ಟೆಸ್ಟ್ ಪಂದ್ಯದ ಮೊದಲ ದಿನದ ಮೊದಲ ಇನ್ನಿಂಗ್ಸ್‌ನಲ್ಲೇ ಟೀಂ ಇಂಡಿಯಾ ನಾಯಕ ರೋಹಿತ್ ಶರ್ಮಾ ಶತಕ ಸಿಡಿಸಿದ್ದಾರೆ. ಈ ಮೂಲಕ ವಿಶೇಷ ದಾಖಲೆಗಳನ್ನೂ ಬರೆದಿದ್ದಾರೆ.

ಇಲ್ಲಿನ ಸೌರಾಷ್ಟ್ರ ಕ್ರಿಕೆಟ್ ಅಸೋಸಿಯೇಷನ್ ಸ್ಟೇಡಿಯಂನಲ್ಲಿ ನಡೆಯುತ್ತಿರುವ ಮೊದಲ ಇನ್ನಿಂಗ್ಸ್ ನಲ್ಲಿ ರೋಹಿತ್ ಶರ್ಮಾ ಶತಕ ಸಿಡಿಸುವ ಮೂಲಕ ಟೆಸ್ಟ್ ಕ್ರಿಕೆಟ್‌ನ 11ನೇ ಶತಕ ಪೂರೈಸಿದರು. 157 ಎಸೆತಗಳಲ್ಲಿ 100 ರನ್ ಸಿಡಿಸಿದ ರೋಹಿತ್ ಶರ್ಮಾ ಒಟ್ಟು 196 ಎಸೆತಗಳಲ್ಲಿ 131 ರನ್ ಬಾರಿಸಿದ್ರು.

ಈ ಮೂಲಕ ಇಂಗ್ಲೆಂಡ್ ವಿರುದ್ಧ ಟೆಸ್ಟ್ ಶತಕ ಸಿಡಿಸಿದ ಟೀಂ ಇಂಡಿಯಾದ 7ನೇ ನಾಯಕ ಎನಿಸಿಕೊಂಡರು. ಅಲ್ಲದೇ 2018ರ ನಂತರ ಇಂಗ್ಲೆಂಡ್ ವಿರುದ್ಧ ಶತಕ ಸಿಡಿಸಿದ ಮೊದಲ ಕ್ಯಾಪ್ಟನ್ ಸಹ ಎನಿಸಿಕೊಂಡರು.

**ಧೋನಿ ಹೆಸರಲ್ಲಿದ್ದ ಸಿಕ್ಸರ್ ದಾಖಲೆ ಉಡೀಸ್:** ಇಂಗ್ಲೆಂಡ್ ವಿರುದ್ಧ 3ನೇ ಟೆಸ್ಟ್‌ನ ಮೊದಲ ಇನ್ನಿಂಗ್ಸ್ ನಲ್ಲಿ 196 ಎಸೆತಗಳಲ್ಲಿ 131 ರನ್ ಬಾರಿಸಿದ ರೋಹಿತ್, 3 ಸಿಕ್ಸರ್ ಸಿಡಿಸಿ ಎಂ.ಎಸ್ ಧೋನಿ ಅವರ ಸಿಕ್ಸರ್ ದಾಖಲೆಯನ್ನೂ ಮುರಿದರು. ಟೆಸ್ಟ್ ಕ್ರಿಕೆಟ್‌ನಲ್ಲಿ ಅತಿಹೆಚ್ಚು ಸಿಕ್ಸರ್ ಬಾರಿಸಿದ ಭಾರತದ ಮೊದಲ ಹಾಗೂ ವಿಶ್ವದ 2ನೇ ಆಟಗಾರ ಎಂಬ ಖ್ಯಾತಿಗೆ ಪಾತ್ರರಾದರು. ಟೆಸ್ಟ್ ಕ್ರಿಕೆಟ್‌ನಲ್ಲಿ ಇಂಗ್ಲೆಂಡ್ ಆಟಗಾರ ಇಯಾನ್ ಮಾರ್ಗನ್ 233 ಸಿಕ್ಸರ್ ಸಿಡಿಸಿ ನಂ.1 ಸ್ಥಾನದಲ್ಲಿದ್ದರೆ, 212 ಸಿಕ್ಸರ್ ಸಿಡಿಸಿರುವ ರೋಹಿತ್ ಶರ್ಮಾ 2ನೇ ಸ್ಥಾನಕ್ಕೆ ಜಿಗಿದಿದ್ದಾರೆ. ಎಂ.ಎಸ್ ಧೋನಿ (211 ಸಿಕ್ಸರ್), ರಿಕಿ ಪಾಂಟಿಂಗ್ (171 ಸಿಕ್ಸರ್), ಬ್ರಿಂಡನ್ ಮೆಕಲಮ್ (170 ಸಿಕ್ಸರ್) ಸಿಡಿಸುವ ಕ್ರಮವಾಗಿ ಮೂರು, ನಾಲ್ಕು ಮತ್ತು 5ನೇ ಸ್ಥಾನದಲ್ಲಿದ್ದಾರೆ.

ಟಾಸ್‌ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಟೀಂ ಇಂಡಿಯಾ 33 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೀಡಾಗಿತ್ತು. ಇದರಿಂದ ಭಾರತದ ಮೊದಲ ದಿನವೇ ಆಲ್ ಔಟ್ ಆಗಲಿದೆ ಎಂದು ನಿರೀಕ್ಷಿಸಲಾಗಿತ್ತು. ಆದ್ರೆ 4ನೇ ರೋಹಿತ್ ಶರ್ಮಾ ಹಾಗೂ ರವೀಂದ್ರ ಜಡೇಜಾ ಜೋಡಿ 329 ಎಸೆತಗಳಲ್ಲಿ 204 ರನ್‌ಗಳ ಜೊತೆಯಾಟ ನೀಡಿತು. ಈ ನಡುವೆ ಸರ್ಫರಾಜ್ ಖಾನ್ ಅವರ ಅರ್ಧಶತಕವೂ ಟೀಂ ಇಂಡಿಯಾ 300 ರನ್‌ಗಳ ಗಡಿದಾಟಲು ನೆರವಾಯಿತು.

# ರಾಜ್‌ಕೋಟ್‌ನಲ್ಲಿ ರವೀಂದ್ರ ಜಡೇಜಾ ಅಜೇಯ ಶತಕ



ರಾಜ್‌ಕೋಟ್ ಟೆಸ್ಟ್‌ನಲ್ಲಿ ಟೀಂ ಇಂಡಿಯಾ ನಾಯಕ ರೋಹಿತ್ ಶರ್ಮಾ ಹೊರತಾಗಿ ಆಲ್‌ರೌಂಡರ್ ರವೀಂದ್ರ ಜಡೇಜಾ ಕೂಡ ದಿನದಾಟದಂತ್ಯಕ್ಕೆ ಅಜೇಯ ಶತಕ ಸಿಡಿಸಿ ಮಿಂಚಿದ್ದಾರೆ. ಆರಂಭದಲ್ಲೇ 3 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದ್ದ ಟೀಂ ಇಂಡಿಯಾ ಇನ್ನಿಂಗ್ಸ್‌ಗೆ ರೋಹಿತ್ ಶರ್ಮಾ ಜೊತೆ ಸೇರಿ ಜಡೇಜಾ ಬೂಸ್ಟ್ ನೀಡಿದರು.

ಸಂಕಷ್ಟದ ಪರಿಸ್ಥಿತಿಯಲ್ಲಿ ಬ್ಯಾಟಿಂಗ್‌ಗೆ ಬಂದ ರವೀಂದ್ರ ಜಡೇಜಾ ಮೊದಲು ನಾಯಕ ರೋಹಿತ್ ಶರ್ಮಾ ಜೊತೆಗೆ ಭಾರತದ ಇನ್ನಿಂಗ್ಸ್ ನಿಭಾಯಿಸಿದರು. ಇದರ ನಂತರ ಜಡೇಜಾ ತಮ್ಮ ಟೆಸ್ಟ್ ವೃತ್ತಿಜೀವನದ ನಾಲ್ಕನೇ ಶತಕವನ್ನು ಪೂರ್ಣಗೊಳಿಸಿದರು.

ಜಡೇಜಾ ಬ್ಯಾಟಿಂಗ್‌ಗೆ ಬಂದಾಗ ಭಾರತ ತನ್ನ ಮೊದಲ ಮೂರು ಪ್ರಮುಖ ವಿಕೆಟ್ ಗಳನ್ನು ಕೇವಲ 33 ರನ್‌ಗಳಿಗೆ ಕಳೆದುಕೊಂಡಿತ್ತು. ನಂತರ ರವೀಂದ್ರ ಜಡೇಜಾ ರೋಹಿತ್ ಶರ್ಮಾ ಅವರೊಂದಿಗೆ 200 ಕ್ಕೂ ಹೆಚ್ಚು ರನ್‌ಗಳ ಜೊತೆಯಾಟವನ್ನು ಮಾಡಿ ಭಾರತವನ್ನು ಬಲಿಷ್ಠ ಸ್ಥಿತಿಗೆ ತಂದರು.

2018ರಲ್ಲಿ ಭಾರತ ಪ್ರವಾಸದಲ್ಲಿದ್ದ ವೆಸ್ಟ್ ಇಂಡೀಸ್ ವಿರುದ್ಧ ರವೀಂದ್ರ ಜಡೇಜಾ ಅಜೇಯ 100 ರನ್ ಗಳಿಸಿದ್ದರು. ಇದಾದ ನಂತರ ರಾಜ್ ಕೋಟ್‌ನಲ್ಲಿ ರವೀಂದ್ರ ಜಡೇಜಾ ಅವರ ಎರಡನೇ ಬ್ಯಾಕ್ ಟು ಬ್ಯಾಕ್ ಶತಕ ಇದಾಗಿದೆ.

ಅಂದಿನ ಪಂದ್ಯದಲ್ಲಿ ಆಲ್‌ರೌಂಡರ್ ಪ್ರದರ್ಶನ ನೀಡಿದ ಜಡೇಜಾ, ಭಾರತ ಇನ್ನಿಂಗ್ಸ್ ಮತ್ತು 272 ರನ್‌ಗಳಿಂದ ವೆಸ್ಟ್ ಇಂಡೀಸ್ ಮಣಿಸುವಲ್ಲಿ ಯಶಸ್ವಿಯಾಗಿತ್ತು. ಈ ಮೈದಾನದಲ್ಲಿ ರವೀಂದ್ರ ಜಡೇಜಾ ಕೂಡ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಟ್ರಿಪಲ್ ಶತಕ ಕೂಡ ಬಾರಿಸಿದ್ದಾರೆ.

ಹೈದರಾಬಾದ್‌ನಲ್ಲಿ ನಡೆದ ಭಾರತ ಮತ್ತು ಇಂಗ್ಲೆಂಡ್ ನಡುವಿನ ಮೊದಲ ಟೆಸ್ಟ್ ಪಂದ್ಯದಲ್ಲೂ ಜಡೇಜಾ 85 ರನ್ ಕಲೆಹಾಕಿದ್ದರು. ಆದರೆ ಕೇವಲ 13 ರನ್ ಗಳಿಂದ ತಮ್ಮ ಶತಕ ವಂಚಿತರಾದರು. ಆದರೆ ಆ ಪಂದ್ಯದ ನಂತರ ಗಾಯದ ಕಾರಣ ಜಡೇಜಾ ಎರಡನೇ ಟೆಸ್ಟ್‌ನಿಂದ ಹೊರಗುಳಿದಿದ್ದರು. ಆದರೀಗ ಭರ್ಜರಿ ಪುನರಾಗಮನ ಮಾಡಿರುವ ಜಡೇಜಾ ಶತಕ ಸಿಡಿಸಿದ್ದಾರೆ.

ಜಡೇಜಾಗೂ ಮೊದಲು ನಾಯಕ ರೋಹಿತ್ ಶರ್ಮಾ ಕೂಡ 196 ಎಸೆತಗಳನ್ನು ಎದುರಿಸಿ 131 ರನ್ ಗಳ ಶತಕ ಸಿಡಿಸಿದರು. ರೋಹಿತ್ ಅವರ ಇನ್ನಿಂಗ್ ನಲ್ಲಿ 14 ಬೌಂಡರಿ ಹಾಗೂ 3 ಭರ್ಜರಿ ಸಿಕ್ಸರ್ ಕೂಡ ಸಿಡಿದವು. ಇದು ರೋಹಿತ್ ಶರ್ಮಾ ಅವರ ಟೆಸ್ಟ್ ವೃತ್ತಿ ಬದುಕಿನ 11ನೇ ಶತಕವಾಗಿತ್ತು. ಅಲ್ಲದೆ ಇದು ಟೆಸ್ಟ್ ನಾಯಕನಾಗಿ ರೋಹಿತ್ ಶರ್ಮಾ ಅವರ ಟೆಸ್ಟ್ ವೃತ್ತಿಜೀವನದ ಮೂರನೇ ಶತಕವಾಗಿದೆ.

# ಸಿಎಂ ಕಟ್ಟಿಹಾಕಲು ಬಿಜೆಪಿ ತಂತ್ರ





**ಮೈಸೂರು:** ಲೋಕಸಭೆ ಚುನಾವಣೆ ಸಮೀಪಿಸುತ್ತಿರುವಂತೆಯೇ ಸಿಎಂ ಸಿದ್ದರಾಮಯ್ಯ ಅವರನ್ನು ಕಟ್ಟಿಹಾಕಲು ಬಿಜೆಪಿ ತಂತ್ರಗಾರಿಕೆ ಹೆಣೆಯುತ್ತಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಇತ್ತೀಚೆಗಷ್ಟೇ ಮೈಸೂರಿಗೆ ಭೇಟಿ ನೀಡಿದ್ದರು. ಇದಾದ ಬೆನ್ನಲ್ಲೇ ಮೈಸೂರಿನಲ್ಲಿ ಬಿಜೆಪಿ ನಾಯಕರು ಸಕ್ರಿಯರಾಗಿದ್ದು, ರಾಜಕೀಯ ಚಟುವಟಿಕೆಗಳು ಗರಿಗೆದರಿವೆ. ಒಂದು ವೇಳೆ, ಸಿದ್ದರಾಮಯ್ಯರನ್ನು ಮೈಸೂರು ಕೊಡುಗು ಕ್ಷೇತ್ರಕ್ಕೆ ಸೀಮಿತಗೊಳಿಸಿದರೆ ಇತರ ಕ್ಷೇತ್ರಗಳಲ್ಲಿ ಬಿಜೆಪಿ ಜೆಡಿಎಸ್ ಮೈತ್ರಿಗೆ ಅನುಕೂಲವಾಗಬಹುದು ಎಂಬ ಲೆಕ್ಕಾಚಾರದಲ್ಲಿ ಕಮಲ ಪಾಳೆಯದ ನಾಯಕರಿದ್ದಾರೆ.

ಹೀಗಾಗಿಯೇ ಮೈಸೂರಿನಲ್ಲಿ ಮೊದಲಾಗಿ 'ಮೈಸೂರು ಕೊಡಗು ಲೋಕಸಭಾ ಕ್ಷೇತ್ರ'ಕ್ಕೆ ಸಂಬಂಧಿಸಿದ ಚುನಾವಣಾ ಕಾರ್ಯಾಲಯ ಉದ್ಘಾಟನೆ ಮಾಡಲಾಗಿದೆ. ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಚುನಾವಣಾ ಕಾರ್ಯಾಲಯ ಉದ್ಘಾಟನೆ ಕಾರ್ಯಕ್ರಮ ನೆರವೇರಿದೆ. ಶಾಸಕ ಡಾ. ಅಶ್ವತ್ಥ್ ನಾರಾಯಣ್, ಮಾಜಿ ಸಚಿವ ಎಸ್ ಎ ರಾಮದಾಸ್, ಸಿಹೆಚ್ ವಿಜಯ್ ಶಂಕರ್, ಮಾಜಿ ಶಾಸಕ ಎಲ್ ನಾಗೇಂದ್ರ, ರಾಜ್ಯ ಬಿಜೆಪಿ ಉಪಾಧ್ಯಕ್ಷ ರಾಜೇಂದ್ರ, ಗ್ರಾಮಾಂತರ ಜಿಲ್ಲಾಧ್ಯಕ್ಷ ಎಲ್‌ಆರ್ ಮಹದೇವಸ್ವಾಮಿ ಹಾಗೂ ಇತರರು ಕಾರ್ಯಾಲಯ ಉದ್ಘಾಟನೆ ಸಮಾರಂಭದಲ್ಲಿ ಸಂಸದ ಪ್ರತಾಪ್ ಸಿಂಹಗೆ ಸಾಥ್ ನೀಡಿದ್ದಾರೆ.

**ಫಲ ಕೊಡಲಿದೆಯೇ ಬಿಜೆಪಿ ತಂತ್ರಗಾರಿಕೆ?:** ಸಿಎಂ ಸಿದ್ದರಾಮಯ್ಯ ಅವರನ್ನು ಮೈಸೂರಿಗೆ ಸೀಮಿತ ಮಾಡುವ ಬಿಜೆಪಿ ತಂತ್ರಗಾರಿಕೆ ಫಲ ಕೊಡಲಿದೆಯೇ ಎಂಬುದನ್ನು ಕಾದು ನೋಡಬೇಕಿದೆ. ಯಾಕೆಂದರೆ, ಈ ಹಿಂದ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿಯೂ ಇಂಥದ್ದೇ ಪ್ರಯೋಗಕ್ಕೆ ಬಿಜೆಪಿ ಕೈಹಾಕಿತ್ತು. ಸಿಎಂ ಸಿದ್ದರಾಮಯ್ಯ ವಿರುದ್ಧ ವರುಣಾ ಕ್ಷೇತ್ರದಲ್ಲಿ ಪ್ರಬಲ ಅಭ್ಯರ್ಥಿ, ಮಾಜಿ ಸಚಿವ ವಿ ಸೋಮಣ್ಣ ಅವರನ್ನು ಕಣಕ್ಕಿಳಿಸಲಾಗಿತ್ತು. ಆದರೆ, ಇದನ್ನು ಸಮರ್ಥವಾಗಿ ಎದುರಿಸಿದ್ದ ಸಿದ್ದರಾಮಯ್ಯ ಗೆಲುವಿನ ನಗೆ ಬೀರಿದ್ದರು.

ವರುಣಾ ಕ್ಷೇತ್ರದ ಪೂರ್ಣ ಜವಾಬ್ದಾರಿಯನ್ನು ಪುತ್ರ ಯತೀಂದ್ರಗೆ ವಹಿಸಿದ್ದ ಸಿದ್ದರಾಮಯ್ಯ ರಾಜ್ಯದ ಇತರೆಡೆಗಳಲ್ಲಿ ಪ್ರವಾಸ ಮಾಡಿದ್ದರು. ಅಂತಿಮ ಹಂತದಲ್ಲಷ್ಟೇ ವರುಣಾದಲ್ಲಿ ಪ್ರಚಾರಕ್ಕೆ ತೆರಳಿದ್ದರು.

**ಲೋಕಸಭೆ ಚುನಾವಣೆಗೆ ಬೇರೆಯೇ ಲೆಕ್ಕಾಚಾರ:** ವಿಧಾನಸಭೆ ಚುನಾವಣೆಗೂ ಲೋಕಸಭೆ ಚುನಾವಣೆಗೂ ವ್ಯತ್ಯಾಸವಿದೆ. ವಿಧಾನಸಭೆ ಚುನಾವಣೆ ಸಂದರ್ಭ ವರುಣಾ ಕ್ಷೇತ್ರವೊಂದೇ ಪರಿಗಣನೆಗೆ ಬರುತ್ತದೆ. ಆದರೆ, ಲೋಕಸಭೆ ಚುನಾವಣೆಯಲ್ಲಿ ಮೈಸೂರು ಹಾಗೂ ಕೊಡಗಿನ ಅಷ್ಟೂ ಕ್ಷೇತ್ರಗಳು ಅಡಕವಾಗಿದ್ದು ತಮಗೆ ಪ್ಲಸ್ ಆಗಲಿದೆ ಎನ್ನುತ್ತಿದ್ದಾರೆ ಬಿಜೆಪಿ ನಾಯಕರು. ಹಳೆ ಮೈಸೂರು ಭಾಗದಲ್ಲಿ ಮಿತ್ರ ಪಕ್ಷ ಜೆಡಿಎಸ್ ಪ್ರಾಬಲ್ಯವೂ ಇರುವುದರಿಂದ ಸೂಕ್ತ ತಂತ್ರಗಾರಿಕೆ ರೂಪಿಸುವುದರಿಂದ ಹೆಚ್ಚು ಪ್ರಯೋಜನವಾಗಲಿದೆ. ಮೈಸೂರು ಕೊಡಗು ಲೋಕಸಭಾ ಕ್ಷೇತ್ರಕ್ಕೆ ಹೆಚ್ಚು ಗಮನ ನೀಡಿದಲ್ಲಿ ಸಿದ್ದರಾಮಯ್ಯನವರು ಸಹ ಅಲ್ಲಿಗೇ ಹೆಚ್ಚು ಗಮನ ನೀಡಬೇಕಾಗುತ್ತದೆ. ಇದು ಇತರ ಕ್ಷೇತ್ರಗಳಲ್ಲಿ ಬಿಜೆಪಿ ಜೆಡಿಎಸ್ ಮೈತ್ರಿಗೆ ನೆರವಾಗಲಿದೆ ಎಂಬುದು ಬಿಜೆಪಿ ನಾಯಕರ ಲೆಕ್ಕಾಚಾರವಾಗಿದೆ.

ಈ ಮಧ್ಯೆ, ಮೈಸೂರು ಕೊಡಗು ಲೋಕಸಭಾ ಕ್ಷೇತ್ರದ ಚುನಾವಣಾ ಕಾರ್ಯಾಲಯ ಉದ್ಘಾಟನೆ ನೆರವೇರಿಸಿ ಮಾತನಾಡಿರುವ ಸಂಸದ ಪ್ರತಾಪ್ ಸಿಂಹ ಹಲವು ಭರವಸೆಗಳನ್ನು ನೀಡಿರುವುದು ಗಮನ ಸೆಳೆದಿದೆ. ಬೆಂಗಳೂರು ಮೈಸೂರು ಮೆಟ್ರೋ, ಮೈಸೂರಿನಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ಇತ್ಯಾದಿ ಹಲವು ಭರವಸೆಗಳನ್ನು ನೀಡಿರುವ ಅವರು, ಜನ ಮತ್ತೊಮ್ಮೆ ಆಶೀರ್ವಾದ ನೀಡಬೇಕೆಂದು ಮನವಿ ಮಾಡಿದ್ದಾರೆ.

# ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ವಿಧೇಯಕ ಅಂಗೀಕಾರ



**ಬೆಂಗಳೂರು:** ವಿಧಾನಮಂಡಲ ಬಜೆಟ್ ಅಧಿವೇಶನದ ಐದನೇ ದಿನವಾದ ಇಂದೂ ಕೂಡ ಸದನದಲ್ಲಿ ಕಲಾಪ ಮುಂದುವರೆದಿದೆ. ಹಲವು ವಿಚಾರಗಳ ಬಗ್ಗೆ ವಿಪಕ್ಷ ಹಾಗೂ ಪ್ರತಿಪಕ್ಷ ನಡುವೆ ಆರೋಪ ಪ್ರತ್ಯಾರೋಪಕ್ಕೆ ಸದನ ಸಾಕ್ಷಿಯಾಗಿದೆ. ಸದ್ಯ ವಿಧಾನಸಭೆ ಕಲಾಪದಲ್ಲಿ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ (ತಿದ್ದುಪಡಿ) ವಿಧೇಯಕ ಅಂಗೀಕಾರವಾಗಿದೆ. ಸುಗ್ರೀವಾಜ್ಞೆಯನ್ನು ರಾಜ್ಯಪಾಲರು ವಾಪಸಾತಿ ಮಾಡಿ ಸದನದಲ್ಲಿ ವಿಧೇಯಕ ಮಂಡಿಸುವಂತೆ ಸೂಚಿಸಿದ್ದ ಹಿನ್ನೆಲೆಯಲ್ಲಿ ವಿಧೇಯಕ ಮಂಡಿಸಿ ಸರ್ಕಾರ ಅಂಗೀಕಾರ ಪಡೆದಿದೆ.

ಅಂಗಡಿ-ಮುಂಗಟ್ಟುಗಳ ಮುಂದೆ ಸೂಚನಾ ಫಲಕಗಳಲ್ಲಿ ಶೇ 60 ರಷ್ಟು ಕನ್ನಡ ಕಡ್ಡಾಯಗೊಳಿಸಿ ರಾಜ್ಯ ಸರ್ಕಾರ ಸಿದ್ಧಪಡಿಸಿದ್ದ ಸುಗ್ರೀವಾಜ್ಞೆಯನ್ನು ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ವಾಪಸ್ ಕಳುಹಿಸಿದ್ದರು. ಅಧಿವೇಶನ ನಿಗದಿಯಾದ ಹಿನ್ನೆಲೆ ಸರ್ಕಾರಕ್ಕೆ ವಾಪಸ್ ಕಳಿಸಿದ್ದರು. ವಿಧೇಯಕ ಮಂಡಿಸಿ ಅನುಮೋದನೆ ಪಡೆಯುವಂತೆ ಸೂಚನೆ ನೀಡಿದ್ದರು. ಅದರಂತೆಯೇ ಈಗ ವಿಧಾನಸಭೆ ಕಲಾಪದಲ್ಲಿ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ (ತಿದ್ದುಪಡಿ) ವಿಧೇಯಕ ಮಂಡಿಸಿ ಸರ್ಕಾರ ಅಂಗೀಕಾರ ಪಡೆದಿದೆ.

ಇನ್ನು ಫೆ.14ರಂದು ನಾಮಫಲಕಗಳಲ್ಲಿ ಶೇ.60ರಷ್ಟು ಕನ್ನಡ ಭಾಷೆ ಬಳಕೆಯನ್ನು ಕಡ್ಡಾಯಗೊಳಿಸುವ 'ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ತಿದ್ದುಪಡಿ ವಿಧೇಯಕ'ವನ್ನು ವಿಧಾನಸಭೆಯಲ್ಲಿ ಮಂಡಿಸಲಾಗಿತ್ತು. ವಿಧಾನಸಭೆ ಅಧಿವೇಶನದಲ್ಲಿ ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವ ಶಿವರಾಜ ತಂಗಡಗಿ ಅವರ ಪರವಾಗಿ ಗೃಹ ಸಚಿವ ಡಾ.ಜಿ.ಪರಮೇಶ್ವರ್ ವಿಧೇಯಕವನ್ನು ಮಂಡಿಸಿದ್ದರು. ವಾಣಿಜ್ಯ, ಕೈಗಾರಿಕೆ ಮತ್ತು ವ್ಯವಹಾರ ಉದ್ಯಮಗಳು, ಟ್ರಸ್ಟ್ ಗಳು, ಸಮಾಲೋಚನಾ ಕೇಂದ್ರಗಳು, ಆಸ್ಪತ್ರೆಗಳು, ಪ್ರಯೋಗಾಲಯಗಳು, ಮನೋರಂಜನಾ ಕೇಂದ್ರಗಳು, ಹೋಟೆಲ್‌ಗಳ ನಾಮಫಲಕಗಳಲ್ಲಿ ಕನ್ನಡ ಭಾಷೆಯನ್ನು ಶೇ.60ರಷ್ಟು ಪ್ರಮಾಣದಲ್ಲಿ ಪ್ರದರ್ಶಿಸುವುದನ್ನು ವಿಧೇಯಕದಲ್ಲಿ ಕಡ್ಡಾಯಗೊಳಿಸಲಾಗಿದೆ.

ಜನವರಿ 5 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ, ವ್ಯಾಪಾರ ಸಂಸ್ಥೆಗಳಲ್ಲಿ ಸೂಚನಾ ಫಲಕಗಳಲ್ಲಿ ಶೇ 60 ರಷ್ಟು ಕನ್ನಡ ಭಾಷೆಯನ್ನು ಕಡ್ಡಾಯಗೊಳಿಸುವ 'ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಕಾಯ್ದೆ'ಗೆ ತಿದ್ದುಪಡಿ ತರಲು ಸುಗ್ರೀವಾಜ್ಞೆಗೆ ಅನುಮೋದನೆ ನೀಡಲಾಗಿತ್ತು.

Printed, Published & Owned by N.Venugopal Krishna, Printed at DASHAPRAMATHI MUDRANALAYA, No.433/1, Chikkavitalenahalli Village, Thagachagere Post, Kasaba Hobli, Channapatna Taluk, Ramanagar District, Pin-562160. Published at No.15, Ground Floor, 12th Block, 5th Main, Kumara Park (West), Behind BDA Head Office, Bengaluru-560020. Editor: N.Venugopal Krishna, Mobile No.+91 94835 89085, email: sanjemugilu@gmail.com